Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 02-01-2021



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಆರತಿ ಬೆಳಗಿ, ಚಾಕೊಲೆಟ್ ನೀಡಿ ಮಕ್ಕಳನ್ನು ಸ್ವಾಗತಿಸಿದ ಶಿಕ್ಷಕರು • ಹೊಸ ವರ್ಷದಲ್ಲಿ ನವ ಹುರುಪು

# ಆತಂಕ ಮೀರಿ ಶಾಲೆಗಳತ್ತ ಚಿಣ್ಣರ ಹೆಜ್ಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಳಿರು–ತೋರಣಗಳಿಂದ ಶೃಂಗರಿಸಿದ್ದ ಪ್ರವೇಶ ದ್ವಾರಗಳು, ಆವರಣದಲ್ಲಿ ಬಣ್ಣದ ರಂಗೋಲಿಯ ಚಿತ್ತಾರ, ಸರದಿಯಲ್ಲಿ ಬಂದ ವಿದ್ಯಾರ್ಥಿಗಳು, ಹೂವು ನೀಡಿ, ಆರತಿ ಮಾಡಿ ಸ್ವಾಗತಿಸಿದ ಶಿಕ್ಷಕರು...

ನಗರದ ಶಾಲಾ-ಕಾಲೇಜುಗಳಲ್ಲಿ ಶುಕ್ರವಾರ ಕಂಡುಬಂದ ದೃಶ್ಯಗಳಿವು. ಹೊಸ ವರ್ಷದ ಮೊದಲ ದಿನ ಶಾಲೆಗೆ ಬಂದ ವಿದ್ಯಾರ್ಥಿಗಳಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಆನೇಕಲ್ ತಾಲ್ಲೂಕಿನ ಹೆನ್ನಾಗರ, ಹೆಬ್ಬಗೋಡಿ, ಚಂದಾಪುರ ಚತ್ರಖಾನೆ, ಅತ್ತಿಬೆಲೆ, ಸರ್ಜಾಪುರದ ಸರ್ಕಾರಿ ಪ್ರೌಢಶಾಲೆಗಳು ಮತ್ತು ಚಂದಾಪುರದ ಸ್ವಾಮಿ ವಿವೇಕಾನಂದ ಗ್ರಾಮಾಂತರ ಪ್ರೌಢಶಾಲೆ, ದೊಮ್ಮಸಂದ್ರದ ಸರಸ್ವತಿ ವಿದ್ಯಾ ನಿಕೇತನ ಶಾಲೆಗಳಿಗೆ ಭೇಟಿ ನೀಡಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ವಿದ್ಯಾರ್ಥಿಗಳಲ್ಲಿ ಧೈರ್ಯ ತುಂಬಿದರು. ಅವರೊಂದಿಗೆ ಸಂವಾದ ನಡೆಸಿ, ಧೈರ್ಯದಿಂದ ಶಾಲೆಗೆ ಬರುವಂತೆ ಹುರಿದುಂಬಿಸಿದರು.

'ನೆಗಡಿ, ಕೆಮ್ಮು, ಜ್ವರದಂತಹ ಸಮಸ್ಯೆಗಳು ಬಂದರೆ ಶಾಲೆಗೆ ಬರಬೇಡಿ, ಗುಣಮುಖರಾದ ನಂತರವೇ ಬನ್ನಿ' ಎಂದೂ ಸಲಹೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯ ಶಾಲೆಗಳಲ್ಲಿ ಬಿಬಿಎಂಪಿ ಶಿಕ್ಷಣ ವಿಭಾಗದ ಅಧಿಕಾರಿಗಳನ್ನು ಭೇಟಿ ನೀಡಿ ಸುರಕ್ಷತಾ ಕ್ರಮಗಳ ಪರಿಶೀಲನೆ ನಡೆಸಿದರು. ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ.ಮಂಜುನಾಥ್ ಶ್ರೀರಾಂಪುರದ ಪ್ರೌಢಶಾಲೆ ಹಾಗೂ ಪದವಿ ಪೂರ್ವಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿದರು.

**ಜಾಗೃತಿ:** ಶಾಲಾ-ಕಾಲೇಜಿಗೆ ಬರುವ ವೇಳೆ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಆಗಿಂದಾಗ್ಗೆ ಕೈಗಳನ್ನು ತೊಳೆಯಬೇಕು ಹಾಗೂ ವ್ಯಕ್ತಿಗತ ಅಂತರವನ್ನು ಕಾಯ್ದುಕೊಳ್ಳಬೇಕು ಎಂದು ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು. ಚಾಮರಾಜಪೇಟೆಯ ಸರ್ ಎಂ. ವಿಶ್ವೇಶ್ವರಯ್ಯ ಬಿಬಿಎಂಪಿ ಪ್ರೌಢಶಾಲೆಯಲ್ಲಿ ಶಿಕ್ಷಕರೊಬ್ಬರು ಕೊರೊನಾ ಸೋಂಕಿನ ವೇಷ ಧರಿಸಿ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಮೂಲಕ ಗಮನ ಸೆಳೆದರು.

ಎಲ್ಲ ಶಾಲಾ-ಕಾಲೇಜುಗಳ ಆವರಣ ಮತ್ತು ಕೊಠಡಿಗಳಲ್ಲಿ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗಿತ್ತು. ಶಾಲಾ ಕೊಠಡಿಯಲ್ಲಿ ಅಂತರ ಕಾಯ್ದುಕೊಂಡು 15 ರಿಂದ 20 ಮಕ್ಕಳಿಗಷ್ಟೇ ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ನಿರ್ದಿಷ್ಟ ಸಾಲಿನಲ್ಲಿಯೇ ಕೊಠಡಿಗಳಿಗೆ ಹೋಗಲು 'ಮಾರ್ಕಿಂಗ್' ಮಾಡಲಾಗಿತ್ತು. ಪ್ರವೇಶ ದ್ವಾರದಲ್ಲಿಯೇ ವಿದ್ಯಾರ್ಥಿಗಳ ದೇಹದ ತಾಪಮಾನ ಪರೀಕ್ಷಿಸಿ, ಒಳಗೆ ಬಿಡಲಾಗುತ್ತಿತ್ತು.

ಬಿಬಿಎಂಪಿ ಅಧೀನದ ಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿಯ ಶೇ 40ರಷ್ಟು ವಿದ್ಯಾರ್ಥಿಗಳು, ಬಿಬಿಎಂಪಿ ಪಿಯು ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿಯ ಶೇ 31 ವಿದ್ಯಾರ್ಥಿಗಳು ಶುಕ್ರವಾರ ತರಗತಿಗೆ ಹಾಜರಾದರು.

**ಖಾಸಗಿ ಶಾಲೆಗಳಲ್ಲಿಯೂ ಸಂಭ್ರಮ:** ನಗರದ ಖಾಸಗಿ ಶಾಲಾ–ಕಾಲೇಜುಗಳೂ ಶುಕ್ರವಾರ ಕಳೆಗಟ್ಟಿದ್ದವು. ಎಲ್ಲ ಮುಂಜಾಗ್ರತಾ ಕ್ರಮಗಳೊಂದಿಗೆ ತರಗತಿಗಳು ನಡೆದವು. ಹಲವು ಕಡೆಗಳಲ್ಲಿ ಕೆಲವು ಮಕ್ಕಳು ತಮ್ಮದೇ ಆದ ಸ್ಯಾನಿಟೈಸರ್ ಬಾಟಲಿಗಳನ್ನು ಜೊತೆಗಿಟ್ಟುಕೊಂಡಿದ್ದು ಕಂಡು ಬಂತು. ಮಾಸ್ಕ್ ಮರೆತು ಬಂದ ಮಕ್ಕಳಿಗೆ ಶಾಲೆಯ ಶಿಕ್ಷಕರು ಮಾಸ್ಕ್‌ಗಳನ್ನು ನೀಡಿದರು.

ಶಾಲೆಗಳಿಗೆ ತಮ್ಮ ಮಕ್ಕಳೊಂದಿಗೆ ಬಂದ ಪೋಷಕರು ಶಾಲೆಯಲ್ಲಿ ಮಕ್ಕಳಿಗಾಗಿ ಕೈಗೊಂಡಿರುವ ಕ್ರಮಗಳು, ಸ್ವಚ್ಛತೆ ಕುರಿತು ಕೈಗೊಂಡ ಕ್ರಮಗಳನ್ನು ಗಮನಿಸಿ ತಮ್ಮ ಮಕ್ಕಳ ಸುರಕ್ಷತೆಯನ್ನು ಖಾತ್ರಿ ಪಡಿಸಿಕೊಂಡು ಹೋಗುತ್ತಿದ್ದುದು ವಿಶೇಷವಾಗಿತ್ತು. ಕೆಲವು ಕಡೆಗಳಲ್ಲಿ ಶಿಕ್ಷಕರು ಆರತಿ ಬೆಳಗಿದರು. ಸಿಹಿ ತಿನ್ನಿಸಿದರು. ಚಾಕೊಲೆಟ್ ನೀಡಿ ಸ್ವಾಗತಿಸಿದರು.

### ಬಿಬಿಎಂಪಿ ಶಾಲೆ ಅಂಕಿ–ಅಂಶ

**2,190**
ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ

**860**
ಶುಕ್ರವಾರ ತರಗತಿಗೆ ಹಾಜರಾದ ವಿದ್ಯಾರ್ಥಿಗಳು

**2,140**
ದ್ವಿತೀಯ ಪಿಯು ವಿದ್ಯಾರ್ಥಿಗಳ ಒಟ್ಟು ಸಂಖ್ಯೆ

**654**
ಶುಕ್ರವಾರ ತರಗತಿಗೆ ಹಾಜರಾದ ವಿದ್ಯಾರ್ಥಿಗಳು

## ತಾತ್ಕಾಲಿಕ ವೇಳಾಪಟ್ಟಿ ಜ.6ಕ್ಕೆ ಬಿಡುಗಡೆ

'ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳ ತಾತ್ಕಾಲಿಕ ವೇಳಾಪಟ್ಟಿಯನ್ನು ಬುಧವಾರದ (ಜ.6) ವೇಳೆಗೆ ಬಿಡುಗಡೆ ಮಾಡಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಹೇಳಿದರು.

'ಉಳಿದ ದಿನಗಳಲ್ಲಿ ಮಕ್ಕಳು ಸರಾಗವಾಗಿ ಓದುವಷ್ಟು ಮತ್ತು ಮುಂದಿನ ತರಗತಿಗೆ ಹೋಗಲು ಓದಲೇಬೇಕಾಗಿರುವ ಪಠ್ಯಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮವನ್ನು ಕಡಿತಗೊಳಿಸಲಾಗುತ್ತದೆ. ಪಠ್ಯಕ್ರಮದ ವಿವರವನ್ನೂ ಬುಧವಾರ ಘೋಷಿಸಲಾಗುವುದು' ಎಂದು ಅವರು ತಿಳಿಸಿದರು.

## ಪಾಸ್ ಇದ್ದರೂ ಟಿಕೆಟ್ ತೆಗೆದುಕೊಳ್ಳಲು ಒತ್ತಡ

'ಹಿಂದಿನ ವರ್ಷದ ಪಾಸ್ ಇದ್ದರೆ ಅದನ್ನೇ ತೋರಿಸಿ ಪ್ರಯಾಣಿಸಬಹುದು ಎಂದು ಶಿಕ್ಷಣ ಸಚಿವರು ಬುಧವಾರ ಹೇಳಿದ್ದರು. ಆದರೆ, ಹಲವು ನಿರ್ವಾಹಕರು ಈ ಪಾಸ್ ತೋರಿಸಿದರೆ ನಡೆಯುವುದಿಲ್ಲ. ಟಿಕೆಟ್ ತೆಗೆದುಕೊಳ್ಳಿ ಎಂದರು' ಎಂಬುದಾಗಿ ದ್ವಿತೀಯ ಪಿಯುಸಿಯ ವಿದ್ಯಾರ್ಥಿಗಳು ಹೇಳಿದರು.

'ಸಚಿವರೇ ಹೇಳಿದ್ದಾರೆ ಎಂದರೂ ನಿರ್ವಾಹಕರು ಕೇಳಲಿಲ್ಲ. ಇಲಾಖೆಯಿಂದ ನಮಗೆ ಯಾವುದೇ ಸೂಚನೆ ಬಂದಿಲ್ಲ ಎಂದು ನಿರ್ವಾಹಕರು ಹೇಳಿದರು. ಪಾಸ್ ಇದ್ದಿದ್ದರಿಂದ ಟಿಕೆಟ್‌ಗೆ ಹಣ ತಂದಿರಲಿಲ್ಲ. ಕೊನೆಗೆ, ಸ್ನೇಹಿತರ ಬಳಿ ಸಾಲ ಪಡೆದು ಟಿಕೆಟ್ ತೆಗೆದುಕೊಳ್ಳಬೇಕಾಯಿತು' ಎಂದು ವಿದ್ಯಾರ್ಥಿ ಬಸವರಾಜ್ ಹೇಳಿದರು.

'ಹಿಂದಿನ ವರ್ಷದ ಪಾಸ್‌ಗೂ ಮಾನ್ಯತೆ ನೀಡಬೇಕು ಎಂದು ಸಾರಿಗೆ ಇಲಾಖೆಯಿಂದ ನಿರ್ವಾಹಕರಿಗೆ ಅಧಿಕೃತ ಸೂಚನೆ ನೀಡಬೇಕು' ಎಂದು ಅವರು ಒತ್ತಾಯಿಸಿದರು.

## 'ಶೇ 70ರಷ್ಟು ವಿದ್ಯಾರ್ಥಿಗಳು ಹಾಜರು ?'

'ರಾಜ್ಯದಲ್ಲಿ ಶುಕ್ರವಾರ 3 ಲಕ್ಷಕ್ಕೂ ಹೆಚ್ಚು (ಶೇ 41) ವಿದ್ಯಾರ್ಥಿಗಳು ತರಗತಿಗೆ ಹಾಜರಾಗಿದ್ದಾರೆ ಎಂದು ಶಿಕ್ಷಣ ಸಚಿವರು ಹೇಳಿದ್ದಾರೆ. ಆದರೆ, ಬಹುತೇಕ ಖಾಸಗಿ ಶಾಲೆಗಳಲ್ಲಿ ಶೇ 70ರಿಂದ ಶೇ 80ರಷ್ಟು ಮಕ್ಕಳು ಹಾಜರಾಗಿದ್ದಾರೆ' ಎಂದು ಕರ್ನಾಟಕ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದ್ದಾರೆ.

'ಎಸ್‌ಎಟಿಎಸ್ ತಂತ್ರಾಂಶದಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಸಚಿವರು ಈ ಅಂಕಿ–ಅಂಶ ನೀಡಿದ್ದಾರೆ. ಆದರೆ, ಬಹುತೇಕ ಖಾಸಗಿ ಶಾಲೆಗಳು ಎಸ್‌ಎಟಿಎಸ್‌ನಲ್ಲಿ ಹಾಜರಾತಿಯನ್ನು ನಮೂದಿಸಿರುವುದಿಲ್ಲ. ತಾಂತ್ರಿಕ ಅಡಚಣೆಗಳ ಕಾರಣ ಮತ್ತು ಮೊದಲ ದಿನವಾಗಿದ್ದರಿಂದ ಬಹುತೇಕರು ಈ ತಂತ್ರಾಂಶದಲ್ಲಿ ಮಾಹಿತಿ ದಾಖಲು ಮಾಡಿಲ್ಲ' ಎಂದು ಅವರು ತಿಳಿಸಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ


# ರೂಪಾಂತರ ವೈರಾಣು: 6ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಶುಕ್ರವಾರ ಮೂರು ಹೊಸ ಮಾದರಿಯ(ಬ್ರಿಟನ್) ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ರೂಪಾಂತರ ಕೊರೊನಾ ವೈರಾಣು ಹೊಂದಿರುವವರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಕೆಲ ದಿನಗಳ ಹಿಂದೆ ಬ್ರಿಟನ್‌ನಿಂದ ನಗರಕ್ಕೆ ಬಂದು ಕೋವಿಡ್ ಪೀಡಿತರಾದ 10ಕ್ಕೂ ಅಧಿಕ ಮಂದಿಯ ಮಾದರಿಗಳನ್ನು ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆಗಾಗಿ ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅವರಲ್ಲಿ ಮತ್ತೆ ಮೂವರಲ್ಲಿ ಹೊಸ ಮಾದರಿಯ ವೈರಾಣು ಇರುವುದು ದೃಢಪಟ್ಟಿದೆ. ಇವರಲ್ಲಿ ಒಬ್ಬರು ಬೊಮ್ಮನಹಳ್ಳಿಯ ವಲಯದವರಾಗಿದ್ದು, ಈ ಮೊದಲು ಸೋಂಕಿತರಾಗಿದ್ದ ತಾಯಿ ಮತ್ತು ಮಗಳ ಪ್ರಾಥಮಿಕ ಸಂಪರ್ಕ ಹೊಂದಿದ್ದರು. ಉಳಿದ ಇಬ್ಬರು ಕೆಲ ದಿನಗಳ ಹಿಂದೆ ಬ್ರಿಟನ್‌ನಿಂದ ಬಂದು, ಸೋಂಕಿತರಾಗಿದ್ದರು. ಅವರು ರಾಜಾಜಿನಗರ ನಿವಾಸಿಗಳಾಗಿದ್ದಾರೆ.

ಸೋಂಕಿತರಲ್ಲಿ ಪ್ರಾರಂಭಿಕ ಲಕ್ಷಣಗಳು ಕಾಣಿಸಿಕೊಂಡಿದ್ದು, ಕೆ.ಸಿ. ಜನರಲ್ ಹಾಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರ ಸಂಪರ್ಕಿತರನ್ನು ಬಿಬಿಎಂಪಿ ಅಧಿಕಾರಿಗಳು ಪತ್ತೆ ಮಾಡಲಾರಂಭಿಸಿದ್ದಾರೆ. ಪ್ರಾಥಮಿಕ ಸಂಪರ್ಕಿತರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲಾಗುತ್ತಿದೆ.



**ಸಂಪರ್ಕಿತರಿಗೆ ಸೋಂಕು:** ರಾಜಾಜಿನಗರದಲ್ಲಿ ನೆಲೆಸಿದ್ದ ತಂದೆ ಅನಾರೋಗ್ಯಕ್ಕೆ ಒಳಗಾದ ಕಾರಣ 40 ವರ್ಷದ ಮಹಿಳೆಯೊಬ್ಬರು ಬ್ರಿಟನ್‌ನಿಂದ ನಗರಕ್ಕೆ ಡಿ.20ರಂದು ಬಂದಿದ್ದರು. ಅವರು ತಾಯಿಯ ಸಂಪರ್ಕಕ್ಕೆ ಬಂದಿದ್ದರು. ಬ್ರಿಟನ್‌ನಿಂದ ಬಂದಿದ್ದ ಕಾರಣ ಡಿ.24ರಂದು ಅವರಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ಅವರು ಸೋಂಕಿತರಾಗಿರುವುದು ಖಚಿತಪಡುತ್ತಿದ್ದಂತೆಯೇ ಪ್ರಾಥಮಿಕ ಸಂಪರ್ಕಿತರಾಗಿದ್ದ ಅವರ ತಾಯಿಯನ್ನು ಡಿ.25ರಂದು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವರು ಕೂಡ ಸೋಂಕಿತರಾಗಿದ್ದರು.

ಡಿ.29ರಂದು ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆ ವರದಿಯಲ್ಲಿ ಮಹಿಳೆಯಲ್ಲಿ ಹೊಸ ಮಾದರಿಯ ವೈರಾಣು ಇರವುದು ದೃಢಪಟ್ಟಿತು. ಹೀಗಾಗಿ ಅವರ ತಾಯಿಯ ಮಾದರಿಯನ್ನೂ ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಇದರಿಂದಾಗಿ ಮಗಳ ಸಂಪರ್ಕದಿಂದ ತಾಯಿಗೂ ಹೊಸ ಮಾದರಿಯ ವೈರಾಣು ತಗುಲಿದೆ ಎನ್ನುವುದು ಖಚಿತಪಟ್ಟಿದೆ.

‘ಮಹಿಳೆಯು ತಾಯಿಯನ್ನು ಹೊರತುಪಡಿಸಿ ಬೇರೆ ಯಾರ ಸಂಪರ್ಕಕ್ಕೂ ಬಂದಿಲ್ಲ. ಅವರ ತಂದೆಯು ಐಸಿಯುನಲ್ಲಿ ಇದ್ದಾರೆ. ಅವರನ್ನು ಭೇಟಿ ಮಾಡಿರಲಿಲ್ಲ. ಸಹೋದರ ಕೂಡ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಹೀಗಾಗಿ ಅವರಿಂದ ಬೇರೆ ಯಾರಿಗೂ ವೈರಾಣು ಹರಡಿಲ್ಲ’ ಎಂದು ಬಿಬಿಎಂಪಿಯ ಪಶ್ಚಿಮ ವಲಯದ ಆರೋಗ್ಯಾಧಿಕಾರಿ ಮನೋರಂಜನ್ ಹೆಗ್ಡೆ ತಿಳಿಸಿದರು.

‘ತಾಯಿ ಮತ್ತು ಮಗಳು ಇಬ್ಬರೂ ಲಕ್ಷಣ ರಹಿತರಾಗಿದ್ದಾರೆ. ತಾಯಿಗೆ ಅಧಿಕ ರಕ್ತದೊತ್ತಡ ಸಮಸ್ಯೆಯಿದೆ. 14 ದಿನಗಳು ಕಳೆದ ಬಳಿಕ 24 ಗಂಟೆಗಳ ಅವಧಿಯಲ್ಲಿ ಎರಡು ಬಾರಿ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಲಾಗುತ್ತದೆ. ಈ ಪರೀಕ್ಷೆಗಳಲ್ಲಿ ಸೋಂಕಿತರಾಗಿಲ್ಲ ಎನ್ನುವುದು ದೃಢಪಟ್ಟ ಬಳಿಕ ಮನೆಗೆ ಕಳುಹಿಸಲಾಗುತ್ತದೆ’ ಎಂದು ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯರು ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಲಸಿಕೆ: ನಗರದ 3 ಕೇಂದ್ರಗಳಲ್ಲಿ ತಾಲೀಮು

ಬೆಂಗಳೂರು: 'ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಶನಿವಾರದಿಂದ (ಜ.2) ತಾಲೀಮು ನಡೆಸಲು ಬಿಬಿಎಂಪಿ ವ್ಯಾಪ್ತಿಯ ಎರಡು ಆರೋಗ್ಯ ಕೇಂದ್ರಗಳು ಹಾಗೂ ಬೆಂಗಳೂರು ನಗರ ಹೊರವಲಯದ ಒಂದು ಕೇಂದ್ರವನ್ನು ಗುರುತಿಸಲಾಗಿದೆ' ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ತಿಳಿಸಿದರು.

# ಲಸಿಕೆ: ನಗರದ 3 ಕೇಂದ್ರಗಳಲ್ಲಿ ತಾಲೀಮು

ಒಂದನೇ ಪುಟದಿಂದ...

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, 'ದೇಶದಾದ್ಯಂತ ಲಸಿಕೆಯ ತಾಲೀಮು (ಡ್ರೈ ರನ್) ನಡೆಯಲಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ. ಲಸಿಕೆಯ ತಾಲೀಮು ನಡೆಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ತರಬೇತಿಯನ್ನೂ ನೀಡಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ದಕ್ಷಿಣ ವಲಯದ ವಿದ್ಯಾಪೀಠದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ ಹಾಗೂ ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಅಣಕು ಕಾರ್ಯಾಚರಣೆ ನಡೆಸಲಾಗುತ್ತದೆ' ಎಂದು ವಿವರಿಸಿದರು.

'ನಗರದ ಹೊರವಲಯದಲ್ಲಿರುವ ಆನೇಕಲ್‌ನ ಹರ್ಗಾದೆಯಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಕೂಡ ಲಸಿಕೆಯ ತಾಲೀಮಿಗೆ ವ್ಯವಸ್ಥೆ ಮಾಡಲಾಗಿದೆ. 2 ಗಂಟೆಗಳ ಅವಧಿ ತಾಲೀಮು ನಡೆಯಲಿದ್ದು, ಪ್ರತಿ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ 25 ಮಂದಿ ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ. ಮೂರು ಕೇಂದ್ರಗಳಿಂದ ಒಟ್ಟು 75 ಕಾರ್ಯಕರ್ತರನ್ನು ಪೂರ್ವಾಭ್ಯಾಸಕ್ಕೆ ಒಳಪಡಿಸಲಾಗುತ್ತದೆ. ತಾಲೀಮು ನಡೆಸಿರುವ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತದೆ' ಎಂದು ಹೇಳಿದರು.

'ಕೋವಿಡ್ ಕಾಯಿಲೆಗೆ ಲಸಿಕೆ ನೀಡಲು ನಗರದಲ್ಲಿ ಒಟ್ಟು 1,517 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದೆ. ಜನವರಿ ಅಂತ್ಯ ಅಥವಾ ಫೆಬ್ರುವರಿ ಮೊದಲ ವಾರದಲ್ಲಿ ಲಸಿಕೆ ನೀಡುವ ಕಾರ್ಯಕ್ರಮ ಪ್ರಾರಂಭಿಸಲು ಯೋಜನೆ ರೂಪಿಸಲಾಗಿದೆ' ಎಂದು ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಬ್ರಿಟನ್ ಪ್ರಯಾಣಿಕರು: 80 ಮಂದಿ ವರದಿ ಬಾಕಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯಕ್ಕೆ ಬ್ರಿಟನ್‌ನಿಂದ ಬಂದವರಲ್ಲಿ ಈವರೆಗೆ 2,106 ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ. ಅವರಲ್ಲಿ ಶುಕ್ರವಾರ ಪರೀಕ್ಷೆ ಮಾಡಿಸಿಕೊಂಡ 77 ಮಂದಿ ಸೇರಿದಂತೆ ಒಟ್ಟು 80 ಮಂದಿ ವರದಿಗಾಗಿ ಎದುರು ನೋಡುತ್ತಿದ್ದಾರೆ.

ಪರೀಕ್ಷೆಗೆ ಒಳಪಟ್ಟ ಬ್ರಿಟನ್ ಪ್ರಯಾಣಿಕರಲ್ಲಿ 1,993 ಮಂದಿ ಸೋಂಕಿತರಾಗಿಲ್ಲ ಎಂಬುದು ದೃಢಪಟ್ಟಿದೆ. ಈವರೆಗೆ 33 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ರಾಜ್ಯಕ್ಕೆ ನ.25ರ ಬಳಿಕ 5,068 ಮಂದಿ ಬ್ರಿಟನ್‌ನಿಂದ ಬಂದಿದ್ದು, ಅವರನ್ನು ಆರೋಗ್ಯ ಸಿಬ್ಬಂದಿ ಪತ್ತೆ ಮಾಡುತ್ತಿದ್ದಾರೆ.

ರಾಜ್ಯದಲ್ಲಿ ಹೊಸದಾಗಿ 877 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.20 ಲಕ್ಷ ದಾಟಿದೆ. ಸೋಂಕಿತರಲ್ಲಿ 6 ಮಂದಿ ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,096ಕ್ಕೆ ತಲುಪಿದೆ. ಒಂದೇ ದಿನ 1.08 ಲಕ್ಷ ಆರ್‌ಟಿ–ಪಿಸಿಆರ್ ಸೇರಿದಂತೆ 1.17 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 1.41 ಕೋಟಿ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ. ಕೋವಿಡ್ ಪೀಡಿತರಲ್ಲಿ ಮತ್ತೆ 1,084 ಮಂದಿ ಗುಣಮುಖರಾಗಿದ್ದು, ಇದರಿಂದಾಗಿ ಚೇತರಿಸಿಕೊಂಡವರ ಸಂಖ್ಯೆ 8.97 ಲಕ್ಷಕ್ಕೆ ತಲುಪಿದೆ.

ಸೋಂಕಿತರಲ್ಲಿ ಸದ್ಯ 11,058 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 189 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ. ಕಳೆದ 14 ದಿನಗಳ ಅವಧಿಯಲ್ಲಿ 67 ಸಾವಿರ ನೇರ ಸಂಪರ್ಕಿತರು ಹಾಗೂ 77 ಸಾವಿರ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ಮತ್ತೆ 464 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.88 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 26 ಪ್ರಕರಣಗಳು ವರದಿಯಾಗಿದೆ. ಅಲ್ಲಿ ಸೋಂಕಿತರ ಸಂಖ್ಯೆ 52,420ಕ್ಕೆ ತಲುಪಿದೆ. ಚಿತ್ರದುರ್ಗದಲ್ಲಿ 39, ತುಮಕೂರಿನಲ್ಲಿ 32, ಚಿಕ್ಕಬಳ್ಳಾಪುರದಲ್ಲಿ 29, ಬೆಂಗಳೂರು ಗ್ರಾಮಾಂತರದಲ್ಲಿ 28, ದಕ್ಷಿಣ ಕನ್ನಡದಲ್ಲಿ 27 ಪ್ರಕರಣಗಳು ವರದಿಯಾಗಿವೆ. ರಾಜ್ಯದ 27 ಜಿಲ್ಲೆಯಲ್ಲಿ ಹೊಸದಾಗಿ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

ಕನ್ನಡಪ್ರಭ

# ಬ್ರಿಟನ್‌ಗೆ ಹೋಗದವರಿಗೂ ಅಂಟಿತು 'ಹೈಸ್ಪೀಡ್ ವೈರಸ್'!

## ಬ್ರಿಟನ್ನಿಂದ ಮರಳಿದ ಮಹಿಳೆಯ ತಾಯಿಗೂ ಸೋಂಕು

## ರಾಜ್ಯದಲ್ಲಿ ಮತ್ತೆ ಮೂವರಿಗೆ ವೈರಸ್ | ಸಂಖ್ಯೆ 10ಕ್ಕೇರಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಮತ್ತೆ ಮೂರು ಮಂದಿಯಲ್ಲಿ ಬ್ರಿಟನ್‌ನ ರೂಪಾಂತರಿ ಕೊರೋನಾ ವೈರಸ್ ಪತ್ತೆಯಾಗಿದೆ. ಈ ಪೈಕಿ, ಬ್ರಿಟನ್‌ಗೆ ತೆರಳದಿದ್ದರೂ ಒಬ್ಬರು ಸ್ಥಳೀಯರಿಗೆ ಇದೇ ಮೊದಲ ಬಾರಿ ರೂಪಾಂತರಿ ಸೋಂಕು ದೃಢಪಟ್ಟಿದೆ. ಈ ಮೂಲಕ ರಾಜ್ಯದಲ್ಲೂ ಬ್ರಿಟನ್‌ನ ಹೈಸ್ಪೀಡ್ ಸೋಂಕಿನ ಸ್ಥಳೀಯ ಹರಡುವಿಕೆ ಆರಂಭವಾಗಿರುವ ಆತಂಕ ಸೃಷ್ಟಿಸಿದೆ. ಏತನ್ಮಧ್ಯೆ, ರಾಜ್ಯದಲ್ಲಿ ಒಟ್ಟಾರೆ ಬ್ರಿಟನ್‌ನ ರೂಪಾಂತರಿ ವೈರಸ್ ಸೋಂಕಿತರ ಸಂಖ್ಯೆ 10ಕ್ಕೇರಿದೆ.

**ಮೂವರೂ ಬೆಂಗಳೂರಿಗರು:** ಶುಕ್ರವಾರ ಸೋಂಕು ದೃಢಪಟ್ಟಿರುವ ಮೂರು ಮಂದಿ ಪೈಕಿ ಒಬ್ಬರು ಬೆಂಗಳೂರಿನ ಬೊಮ್ಮನಹಳ್ಳಿ ವಲಯ ಹಾಗೂ ಮತ್ತಿಬ್ಬರು ಪಶ್ಚಿಮ ವಲಯದ ರಾಜಾಜಿನಗರ ನಿವಾಸಿಗಳಾಗಿದ್ದಾರೆ. ರಾಜಾಜಿನಗರ 1ನೇ ಬ್ಲಾಕ್ ಮೂಲದ 40 ವರ್ಷದ ಪುತ್ರಿ ಡಿ.19 ರಂದು ಬ್ರಿಟನ್‌ನಿಂದ ಬೆಂಗಳೂರಿಗೆ ಆಗಮಿಸಿದ್ದರು. ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತಂದೆಯ ಆರೋಗ್ಯ ವಿಚಾರಿಸಲು ಬಂದ ಪುತ್ರಿಯಿಂದ ಅವರ ತಾಯಿಗೆ ಕೊರೋನಾ ಸೋಂಕು ಉಂಟಾಗಿತ್ತು.

**29 ಕೇಸ್:** ದೇಶಾದ್ಯಂತ ಈವರೆಗೆ ಬ್ರಿಟನ್ ಸೋಂಕು ತಗುಲಿದವರು

**10 ಕೇಸ್:** ದೇಶದಲ್ಲೇ ಅತಿ ಹೆಚ್ಚು ಪ್ರಕರಣ (10) ಕರ್ನಾಟಕದಲ್ಲಿ

↘ 11

ಕನ್ನಡಪ್ರಭ

# ಲಸಿಕೆಗೆ ತಜ್ಞರ ಗ್ರೀನ್ ಸಿಗ್ನಲ್

## ದೇಶದಲ್ಲಿ ಕೋವಿಶೀಲ್ಡ್ ತುರ್ತು ಬಳಕೆಗೆ ಶಿಫಾರಸು

## ಕೇಂದ್ರ ಔಷಧ ಸಂಸ್ಥೆ ಒಪ್ಪಿದ್ರೆ 10 ದಿನದಲ್ಲಿ ವಿತರಣೆ?

**ನವದೆಹಲಿ:** ಅತಿ ಹೆಚ್ಚು ಕೊರೋನಾ ಸೋಂಕಿತರನ್ನು ಹೊಂದಿರುವ ವಿಶ್ವದ 2ನೇ ದೇಶವಾಗಿರುವ ಭಾರತದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಹಾಗೂ ಆಸ್ಟ್ರಾಜೆನೆಕಾ ಸಂಸ್ಥೆಗಳು ಅಭಿವೃದ್ಧಿಪಡಿಸಿರುವ 'ಕೋವಿಶೀಲ್ಡ್' ಲಸಿಕೆಯನ್ನು ತುರ್ತು ಬಳಕೆಗೆ ವಿತರಣೆ ಮಾಡಲು ತಜ್ಞರ ಸಮಿತಿಯೊಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ ಎಂದು ಮೂಲಗಳು ತಿಳಿಸಿವೆ. ತನ್ಮೂಲಕ ಭಾರತದಲ್ಲಿ ಅನುಮತಿ ಗಿಟ್ಟಿಸುವ ಮೊದಲ ಕೊರೋನಾ ಲಸಿಕೆಯಾಗುವತ್ತ ಕೋವಿಶೀಲ್ಡ್ ದಾಪುಗಾಲು ಇಟ್ಟಿದೆ.

ಕೇಂದ್ರೀಯ ಔಷಧಗಳ ಗುಣಮಟ್ಟ ನಿಯಂತ್ರಣ ಸಂಸ್ಥೆಯ ವಿಷಯ ತಜ್ಞರ ಸಮಿತಿಯು ಶುಕ್ರವಾರ ಸಭೆ ಸೇರಿ ದೇಶದಲ್ಲಿ 'ಕೋವಿಶೀಲ್ಡ್' ಲಸಿಕೆಯ ತುರ್ತು ಬಳಕೆಗೆ ಶಿಫಾರಸು ಮಾಡಿದೆ. ಭಾರತೀಯ ಔಷಧ ನಿಯಂತ್ರಣ ಮಹಾನಿರ್ದೇಶನಾಲಯ (ಡಿಸಿಜಿಐ) ಕೂಡ ಇದಕ್ಕೆ ಒಪ್ಪಿಗೆ ನೀಡಿದರೆ ಇನ್ನು 7ರಿಂದ 10 ದಿನಗಳಲ್ಲಿ ಲಸಿಕೆ ವಿತರಣೆ ಆರಂಭವಾಗಲಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಆಕ್ಸ್‌ಫರ್ಡ್ ವಿವಿ-ಆಸ್ಟ್ರಾಜೆನೆಕಾ ಕಂಪನಿ ಉತ್ಪಾದಿಸಿರುವ ಕೋವಿಶೀಲ್ಡ್ ಲಸಿಕೆಯ ಭಾರತದಲ್ಲಿ ಉತ್ಪಾದಿಸುವ ಹಕ್ಕನ್ನು ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಪಡೆದುಕೊಂಡಿದ್ದು, ಈಗಾಗಲೇ 5 ಕೋಟಿ ಲಸಿಕೆ ತಯಾರಿಸಿಟ್ಟಿದೆ. ಸರ್ಕಾರ ಅನುಮತಿ ನೀಡುತ್ತಿದ್ದಂತೆ ದೇಶಾದ್ಯಂತ ಅಷ್ಟೂ ಲಸಿಕೆಗಳು ವಿತರಣೆಯಾಗಲಿವೆ ಎಂದು ವರದಿಗಳು ಹೇಳಿವೆ. ಕೋವಿಶೀಲ್ಡ್ ಲಸಿಕೆಗೆ ಅನುಮತಿ ನೀಡುತ್ತಿರುವ ವಿಶ್ವದ ಮೂರನೇ ದೇಶ ಭಾರತ. ಇದಕ್ಕೂ ಮೊದಲು ಬ್ರಿಟನ್ ಮತ್ತು ಅರ್ಜೆಂಟೀನಾ ಸರ್ಕಾರ ಕೂಡ ಇದೇ ಲಸಿಕೆಗೆ ಅಸ್ತು ಅಂದಿದೆ.

**ಕೊವ್ಯಾಕ್ಸಿನ್‌ಗಿಲ್ಲ ಅನುಮತಿ:** ದೇಶದಲ್ಲಿ ತಮ್ಮ ಲಸಿಕೆ ತುರ್ತು ಬಳಕೆಗೆ ಅನುಮತಿ ಕೋರಿ ಅಮೆರಿಕದ ಫೈಝರ್, ಸೀರಂ ಹಾಗೂ ಸ್ವದೇಶಿ ಲಸಿಕೆ ತಯಾರಿಸುತ್ತಿರುವ ಹೈದ್ರಾಬಾದ್ ಮೂಲದ ಭಾರತ್ ಬಯೋಟೆಕ್ ಕಂಪನಿಗಳು ಅರ್ಜಿ ಸಲ್ಲಿಸಿದ್ದವು. ➘ 11

### ದೇಶದ ಎಲ್ಲರಿಗೂ ಲಸಿಕೆ ಉಚಿತ ವಿತರಣೆ ಇಲ್ಲ ➘ 9




### ಇಂದು ಲಸಿಕೆ ರಿಹರ್ಸಲ್

1. ದೇಶದ 719 ಜಿಲ್ಲೆಗಳಲ್ಲಿ ಲಸಿಕೆ ವಿತರಣೆಯ ಅಣಕು ಕಾರ್ಯಾಚರಣೆ
2. ಈಗಾಗಲೇ ಗುರುತಿಸಿದ ಅರ್ಹ ವ್ಯಕ್ತಿಗಳಿಗೆ ಲಸಿಕೆ ನೀಡುವ ತಾಲೀಮು
3. ಜಿಲ್ಲೆ, ನಗರ, ಹಳ್ಳಿ ಆಸ್ಪತ್ರೆ, ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ತಯಾರಿ
4. ಪ್ರತಿ ಕೇಂದ್ರದ ಪಂಚ ಸದಸ್ಯರ ತಂಡದಿಂದ ಅಣಕು ಕಾರ್ಯಾಚರಣೆ
5. ಕೋಲ್ಡ್ ಸ್ಟೋರೇಜ್‌ನಿಂದ ಹೊರತೆಗೆದು, ಸಾಗಣೆ ಕುರಿತು ಪರಿಶೀಲನೆ ವಿವರ ➘ 9

### ಕರ್ನಾಟಕದಲ್ಲಿ ಎಲ್ಲೆಲ್ಲಿ?

1. ಬೆಂಗಳೂರು, ಕಲಬುರಗಿ, ಬೆಳಗಾವಿ, ಮೈಸೂರು, ಶಿವಮೊಗ್ಗ ಆಯ್ಕೆ
2. 5 ಜಿಲ್ಲೆಗಳ 16 ಆಸ್ಪತ್ರೆಗಳಲ್ಲಿ ಲಸಿಕೆ ವಿತರಣೆಯ ಅಣಕು ಕಾರ್ಯಾಚರಣೆ
3. ಫಲಾನುಭವಿಗಳ ಪಟ್ಟಿ ಈಗಾಗಲೇ ಸಿದ್ಧ. ಬೆಳಗ್ಗೆ 9ರಿಂದ ತಾಲೀಮು
4. ಲಸಿಕೆ ನೀಡಿಕೆ ಬಿಟ್ಟು ಉಳಿದೆಲ್ಲ ಪ್ರಕ್ರಿಯೆಯ ರಿಹರ್ಸಲ್ ವಿವರ ➘ 4

ಕನ್ನಡಪ್ರಭ

# ಎಸ್ಸೆಸ್ಸೆಲ್ಸಿ ಶೇ.40, ಪಿಯುಸಿ ಶೇ.31 ವಿದ್ಯಾರ್ಥಿಗಳು ತರಗತಿಗೆ ಹಾಜರ್

## ಶಾಲಾ ಪ್ರವೇಶದ ವೇಳೆ ಥರ್ಮಲ್ ಸ್ಕ್ಯಾನಿಂಗ್: ಮಂಜುನಾಥ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಎಸ್ಎಸ್ಎಲ್ಸಿ ಹಾಗೂ ದ್ವಿತೀಯ ಪಿಯು ಕಾಲೇಜುಗಳು ಆರಂಭಗೊಂಡ ಮೊದಲ ದಿನವೇ ಹೆಚ್ಚಿನ ವಿದ್ಯಾರ್ಥಿಗಳು ಉತ್ಸಾಹದಿಂದ ಆಗಮಿಸಿದ್ದರು. ಕಾಲೇಜುಗಳಿಗಿಂತ ಹೆಚ್ಚಾಗಿ 10ನೇ ತರಗತಿ ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಹಾಜರಿರುವುದು ವಿಶೇಷವಾಗಿತ್ತು.

ಶುಕ್ರವಾರ ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಬಿಬಿಎಂಪಿ ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ್, ಕೋವಿಡ್ ಆತಂಕದ ನಡುವೆಯೂ ಶಾಲಾ-ಕಾಲೇಜುಗಳು ಆರಂಭವಾಗಿದೆ. ಪಾಲಿಕೆ ಅಧೀನದಲ್ಲಿ 33 ಪ್ರೌಢಶಾಲೆಗಳಲ್ಲಿ 10ನೇ ತರಗತಿಗೆ ಒಟ್ಟು 2,190 ವಿದ್ಯಾರ್ಥಿಗಳು ದಾಖಲಾಗಿದ್ದು, ಮೊದಲ ದಿನ 860(ಶೇ.40) ವಿದ್ಯಾರ್ಥಿಗಳು ಮಾತ್ರ ತರಗತಿಗಳಿಗೆ ಹಾಜರಾಗಿದ್ದಾರೆ. ಅದೇ ರೀತಿ ಪಾಲಿಕೆಗೆ ಸೇರಿದ 15 ಪಿಯು ಕಾಲೇಜುಗಳಲ್ಲಿ ಒಟ್ಟು 2,140 ವಿದ್ಯಾರ್ಥಿಗಳು ದಾಖಲಾಗಿದ್ದು, ಮೊದಲ ದಿನ 654 (ಶೇ.31) ವಿದ್ಯಾರ್ಥಿಗಳು ಹಾಜರಾಗಿದ್ದರು ಎಂದು ತಿಳಿಸಿದರು.

ಮಕ್ಕಳಿಗೆ ಶಾಲಾ ಪ್ರವೇಶದ ವೇಳೆ ಥರ್ಮಲ್ ಸ್ಕ್ಯಾನರ್‌ನಿಂದ ಪರೀಕ್ಷೆ ಮಾಡಲಾಗುತ್ತಿದೆ ಎಂದರು. ಈ ವೇಳೆ ಪಾಲಿಕೆ ಶಿಕ್ಷಣ ಸಹಾಯಕ ಆಯುಕ್ತ ನಾಗೇಂದ್ರ ನಾಯ್ಕ, ಶಿಕ್ಷಣಾಧಿಕಾರಿ ಹರೀಶ್ ಕುಮಾರ್ ಇದ್ದರು.

## ಶೇ.40 ಅಲ್ಲ, ಶೇ.80ರಷ್ಟು ಮಕ್ಕಳು ಹಾಜರ್: ಖಾಸಗಿ ಶಾಲೆಗಳಿಂದ ಸಮರ್ಥನೆ

ಬೆಂಗಳೂರು: ಶಾಲೆ, ಕಾಲೇಜುಗಳು ಆರಂಭವಾದ ಮೊದಲ ದಿನ ವಿವಿಧ ತರಗತಿಗಳ ಶೇ.30 ರಿಂದ 40 ರಷ್ಟು ವಿದ್ಯಾರ್ಥಿಗಳು ಹಾಜರಾಗಿರುವುದಾಗಿ ಶಿಕ್ಷಣ ಇಲಾಖೆ ಹೇಳಿದರೆ, ಖಾಸಗಿ ಶಾಲೆಗಳು ಶೇ.80ರಷ್ಟು ಮಕ್ಕಳು ಹಾಜರಾಗಿದ್ದಾರೆ ಎಂದು ಹೇಳುತ್ತಿವೆ.

ಶಿಕ್ಷಣ ಇಲಾಖೆಯು ವಿದ್ಯಾರ್ಥಿಗಳ ಹಾಜರಾತಿಯನ್ನು ಎಸ್ಎಟಿಎಸ್ ತಂತ್ರಾಂಶದ ಮೂಲಕ ನಮೂದಿಸಲು ಹೇಳಿತ್ತು. ಅದರಂತೆ ನಮೂದಾಗಿರುವ ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸರ್ಕಾರ ಹಾಜರಾತಿ ಸಂಖ್ಯೆಯ ಮಾಹಿತಿ ನೀಡಿದೆ. ಆದರೆ, ತಂತ್ರಾಂಶದಲ್ಲಿನ ಲೋಪ ಹಾಗೂ ಆನ್‌ಲೈನ್ ಸಮಸ್ಯೆಯಿಂದ ಸಾಕಷ್ಟು ಖಾಸಗಿ ಶಾಲೆಗಳು ಮಕ್ಕಳ ಹಾಜರಾತಿ ದಾಖಲಿಸಲು ಸಾಧ್ಯವಾಗಿಲ್ಲ. ಖಾಸಗಿ ಶಾಲೆಗಳಿಗೆ ಶೇ.70ರಿಂದ 80ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದಾರೆಂದು ಖಾಸಗಿ ಪ್ರಾಥಮಿಕ, ಪ್ರೌಢ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ತಿಳಿಸಿದ್ದಾರೆ.

ಕನ್ನಡಪ್ರಭ

# ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಭ್ರಮ

**ಶಾಲೆ–ಪಿಯು ಕಾಲೇಜು ಶುರು | ಬಿಬಿಎಂಪಿ ಶಾಲೆಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳ ಹಾಜರಾತಿ**
**10 ತಿಂಗಳ ಬಳಿಕ ಶಿಕ್ಷಕರೊಂದಿಗೆ ಸಮಾಗಮ | ಚಾಕೋಲೇಟ್ ನೀಡಿ, ಆರತಿ ಬೆಳಗಿ ಸ್ವಾಗತ**

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿ ಬೆಂಗಳೂರಿನ ಬಹುತೇಕ ಶಾಲೆ, ಪಿಯು ಕಾಲೇಜುಗಳು ನಿಗದಿಯಂತೆ ಶುಕ್ರವಾರಆರಂಭಗೊಂಡಿದ್ದು, ಮೊದಲ ದಿನ ನಿರೀಕ್ಷೆಗೂ ಮೀರಿದ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತರಗತಿ ಮತ್ತು ವಿದ್ಯಾಗಮ ಕಲಿಕೆಯಲ್ಲಿ ಪಾಲ್ಗೊಂಡರು. ಶೇ.30ರಿಂದ 40ರಷ್ಟು ವಿದ್ಯಾರ್ಥಿಗಳು ಮೊದಲ ದಿನ ಶಾಲೆ, ಕಾಲೇಜುಗಳಿಗೆ ಹಾಜರಾಗಿದ್ದಾರೆ.

ವಿಶೇಷವಾಗಿ ಬಿಬಿಎಂಪಿ ಶಾಲೆಗಳಲ್ಲಿ ಇತರೆ ಶಾಲೆಗಳಿಗಿಂತ ಹೆಚ್ಚಿನ ಹಾಜರಾತಿ ಕಂಡುಬಂತು. ವಿದ್ಯಾರ್ಥಿಗಳು ಬಹಳ ಸಡಗರ ಸಂಭ್ರಮದಿಂದ ಶಾಲೆಗಳತ್ತ ಹೆಜ್ಜೆ ಹಾಕಿದರು. ಕೆಲ ಶಾಲೆಗಳಿಗೆ ಪೋಷಕರು ತಮ್ಮ ಮಕ್ಕಳನ್ನು ಕರೆತಂದು ಸುರಕ್ಷತಾ ಕ್ರಮಗಳನ್ನು ಅವಲೋಕಿಸಿದ್ದು ಕೂಡ ಕಂಡುಬಂತು. ಶಾಲೆ ಪುನಾರಂಭದ ಖುಷಿಯ ಜೊತೆಗೆ ಹೊಸ ವರ್ಷದ ಸಂಭ್ರಮ. ಹತ್ತು ತಿಂಗಳ ಬಳಿಕ ಪ್ರೀತಿಯ ವಿದ್ಯಾರ್ಥಿಗಳು ನೆಚ್ಚಿನ ಶಿಕ್ಷಕರ ಸಮಾಗಮ ಒಂದು ರೀತಿ ಹಬ್ಬದ ಸಡಗರ ಸೃಷ್ಟಿಸಿತ್ತು.

ಸರ್ಕಾರದ ಆದೇಶದಂತೆ ಎಲ್ಲ ಶಾಲೆ, ಕಾಲೇಜುಗಳಲ್ಲಿ ಸ್ವಚ್ಛತೆ, ಸ್ಯಾನಿಸೈಟಿಂಗ್, ಸಾಮಾಜಿಕ ಅಂತರಕ್ಕೆ ಸರತಿ ಸಾಲಿಗೆ ವೃತ್ತಗಳ ನಿರ್ಮಾಣ ಸೇರಿದಂತೆ ಸಮಗ್ರ ಮಾರ್ಗಸೂಚಿಯನ್ನು ಅನುಸರಿಸಿ ಸಿದ್ಧಗೊಳಿಸಿದ್ದವು. ಬೆಳಗ್ಗೆ 9.30ಕ್ಕೆ ಸರಿಯಾಗಿ ಆರಂಭಗೊಂಡ ಶಾಲೆ, ಪಿಯು ಕಾಲೇಜುಗಳಲ್ಲಿ ಅಧಿಕಾರಿಗಳು, ಶಿಕ್ಷಕರು, ಉಪನ್ಯಾಸಕರು ಕೆಲವೆಡೆ ಸ್ಥಳೀಯ ಜನಪ್ರತಿನಿಧಿಗಳು ವಿದ್ಯಾರ್ಥಿಗಳಿಗೆ ಹೂವು, ಸಿಹಿ, ಚಾಕೋಲೆಟ್ ನೀಡಿ, ಆರತಿ ಬೆಳಗಿ ಬರ ಮಾಡಿಕೊಂಡರು. ಶಾಲಾ ಕಾಲೇಜು ಪುನಾರಂಭದ ಜೊತೆಗೆ ಹೊಸ ವರ್ಷದ ಸಂಭ್ರಮದಿಂದ ಹಬ್ಬದ ವಾತಾವರಣ ಇತ್ತು.

ಎಲ್ಲ ಶಾಲೆಗಳಲೂ ಸಾಮಾಜಿಕ ಅಂತರದೊಂದಿಗೆ ವಿದ್ಯಾರ್ಥಿಗಳು ತರಗತಿ ಕೊಠಡಿಗೆ ಸಾಗಲು ವೃತ್ತಗಳನ್ನು ಹಾಕಲಾಗಿತ್ತು. ತರಗತಿಯಲ್ಲೂ ಸಾಮಾಜಿಕ ಅಂತರ ಕಾಯ್ದುಕೊಂಡು ಪ್ರತಿ ಬೆಂಚ್‌ನಲ್ಲಿ ಇಬ್ಬರು ಮಾತ್ರ ಕೂರಲು ವ್ಯವಸ್ಥೆ ಮಾಡಲಾಗಿತ್ತು. ಸಮವಸ್ತ್ರದ ಜೊತೆಗೆ ಮಾಸ್ಕ್ ಧರಿಸಿ ಶಾಲೆಗೆ ಬಂದ ವಿದ್ಯಾರ್ಥಿಗಳು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಹಾಕಲಾಗಿದ್ದ ವೃತ್ತಗಳಲ್ಲಿ ನಿಂತು ತರಗತಿ ಕೊಠಡಿಗೆ ಸಾಗಿದರು. ತರಗತಿಯಲ್ಲೂ ಒಂದು ಬೆಂಚ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳು ಮಾತ್ರ ಕೂತು ಪಾಠ ಆಲಿಸಿದರು. ಶಿಕ್ಷಕರು ಹಾಗೂ ಇತರೆ ಸಿಬ್ಬಂದಿ ಕೂಡ ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ತಮ್ಮ ಕರ್ತವ್ಯ ನಿರ್ವಹಿಸಿದರು.



ನಂದಿನಿ ಲೇಔಟ್‌ನ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕಿಯೊಬ್ಬರು ಹೂ ನೀಡಿ ಸ್ವಾಗತಿಸಿದರು.

**ಸೂಕ್ತ ಮುಂಜಾಗ್ರತಾ ಕ್ರಮದೊಂದಿಗೆ ಶಾಲೆ ಆರಂಭಿಸಿದ್ದೇವೆ. ಶಾಲಾ ಕೊಠಡಿಗಳನ್ನು ಸ್ಯಾನಿಟೈಸ್ ಮಾಡಿದ್ದೇವೆ. ಮಕ್ಕಳಲ್ಲಿ ಹೆಚ್ಚಿನ ಉತ್ಸಾಹ ಇರುವುದು ಕಂಡು ಬಂದಿದೆ. ಪಾಲಕರಿಗೂ ಮುಂಜಾಗ್ರತೆ ವಹಿಸಿರುವ ಬಗ್ಗೆ ಮಕ್ಕಳ ಪಾಲಕರಿಗೂ ಮಾಹಿತಿ ನೀಡಿದ್ದೇವೆ.**

• **ಸೂರ್ಯಕಾಂತ್ ಎ.ಮಹಾಲೆ,** ಮುಖ್ಯ ಶಿಕ್ಷಕರು, ಬಿಬಿಎಂಪಿ ಪ್ರೌಢಶಾಲೆ, ಎನ್.ಆರ್. ಕಾಲೋನಿ.

**ಹಲವು ದಿನಗಳ ನಂತರ ಶಾಲೆಗೆ ಬಂದಿರುವುದು ಸಂತಸ ಉಂಟುಮಾಡಿದೆ. ತರಗತಿಯಲ್ಲಿ ಕುಳಿತು ಪಾಠ ಕೇಳುವುದು ಉತ್ತಮ. ಶಾಲೆಯಲ್ಲಿ ಸೂಕ್ತ ರೀತಿಯಲ್ಲಿ ಕೊರೋನಾ ಮುನ್ನೆಚ್ಚರಿಕಾ ಕ್ರಮ ವಹಿಸಿದ ಹಿನ್ನೆಲೆಯಲ್ಲಿ ಆತಂಕವಿಲ್ಲದೇ ಪಾಠ ಕೇಳಬಹುದು.**

• **ನಸ್ರೀನ್ ತಾಜ್,** 10ನೇ ತರಗತಿ ವಿದ್ಯಾರ್ಥಿನಿ, ಕರ್ನಾಟಕ ಪಬ್ಲಿಕ್ ಸ್ಕೂಲ್.

**ದೀಪ ಬೆಳಗಿ ಸ್ವಾಗತ:** ಚಾಮರಾಜಪೇಟೆಯ ಸರ್ಕಾರಿ ಪ್ರೌಢಶಾಲೆ, ಶ್ರೀರಾಮಪುರದ ಬಿಬಿಎಂಪಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರು ದೀಪ ಬೆಳಗಿ ಬರಮಾಡಿಕೊಂಡದ್ದು ವಿಶೇಷವಾಗಿತ್ತು. ಅಲ್ಲದೆ, ಶಾಲಾ ಆವರಣದಲ್ಲಿ ಕೋವಿಡ್ ಆಕೃತಿಯ ತಲೆಯುಳ್ಳ ಮನುಷ್ಯನ ಪ್ರತಿಮೆ ನಿಲ್ಲಿಸಿ ಜಾಗೃತಿ ಮೂಡಿಸಲಾಯಿತು.

ತಳಿರು ತೋರಣ: ಜಯನಗರದ ಬಿಎಚ್‌ಎಸ್ ಶಾಲೆ, ಎನ್.ಆರ್.ಕಾಲೋನಿಯ ಆಚಾರ್ಯ ಪಾಠಶಾಲೆಯಲ್ಲಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ವಿದ್ಯಾರ್ಥಿಗಳು ಬರುತ್ತಿದ್ದಂತೆ ಬಾಗಿಲಲ್ಲಿ ಹೂವು, ಸಿಹಿ ನೀಡಿ ಶಿಕ್ಷಕರು ಸ್ವಾಗತ ಕೋರಿದರು. ಮಲ್ಲೇಶ್ವರದ ಮಹಾರಾಣಿ ಅಮ್ಮಣ್ಣಿ ಪಿಯು ಕಾಲೇಜಿನಲ್ಲಿ ಅಕ್ಷರಶಃ ಹಬ್ಬದ ಸಡಗರ ಮನೆ ಮಾಡಿತ್ತು. ಮೊದಲ ದಿನವೇ ಶೇ.50ರಷ್ಟು ವಿದ್ಯಾರ್ಥಿನಿಯರು ಹಾಜರಾಗಿದ್ದರು.

ಕನ್ನಡಪ್ರಭ

# ಸತತ 7ನೇ ದಿನ 1000ಕ್ಕಿಂತ ಕಡಿಮೆ ಕೊರೋನಾ ಕೇಸ್

## ನಿನ್ನೆ 877 ಮಂದಿಗೆ ಸೋಂಕು, 1084 ಜನ ಗುಣಮುಖ

**ಬೆಂಗಳೂರು:** ರಾಜ್ಯದಲ್ಲಿ ಸತತ ಒಂದು ವಾರದಿಂದ ಕೊರೋನಾ ಹೊಸ ಪ್ರಕರಣಗಳ ಸಂಖ್ಯೆ ಸಾವಿರಕ್ಕಿಂತ ಕಡಿಮೆ ದಾಖಲಾಗುತ್ತಿರುವುದು ಮುಂದುವರೆದಿದ್ದು, ಶುಕ್ರವಾರ 877 ಮಂದಿಯಲ್ಲಿ ಸೋಂಕು ದೃಢ ಪಟ್ಟಿದೆ. 1,084 ಮಂದಿ ಗುಣಮುಖರಾಗಿದ್ದಾರೆ. 6 ಮಂದಿ ಮೃತರಾಗಿದ್ದಾರೆ. ಪ್ರಸ್ತುತ 11,058 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 189 ಮಂದಿ ತೀವ್ರ ನಿಗಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈವರೆಗೆ ಒಟ್ಟು 9.20 ಲಕ್ಷ ಜನರಿಗೆ ಕೊರೋನಾ ಸೋಂಕು ಬಂದಿದ್ದು 8.97 ಲಕ್ಷ ಜನರು ಗುಣವಾಗಿದ್ದಾರೆ. ಒಟ್ಟು 12,096 ಮಂದಿ ಮರಣವನ್ನಪ್ಪಿದ್ದಾರೆ. ಒಂದೇ ದಿನ 1.17 ಲಕ್ಷ ಕೊರೋನಾ ಪರೀಕ್ಷೆಗಳು ನಡೆದಿದೆ. ಈವರೆಗೆ ಒಟ್ಟು 1.41 ಕೋಟಿ ಪರೀಕ್ಷೆಗಳು ನಡೆದಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ನಾಲ್ಕು, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಯಲ್ಲಿ ತಲಾ ಒಬ್ಬರು ಸೋಂಕಿನಿಂದ ಮರಣವನ್ನಪ್ಪಿದ್ದಾರೆ. ರಾಮನಗರ ಮತ್ತು ಕೊಪ್ಪಳದಲ್ಲಿ ಶುಕ್ರವಾರ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರು ನಗರದಲ್ಲಿ 464 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ. ಉಳಿದಂತೆ ಬಾಗಲಕೋಟೆ 16, ಬಳ್ಳಾರಿ 4, ಬೆಳಗಾವಿ 14, ಬೆಂಗಳೂರು ಗ್ರಾಮಾಂತರ 28, ಬೀದರ್ 6, ಚಾಮರಾಜನಗರ 12, ಚಿಕ್ಕಬಳ್ಳಾಪುರ 29, ಚಿಕ್ಕಮಗಳೂರು 8, ಚಿತ್ರದುರ್ಗ 39, ದಕ್ಷಿಣ ಕನ್ನಡ 27, ದಾವಣಗೆರೆ 10, ಧಾರವಾಡ 5, ಗದಗ 12, ಹಾಸನ 20, ಹಾವೇರಿ 2, ಕಲಬುರಗಿ 11, ಕೊಡಗು 7, ಕೋಲಾರ 14, ಮಂಡ್ಯ 13, ಮೈಸೂರು 26, ರಾಯಚೂರು 3, ಶಿವಮೊಗ್ಗ 20, ತುಮಕೂರು 32, ಉಡುಪಿ 14, ಉತ್ತರ ಕನ್ನಡ 16, ವಿಜಯಪುರ 19 ಮತ್ತು ಯಾದಗಿರಿಯಲ್ಲಿ 6 ಜನರಲ್ಲಿ ಸೋಂಕು ವರದಿಯಾಗಿದೆ.

**ಕೇವಲ 6 ಮಂದಿ ಸೋಂಕಿಗೆ ಬಲಿ**

ಕನ್ನಡಪ್ರಭ

# ಇಂದು ಲಸಿಕೆ ವಿತರಣೆ ರಿಹರ್ಸಲ್

## ಪ್ರತಿ ರಾಜ್ಯದ ರಾಜಧಾನಿಯ 3 ಕಡೆ ತಾಲೀಮು ನಡೆಸಲು ಕೇಂದ್ರ ಸೂಚನೆ
## ಜನರಿಗೆ ಲಸಿಕೆ ಕೊಡುವ ಮುನ್ನ ಸಿದ್ಧತೆ ಪರಿಶೀಲನೆಗೆ ಮುಂದಾದ ಸರ್ಕಾರ


**ನವದೆಹಲಿ:** ಕೊರೋನಾ ಲಸಿಕೆಯನ್ನು ವಿತರಿಸಲು ಭಾರತ ಯಾವ ರೀತಿ ಸರ್ವಸನ್ನದ್ಧವಾಗಿದೆ ಎಂಬುದನ್ನು ಪರೀಕ್ಷಿಸಲು ಕೇಂದ್ರ ಸರ್ಕಾರ ಶನಿವಾರ ದೇಶದ ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ 'ಡ್ರೈ ರನ್' (ಅಣಕು ಕಾರ್ಯಾಚರಣೆ) ನಡೆಸಲಿದೆ.

ರಾಜಧಾನಿಯ ಮೂರು ಕೇಂದ್ರಗಳಲ್ಲಿ ಈ ಪ್ರಾಯೋಗಿಕ ಕಾರ್ಯಾಚರಣೆಯನ್ನು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ನಡೆಸಬೇಕಾಗುತ್ತದೆ. ಕೆಲವು ರಾಜ್ಯಗಳು ಕಠಿಣ ಭೌಗೋಳಿಕ ಪ್ರದೇಶದಲ್ಲಿರುವ ಹಾಗೂ ಸರಕು ಸಾಗಣೆ ಕಷ್ಟವಾಗಿರುವ ಪ್ರದೇಶಗಳಲ್ಲೂ ಈ ತಾಲೀಮು ನಡೆಸಲಿವೆ. ಮಹಾರಾಷ್ಟ್ರ ಹಾಗೂ ಕೇರಳಗಳು ರಾಜಧಾನಿಯಿಂದ ಹೊರಗಿರುವ ಪ್ರಮುಖ ನಗರಗಳಲ್ಲಿ ಈ ಕಾರ್ಯಾಚರಣೆ ನಡೆಸುವುದಾಗಿ ಈಗಾಗಲೇ ಸರ್ಕಾರಕ್ಕೆ ತಿಳಿಸಿವೆ.

ಕೊರೋನಾ ಲಸಿಕೆ ವಿತರಣೆಗಾಗಿ ಅಭಿವೃದ್ಧಿಪಡಿಸಲಾಗಿರುವ ಕೋ-ವಿನ್ ಆ್ಯಪ್‌ನಲ್ಲಿ ನೋಂದಣಿ, ಲಸಿಕೆ ವಿತರಣಾ ಕೇಂದ್ರಗಳ ಸಿದ್ಧತೆ, ಲಸಿಕೆ ನೀಡುವ ಹಂತದಲ್ಲಿ ಇರಬಹುದಾದ ಕುಂದು-ಕೊರತೆ ಬಗ್ಗೆ ಪರಿಶೀಲನೆ ನಡೆಸಲು, ಲಸಿಕೆ ವಿತರಿಸುವ ಮುನ್ನ ಅವನ್ನೆಲ್ಲಾ ಸರಿಪಡಿಸಿಕೊಳ್ಳುವ ಉದ್ದೇಶದಿಂದ ಈ ತಾಲೀಮು ಅಭಿಯಾನ ನಡೆಸಲಾಗುತ್ತಿದೆ.

ಲಸಿಕೆ ವಿತರಣೆ ಆರಂಭವಾದ ಬಳಿಕ ಯಾವೆಲ್ಲಾ ಪ್ರಕ್ರಿಯೆಗಳನ್ನು ನಡೆಸಲಾಗುತ್ತದೋ ಅಷ್ಟೂ ಪ್ರಕ್ರಿಯೆಗಳು ನೆರವೇರಲಿವೆ. ಆದರೆ ಈ ಕಾರ್ಯಾಚರಣೆಯಲ್ಲಿ ಲಸಿಕೆಯನ್ನು ಬಳಸಲಾಗುವುದಿಲ್ಲ.

ಡಿ.29ರ ಮಂಗಳವಾರ ಆಂಧ್ರಪ್ರದೇಶ, ಗುಜರಾತ್, ಪಂಜಾಬ್ ಹಾಗೂ ಅಸ್ಸಾಂನಲ್ಲಿ ಕೇಂದ್ರ ಸರ್ಕಾರ ಅಣಕು ಕಾರ್ಯಾಚರಣೆ ನಡೆಸಿ ಸಿದ್ಧತೆಯನ್ನು ಪರಿಶೀಲಿಸಿತ್ತು. ಈ ರಾಜ್ಯಗಳಿಂದ ಕಾರ್ಯಾಚರಣೆ ವಿವರ ಸಂಗ್ರಹಿಸಿತ್ತು. ಇದೀಗ ಈ ತಾಲೀಮನ್ನು ದೇಶಾದ್ಯಂತ ನಡೆಸಲು ಸರ್ಕಾರ ನಿರ್ಧರಿಸಿದೆ. ನಾಲ್ಕು ರಾಜ್ಯಗಳಲ್ಲಿ 2 ದಿನಗಳ ಕಾಲ ನಡೆದ ಈ ಕಾರ್ಯಾಚರಣೆ, ದೇಶಾದ್ಯಂತ ಶನಿವಾರ ಒಂದೇ ದಿನದಲ್ಲಿ ನಡೆಯಲಿದೆ.



### ಹೇಗೆ ನಡೆಯಲಿದೆ ತಾಲೀಮು?

**1** ಲಸಿಕೆಗೆ ಅರ್ಹ ವ್ಯಕ್ತಿಗಳು ಜಿಲ್ಲಾ/ರಾಜ್ಯದ ಅಧಿಕಾರಿಗಳಿಂದ ಗುರುತು

**2** ಅರ್ಹರ ಹೆಸರು ಕೋ-ವಿನ್ ಆ್ಯಪ್‌ನಲ್ಲಿ ನೋಂದಣಿ.

**3** ನೋಂದಣಿಯಾದವರಿಗೆ ಲಸಿಕೆ ಕೇಂದ್ರ ನಿಗದಿ.

**4** ಜಿಲ್ಲಾ, ನಗರ ಆಸ್ಪತ್ರೆ, ಖಾಸಗಿ ಆರೋಗ್ಯ ಕೇಂದ್ರ, ಗ್ರಾಮೀಣ ಆಸ್ಪತ್ರೆಗಳೇ ಲಸಿಕೆ ಕೇಂದ್ರಗಳು.

**3** ಲಸಿಕೆ ನೀಡುವ ಮುನ್ನ ಲಸಿಕೆ ಕೇಂದ್ರದಲ್ಲಿ ಕೈಗೊಳ್ಳಲಾಗುವ ಕ್ರಮ ಪರಿಶೀಲನೆ

**4** ಕೋಲ್ಡ್ ಸ್ಟೋರೇಜ್‌ನಿಂದ ಲಸಿಕೆ ಹೊರತೆಗೆದು, ಸಾಗಿಸುವ ಹಂತದ ಕುರಿತು ಪರಿಶೀಲನೆ.

**5** ಪ್ರತಿ ಲಸಿಕಾ ಕೇಂದ್ರದಲ್ಲೂ ವೈದ್ಯ, ನರ್ಸ್, ಫಾರ್ಮಾಸಿಸ್ಟ್ ಅಥವಾ ಚುಚ್ಚುಮದ್ದು ನೀಡುವ ಮಾನ್ಯತೆ ಹೊಂದಿದ ವ್ಯಕ್ತಿಯ ನೇತೃತ್ವದ ಪಂಚ ಸದಸ್ಯ ತಂಡ ಇರುತ್ತದೆ.

**6** ನೇತೃತ್ವ ಹೊತ್ತವರು ಲಸಿಕೆ ಮಾತ್ರ ನೀಡುತ್ತಾರೆ. ಉಳಿದ ನಾಲ್ವರಲ್ಲಿ ಒಬ್ಬರು ಲಸಿಕೆ ಕೇಂದ್ರದ ಪ್ರವೇಶ ದ್ವಾರದಲ್ಲಿ ನಿಂತು ಭದ್ರತೆ ನೋಡಿಕೊಳ್ಳಬೇಕಾಗುತ್ತದೆ. 4 ಮತ್ತು 5ನೇಯವರಿಗೆ ದಟ್ಟಣೆ ನಿಯಂತ್ರಿಸುವ ಹಾಗೂ ಸಂವಹನ ಮಾಡುವ ಹೊಣೆ ನೀಡಲಾಗಿರುತ್ತದೆ. ಇವರೆಲ್ಲರ ಕಾರ್ಯನಿರ್ವಹಣೆ ಕುರಿತು ಪರಿಶೀಲನೆ ನಡೆಯಲಿದೆ.

**7** ರಾಜ್ಯ ಸರ್ಕಾರಗಳು ಲಸಿಕೆ ಅಭಿಯಾನದಲ್ಲಿ ಕಂಡುಬಂದ ಸಂಗತಿಗಳ ಕುರಿತು ವರದಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತವೆ.

**8** ಮುಂದೇನು ಮಾಡಬೇಕು ಎಂದು ಸರ್ಕಾರ ಚರ್ಚಿಸಿ ನಿರ್ಧರಿಸುತ್ತದೆ.

**2300**
ಸಿಬ್ಬಂದಿ
ದೇಶವ್ಯಾಪಿ ಲಸಿಕೆ ನೀಡುವ ಸಿಬ್ಬಂದಿಗೆ ತರಬೇತಿ ನೀಡಲು ರಾಷ್ಟ್ರೀಯ ಮಟ್ಟದಲ್ಲಿ ತರಬೇತಿ ಪಡೆದ ಮುಖ್ಯ ತರಬೇತುದಾರರ ಸಂಖ್ಯೆ

**96000**
ಲಸಿಕೆದಾರರು
ಮುಖ್ಯ ತರಬೇತುದಾರರಿಂದ ತರಬೇತಿ ಪಡೆದಿರುವ ಸಿಬ್ಬಂದಿ ಸಂಖ್ಯೆ

**719**
ಜಿಲ್ಲೆಗಳು
ಲಸಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ತರಬೇತಿ ನೀಡಿದ ಜಿಲ್ಲೆಗಳ ಸಂಖ್ಯೆ

**104**
ಸಹಾಯವಾಣಿ
ಲಸಿಕೆ ಅಥವಾ ಸಾಫ್ಟ್‌ವೇರ್ ಕುರಿತು ಸಮಸ್ಯೆ ಎದುರಾದಲ್ಲಿ ಬಳಕೆ ಮಾಡಿಕೊಳ್ಳಲಾಗುವ ಸಹಾಯವಾಣಿ

## ದೇಶದ ಎಲ್ಲರಿಗೂ ಉಚಿತ ಲಸಿಕೆ ಇಲ್ಲ

**ನವದೆಹಲಿ:** ಆದ್ಯತಾ ವರ್ಗದಲ್ಲಿರುವ 30 ಕೋಟಿ ಭಾರತೀಯರಿಗೆ ಕೇಂದ್ರ ಸರ್ಕಾರ ಉಚಿತವಾಗಿ ಲಸಿಕೆ ವಿತರಣೆ ಮಾಡಲಿದೆ. ದೇಶದ ಎಲ್ಲ ಜನರಿಗೂ ಅಲ್ಲ ಎಂದು ಕೋವಿಡ್ ಕಾರ್ಯಪಡೆ ಮುಖ್ಯಸ್ಥರೂ ಆಗಿರುವ ನೀತಿ ಆಯೋಗದ ಸದಸ್ಯ ಡಾ| ವಿನೋದ್ ಪಾಲ್ ತಿಳಿಸಿದ್ದಾರೆ. 6-8 ತಿಂಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರು ಸೇರಿ ಮುಂಚೂಣಿ ನೌಕರರು ಹಾಗೂ ವೃದ್ಧರಿಗೆ ಲಸಿಕೆ ನೀಡಲಾಗುತ್ತದೆ.ಒಟ್ಟು30 ಕೋಟಿ ಮಂದಿಗೆ ಮಾತ್ರ ಉಚಿತ ಲಸಿಕೆ ನೀಡಲಾಗುತ್ತದೆ ಎಂದಿದ್ದಾರೆ.

## ಡಬ್ಲ್ಯುಎಚ್‌ಒದಿಂದ ಫೈಝರ್ ಲಸಿಕೆಗೆ ಸಮ್ಮತಿ

**ಜಿನೇವಾ:** ಅಮೆರಿಕ ಮತ್ತು ಯುರೋಪ್‌ನಲ್ಲಿ ಈಗಾಗಲೇ ಜನರಿಗೆ ನೀಡಲಾಗುತ್ತಿರುವ ಫೈಝರ್-ಬಯೋಎನ್‌ಟೆಕ್ ಕಂಪನಿಯ ಕೊರೋನಾ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತರ್ತು ಬಳಕೆಯ ಅನುಮತಿ ನೀಡಿದೆ. ಹೀಗಾಗಿ ತಮ್ಮದೇ ಔಷಧ ನಿಯಂತ್ರಣ ಪ್ರಾಧಿಕಾರಗಳನ್ನು ಹೊಂದಿಲ್ಲದ ಬಡ ದೇಶಗಳು ಈ ಲಸಿಕೆಯನ್ನು ಪೂರ್ವಪರೀಕ್ಷೆ ಇಲ್ಲದೆ ಜನರಿಗೆ ನೀಡಬಹುದಾಗಿದೆ.

## ಜ.8ರಿಂದ ಮತ್ತೆ ಬ್ರಿಟನ್ನಿಗೆ ವಿಮಾನ ಸಂಚಾರ ಆರಂಭ

**ಲಂಡನ್:** ರೂಪಾಂತರಿ ಸೋಂಕು ಹಿನ್ನೆಲೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಭಾರತ-ಬ್ರಿಟನ್ ವಿಮಾನ ಸಂಚಾರ ಜನವರಿ 8ರಿಂದ ಆರಂಭವಾಗಲಿದೆ. ಆದರೆ ಮುಂದಿನ 2 ವಾರಗಳ ಕಾಲ ನಿರ್ಬಂಧಿತ ವಿಮಾನ ಸಂಚಾರ ನಡೆಯಲಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ಘೋಷಿಸಿದೆ.

ಕನ್ನಡಪ್ರಭ



# ಇನ್ನೂ ನಾಲ್ಕು ರಸ್ತೆಗಳಲ್ಲಿ ‘ಕ್ಲೀನ್ ಏರ್ ಸ್ಟ್ರೀಟ್’?

**ಬೆಂಗಳೂರು:** ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್) ವಾಯು ಮಾಲಿನ್ಯ ನಿಯಂತ್ರಣ ಸಂಬಂಧ ನಗರದ ಚರ್ಚ್ ಸ್ಟ್ರೀಟ್ ರಸ್ತೆಯಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದ ‘ಕ್ಲೀನ್ ಏರ್ ಸ್ಟ್ರೀಟ್’ ಯೋಜನೆಯನ್ನು ನಗರದ ಇನ್ನೂ ನಾಲ್ಕು ರಸ್ತೆಗಳಿಗೆ ವಿಸ್ತರಿಸಲು ಚಿಂತನೆ ನಡೆಸಿದೆ.

ಕಳೆದ ನವೆಂಬರ್‌ನಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದಿರುವ ಈ ಯೋಜನೆಗೆ ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಜತೆಗೆ ವಾಯು ಮಾಲಿನ್ಯದ ಪ್ರಮಾಣ ಕಡಿಮೆ ಆಗಿರುವ ಈ ಹಿನ್ನೆಲೆಯಲ್ಲಿ ನಗರದ ಪ್ರಮುಖ ವ್ಯಾಪಾರಿ ಬೀದಿಗಳಾದ ಗಾಂಧಿ ಬಜಾರ್, ಅವೆನ್ಯೂ ರಸ್ತೆ, ಮಲ್ಲೇಶ್ವರ 8ನೇ ಅಡ್ಡರಸ್ತೆ ಹಾಗೂ ಜಯನಗರದ ಯಾವುದಾದರೊಂದು ರಸ್ತೆಯಲ್ಲಿ ಕ್ಲೀನ್ ಏರ್ ಸ್ಟ್ರೀಟ್ ಯೋಜನೆ ಜಾರಿಗೊಳಿಸಲು ಡಲ್ಟ್ ಚಿಂತಿಸಿದೆ.

# 3 ಕಡೆ ಕೊರೋನಾ ಲಸಿಕಾ ತಾಲೀಮು

## ಡ್ರೈ ರನ್ ಕುರಿತು ಅಧಿಕಾರಿ, ಸಿಬ್ಬಂದಿಗೆ ತರಬೇತಿ | 2 ಗಂಟೆ ತಾಲೀಮು | ಬಿಬಿಎಂಪಿಯಿಂದ ಸಿದ್ಧತೆ: ಗೌರವ್ ಗುಪ್ತಾ



**ಡ್ರೈ ರನ್ ನಡೆಯುವ ಸ್ಥಳಗಳು**

- ದಕ್ಷಿಣ ವಲಯದ ವಿದ್ಯಾಪೀಠದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ
- ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯದ ಸಾರ್ವಜನಿಕ ಆರೋಗ್ಯ ಕೇಂದ್ರ
- ಆನೇಕಲ್ ಭಾಗದ ಹರ್ಗಾದೆಯಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯ ಎರಡು ಆರೋಗ್ಯ ಕೇಂದ್ರ ಹಾಗೂ ಬೆಂಗಳೂರು ಹೊರವಲಯದ ಒಂದು ಕೇಂದ್ರದಲ್ಲಿ ಜ.2ರಂದು ಕೊರೋನಾ ಲಸಿಕೆ ಹಾಕುವ ತಾಲೀಮು (ಡ್ರೈ ರನ್) ನಡೆಯಲಿದೆ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ತಿಳಿಸಿದ್ದಾರೆ.

ದೇಶದಲ್ಲಿ ಲಸಿಕೆ ವಿತರಣೆ ಮಾಡುವ ಸಂಬಂಧ ಜ.2ರಂದು ಎಲ್ಲ ರಾಜ್ಯಗಳಲ್ಲಿಯೂ ಕೊರೋನಾ ನಿಯಂತ್ರಣದ ಕೊರೋನಾ ಲಸಿಕೆಯ ತಾಲೀಮು ನಡೆಯಲಿದೆ. ಪಾಲಿಕೆ ಸಹ ತಾಲೀಮು ನಡೆಸಲು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಲಸಿಕೆ ತಾಲೀಮು ನಡೆಸುವ ಕುರಿತು ಅಧಿಕಾರಿ ಮತ್ತು ಸಿಬ್ಬಂದಿಗೆ ಅಗತ್ಯ ತರಬೇತಿ ನೀಡಲಾಗಿದೆ ಎಂದು ಹೇಳಿದರು.

ದಕ್ಷಿಣ ವಲಯದ ವಿದ್ಯಾಪೀಠದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ, ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ ಹಾಗೂ ಬೆಂಗಳೂರು ನಗರ ವ್ಯಾಪ್ತಿಯ ಆನೇಕಲ್ ಭಾಗದ ಹರ್ಗಾದೆಯಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ತಾಲೀಮು ನಡೆಸಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಎರಡು ಗಂಟೆ ಲಸಿಕಾ ತಾಲೀಮು ನಡೆಯಲಿದ್ದು, ಪ್ರತಿ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ 25 ಮಂದಿ ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ ಎಂದರು.

ಮೂರು ಸಾರ್ವಜನಿಕ ಆರೋಗ್ಯ ಕೇಂದ್ರಗಳಿಂದ 75 ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಸಲಾಗುತ್ತದೆ. ತಾಲೀಮು ನಡೆಸಿರುವ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತದೆ. ಲಸಿಕೆ ನೀಡಲು ನಗರದಲ್ಲಿ ಒಟ್ಟು 1,517 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದ್ದು, ಜನವರಿ ಅಂತ್ಯ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಲಸಿಕೆ ನೀಡುವ ಕಾರ್ಯ ಪ್ರಾರಂಭಿಸಲು ಯೋಜಿಸಲಾಗಿದೆ ಎಂದು ತಿಳಿಸಿದರು.

## 464 ಜನರಲ್ಲಿ ಸೋಂಕು ಪತ್ತೆ

• ಸಕ್ರಿಯ ಕೇಸ್‌ಗಳು 7100ಕ್ಕೆ ಇಳಿಕೆ

**ಬೆಂಗಳೂರು:** ಬೆಂಗಳೂರು ನಗರದಲ್ಲಿ ಶುಕ್ರವಾರ 464 ಜನರಲ್ಲಿ ಕೊರೋನಾ ಸೋಂಕು ಪತ್ತೆಯಾಗಿದ್ದು, 608 ಮಂದಿ ಗುಣಮುಖರಾಗಿದ್ದಾರೆ. ನಾಲ್ವರು ಸೋಂಕಿನಿಂದ ಮೃತಪಟ್ಟಿರುವ ವರದಿಯಾಗಿದೆ. ಈ ಮೂಲಕ ನಗರದಲ್ಲಿ ಈವರೆಗೆ ಒಟ್ಟು ಸೋಂಕಿತರ ಸಂಖ್ಯೆ 3,88,850ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,77,443ಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳಲ್ಲಿ 4521 ಪುರುಷರು ಮತ್ತು 2566 ಮಹಿಳೆಯರಲ್ಲಿ ಸೋಂಕು ಇದ್ದು ಸಕ್ರಿಯ ಪ್ರಕರಣಗಳ ಸಂಖ್ಯೆ 7087ಕ್ಕೆ ಇಳಿಕೆಯಾಗಿದೆ. ಈ ಪೈಕಿ 82 ರೋಗಿಗಳ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶುಕ್ರವಾರ ಸೋಂಕಿನಿಂದ ನಾಲ್ವರು ಮೃತಪಟ್ಟಿದ್ದು, ಈವರೆಗೆ ಸೋಂಕಿನಿಂದ ಸಾವನ್ನಪ್ಪಿರುವವರ ಸಂಖ್ಯೆ 4322ಕ್ಕೆ ಏರಿಕೆಯಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಈವರೆಗೆ ಸುಮಾರು 2945 ಮಂದಿ ಪುರುಷರು ಹಾಗೂ 1374 ಮಹಿಳೆಯರು ಹಾಗೂ ಮೂವರು ತೃತೀಯ ಲಿಂಗಿಗಳು ಕೊರೋನಾ ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

## ಬ್ರಿಟನ್ ದೇಶದಿಂದ ಬಂದ 75 ಜನರು ಇನ್ನೂ ನಾಪತ್ತೆ

### ಇವರಿಗಾಗಿ ಶೋಧ: ಸಚಿವ ಡಾ| ಕೆ.ಸುಧಾಕರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಳೆದ ನವೆಂಬರ್‌ನಿಂದ ಬ್ರಿಟನ್ ಮೂಲದಿಂದ ರಾಜ್ಯಕ್ಕೆ ಬಂದವರ ಪತ್ತೆ ಕಾರ್ಯ ನಡೆಯುತ್ತಿದ್ದು, ನವೆಂಬರ್ 25ರಿಂದ ಈವರೆಗೆ 5,068 ಮಂದಿ ರಾಜ್ಯಕ್ಕೆ ಆಗಮಿಸಿದ್ದಾರೆ. ಈ ಪೈಕಿ 75 ಮಂದಿ ಹೊರತುಪಡಿಸಿ ಎಲ್ಲರೂ ಪತ್ತೆಯಾಗಿದ್ದು, ಇವರ ಶೋಧ ಕಾರ್ಯ ಮುಂದುವರೆದಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ| ಕೆ.ಸುಧಾಕರ್ ಹೇಳಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಟ್ಟಾರೆಯಾಗಿ ನವೆಂಬರ್ 25ರಿಂದ ಈವರೆಗೆ 5,068 ಮಂದಿ ಬ್ರಿಟನ್‌ನಿಂದ ಆಗಮಿಸಿದ್ದಾರೆ. ಇದರಲ್ಲಿ 4,238 ಮಂದಿ ಡಿಸೆಂಬರ್ 9ರಿಂದ ಈಚೆಗೆ ಬಂದಿದ್ದಾರೆ. ಇವರಲ್ಲಿ 810 ಮಂದಿ ಹೊರ ರಾಜ್ಯದ ಪ್ರಯಾಣಿಕರಾಗಿದ್ದು, ಆಯಾ ರಾಜ್ಯಗಳಿಗೆ ಇವರ ಮಾಹಿತಿ ಒದಗಿಸಿ ಅಗತ್ಯ ಕ್ರಮಕ್ಕೆ ಸೂಚಿಸಲಾಗಿದೆ.

ಇನ್ನು ರಾಜ್ಯದಲ್ಲಿ 75 ಮಂದಿಯ ಸುಳಿವು ಪತ್ತೆಯಾಗಿಲ್ಲ. ಇದರಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ 70 ಮಂದಿ ಹಾಗೂ ರಾಜ್ಯದ ಇತರೆಡೆ 5 ಮಂದಿ ಇದ್ದಾರೆ. ಇವರ ಶೋಧ ಕಾರ್ಯ ನಡೆಯುತ್ತಿದ್ದು ಸಂಜೆ ಒಳಗಾಗಿ ಶೋಧಿಸುವುದಾಗಿ ಗೃಹ ಇಲಾಖೆ ತಿಳಿಸಿದೆ. ಬಳಿಕ ಎಲ್ಲರನ್ನೂ ಹಂತ-ಹಂತವಾಗಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ಸುಧಾಕರ್ ತಿಳಿಸಿದರು.

**38 ಮಂದಿಗೆ ಸೋಂಕು:** ಬ್ರಿಟನ್‌ನಿಂದ ಬಂದವರ ಪೈಕಿ 33 ಮಂದಿ ಹಾಗೂ ಅವರ ಪ್ರಾಥಮಿಕ ಸಂಪರ್ಕಿತರಿಗೆ 5 ಮಂದಿಗೆ ಸೇರಿ ಒಟ್ಟು 38 ಮಂದಿಗೆ ಕೊರೋನಾ ಸೋಂಕು ದೃಢಪಟ್ಟಿದೆ. ಇಷ್ಟೂ ಮಾದರಿಗಳನ್ನು ಜೆನೆಟಿಕ್ ಸೀಕ್ವೆನ್ಸ್‌ಗೆ ಕಳುಹಿಸಿದ್ದು ಈವರೆಗೆ 10 ಮಂದಿಗೆ ಬ್ರಿಟನ್ ವೈರಸ್ ದೃಢಪಟ್ಟಿದೆ ಎಂದು ಮಾಹಿತಿ ನೀಡಿದರು.

VK ವಿಜಯ ಕರ್ನಾಟಕ

## ತಾಯಿ, ಮಗಳು ಸೇರಿ ಮೂವರಲ್ಲಿ ಸೋಂಕು ಪತ್ತೆ

# ಬ್ರಿಟನ್ ಸೋಂಕಿತರು 6




■ **ವಿಕ ಸುದ್ದಿಲೋಕ** ಬೆಂಗಳೂರು

ಇಂಗ್ಲೆಂಡ್‌ನಿಂದ ನಗರಕ್ಕೆ ಬಂದಿರುವವರಲ್ಲಿ ಮಗಳು ಮತ್ತು ತಾಯಿ ಸೇರಿ ಮೂವರಿಗೆ ಬ್ರಿಟನ್ ರೂಪಾಂತರ ಸೋಂಕು ತಗಲಿರುವುದು ಶುಕ್ರವಾರ ದೃಢಪಟ್ಟಿದೆ. ಇಲ್ಲಿಯವರೆಗೆ ನಗರದಲ್ಲಿ ಒಟ್ಟು ಆರು ಮಂದಿಯಲ್ಲಿ ರೂಪಾಂತರ ಸೋಂಕು ಪತ್ತೆಯಾಗಿದೆ.

ಲಂಡನ್‌ನಿಂದ ಡಿ. 19ರಂದು ಇಲ್ಲಿಗೆ ಆಗಮಿಸಿದ್ದ ರಾಜಾಜಿನಗರದ 40 ವರ್ಷದ ಮಹಿಳೆಗೆ ರೂಪಾಂತರ ಸೋಂಕು ತಗಲಿತ್ತು. ಇವರೊಂದಿಗೆ ಪ್ರಾಥಮಿಕ ಸಂಪರ್ಕದಲ್ಲಿದ್ದ 73 ವರ್ಷದ ತಾಯಿಯೂ ಸೋಂಕು ಬಾಧಿತರಾಗಿದ್ದು, ಇಬ್ಬರನ್ನೂ ಚಿಕಿತ್ಸೆಗಾಗಿ ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೊಮ್ಮನಹಳ್ಳಿ ವಲಯದ ವಸಂತಪುರ ವಾರ್ಡ್‌ನ ವಿಠ್ಠಲನಗರದ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದ ತಾಯಿ-ಮಗುವಿಗೆ ರೂಪಾಂತರ ಸೋಂಕು ತಗಲಿತ್ತು. ಇವರಿಂದ ಮಹಿಳೆಯ ಪತಿಗೂ ಸೋಂಕು ತಗಲಿರುವುದು ವಂಶವಾಹಿ ಪರೀಕ್ಷೆಯಿಂದ ದೃಢಪಟ್ಟಿದೆ. ಸೋಂಕಿತ ವ್ಯಕ್ತಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಡಿ. 29ರಂದು ಮೂವರಲ್ಲಿ ರೂಪಾಂತರ ಸೋಂಕು ಪತ್ತೆಯಾಗಿತ್ತು. ಇವರೆಲ್ಲರೊಂದಿಗೆ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕ ಹೊಂದಿದ್ದವರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

### ಪ್ರಾಥಮಿಕ, ದ್ವಿತೀಯ ಸಂಪರ್ಕಿತರಿಗೆ ಕ್ವಾರಂಟೈನ್

ಕಳೆದ ಡಿ. 1ರಿಂದ 31ರವರೆಗೆ ಬ್ರಿಟನ್‌ನಿಂದ 2002 ಮಂದಿ ನಗರಕ್ಕೆ ಬಂದಿದ್ದು, ಇವರಲ್ಲಿ 79 ಮಂದಿ ಸಂಪರ್ಕಕ್ಕೆ ಸಿಗದೆ ತಲೆಮರೆಸಿಕೊಂಡಿದ್ದಾರೆ. ಉಳಿದ 1923 ಮಂದಿಯ ಪೈಕಿ 1337 ಪ್ರಯಾಣಿಕರಿಗೆ ಆರ್‌ಟಿ-ಪಿಸಿಆರ್ ಪರೀಕ್ಷೆ ಮಾಡಲಾಗಿದೆ. 586 ಮಂದಿಯನ್ನು ಪರೀಕ್ಷೆ ಮಾಡುವುದು ಬಾಕಿ ಇದೆ. ಕೋವಿಡ್ ದೃಢಪಟ್ಟ 20 ಮಂದಿಯ ಮಾದರಿಯನ್ನು ವಂಶವಾಹಿ ಪರೀಕ್ಷೆಗಾಗಿ ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಈವರೆಗೆ ಆರು ಮಂದಿಗೆ ಹೊಸ ಸ್ವರೂಪದ ಕೊರೊನಾ ಸೋಂಕು ತಗಲಿದೆ.

## ಇಂದು ಲಸಿಕೆ ತಾಲೀಮು

■ **ವಿಕ ಸುದ್ದಿಲೋಕ** ಬೆಂಗಳೂರು

ಕೊರೊನಾ ಸೋಂಕಿಗೆ ಲಸಿಕೆ ನೀಡಲು ನಗರದಲ್ಲಿ 1517 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದ್ದು, ಈ ತಿಂಗಳಾಂತ್ಯ ಅಥವಾ ಫೆಬ್ರವರಿ ಮೊದಲ ವಾರದಿಂದ ಲಸಿಕೆ ನೀಡುವ ಕಾರ್ಯಕ್ರಮ ಪ್ರಾರಂಭಿಸಲು ತೀರ್ಮಾನಿಸಲಾಗಿದೆ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ತಿಳಿಸಿದರು.

**ಲಸಿಕೆ ನೀಡಲು 1517 ಆರೋಗ್ಯ ಕೇಂದ್ರಗಳ ಗುರುತು**

**ಪ್ರತೀ ಕೇಂದ್ರದಲ್ಲಿ 25ರಂತೆ ಒಟ್ಟು 75 ಆರೋಗ್ಯ ಕಾರ್ಯಕರ್ತರ ಆಯ್ಕೆ**

''ಲಸಿಕೆ ವಿತರಣೆ ಸಂಬಂಧ ದೇಶದ ಎಲ್ಲ ರಾಜ್ಯಗಳಲ್ಲೂ ಶನಿವಾರ ಕೊರೊನಾ ನಿಯಂತ್ರಣ ಲಸಿಕೆ ತಾಲೀಮು (ಡ್ರೈ ರನ್) ನಡೆಯಲಿದೆ. ಬಿಬಿಎಂಪಿ ವ್ಯಾಪ್ತಿಯಲ್ಲೂ ಲಸಿಕೆ ತಾಲೀಮು ನಡೆಸಲು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಸಂಬಂಧಪಟ್ಟ ಅಧಿಕಾರಿ, ಸಿಬ್ಬಂದಿಗೆ ತರಬೇತಿ ನೀಡಲಾಗಿದೆ,'' ಎಂದರು.

''ಪಾಲಿಕೆಯ ದಕ್ಷಿಣ ವಲಯದ ವಿದ್ಯಾಪೀಠದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ, ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆನೇಕಲ್ ಸಮೀಪದ ಹಾರಗದ್ದೆಯಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ತಾಲೀಮು ನಡೆಯಲಿದೆ. ಬೆಳಗ್ಗೆ 9 ರಿಂದ 11 ಗಂಟೆ ಯವರೆಗೆ ಎರಡು ತಾಸುಗಳ ಕಾಲ ತಾಲೀಮು ನಡೆಸಿ, ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ವರದಿ ಸಲ್ಲಿಸಲಾಗುವುದು,'' ಎಂದು ವಿವರಿಸಿದರು.

''ಪ್ರತಿಯೊಂದು ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ತಾಲೀಮಿಗಾಗಿ 25 ಮಂದಿಯಂತೆ ಒಟ್ಟು 75 ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ. ಎರಡು ತಾಸುಗಳ ಕಾಲ ಅಣಕು ತಾಲೀಮು ನಡೆಸಲಾಗುವುದು. ಪ್ರತಿ ಕೇಂದ್ರದಲ್ಲಿ ಒಬ್ಬರು ಲಸಿಕೆ ನೀಡುವವರು ಮತ್ತು 4 ಮಂದಿ ಸಹಾಯಕರು ಇರುತ್ತಾರೆ,'' ಎಂದು ತಿಳಿಸಿದರು.

ವಿಜಯ ಕರ್ನಾಟಕ

# ಬಿಬಿಎಂಪಿ ಶಾಲಾ-ಕಾಲೇಜಿನಲ್ಲಿ 1514 ವಿದ್ಯಾರ್ಥಿಗಳ ಹಾಜರಾತಿ



ಕುಟ್ಟೇನಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಗಮ ತರಗತಿ ಪ್ರಾರಂಭ.

**ಬೆಂಗಳೂರು:** ಬಿಬಿಎಂಪಿ ಅಧೀನದಲ್ಲಿರುವ ಶಾಲಾ-ಕಾಲೇಜುಗಳನ್ನು ಶುಕ್ರವಾರದಿಂದ ತೆರೆದಿದ್ದು, ಮೊದಲ ದಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯ 1514 ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಿದ್ದರು.

ಪಾಲಿಕೆ ಒಡೆತನದಲ್ಲಿರುವ 33 ಪ್ರೌಢಶಾಲೆಗಳಲ್ಲಿ 2190 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿಗೆ ದಾಖಲಾಗಿದ್ದು, ಮೊದಲ ದಿನ 860 (ಶೇ 40) ಮಂದಿ ಆಗಮಿಸಿದ್ದರು. ಹಾಗೆಯೇ, 15 ಪಿಯು ಕಾಲೇಜುಗಳಲ್ಲಿ 2140 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿಗೆ ಪ್ರವೇಶ ಪಡೆದಿದ್ದು, ಈ ಪೈಕಿ 654 (ಶೇ 31) ಮಂದಿ ಹಾಜರಾಗಿದ್ದರು. ಪಾಲಿಕೆಯ ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ್, ಸಹಾಯಕ ಆಯುಕ್ತ ನಾಗೇಂದ್ರ ನಾಯ್ಕ್, ವಿದ್ಯಾಧಿಕಾರಿ ಹರೀಶ್ ಅವರು ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸ್ಯಾನಿಟೈಸ್‌ಗೆ ಒತ್ತು ನೀಡಿ, ಶುಚಿತ್ವ ಕಾಪಾಡಿಕೊಳ್ಳಬೇಕು ಎಂದು ಶಿಕ್ಷಕರಿಗೆ ಸೂಚಿಸಿದರು.

''ಎಲ್ಲ ಕೊಠಡಿಗಳು, ಆವರಣದಲ್ಲಿ ಸೋಂಕು ನಿವಾರಕ ದ್ರಾವಣವನ್ನು ಸಿಂಪಡಣೆ ಮಾಡಲಾಗಿದೆ. ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಕೊಠಡಿಗಳ ವಿಸ್ತೀರ್ಣಕ್ಕೆ ಅನುಗುಣವಾಗಿ 15-20 ಮಕ್ಕಳಿಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಥರ್ಮಲ್ ಸ್ಕ್ಯಾನಿಂಗ್ ಯಂತ್ರದ ಮೂಲಕ ಎಲ್ಲ ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡಿದ ಬಳಿಕವೇ ತರಗತಿಗಳಿಗೆ ಕಳುಹಿಸಲಾಗುತ್ತಿದೆ,'' ಎಂದರು.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಕರೊನಾ ಲಸಿಕೆ ಬಳಕೆಗೆ ಓಕೆ

## ಭಾರತದಲ್ಲಿ ಕೋವಿಶೀಲ್ಡ್ ತುರ್ತು ಬಳಕೆಗೆ ಸಿಕ್ಕಿತು ಹಸಿರು ನಿಶಾನೆ

## ಹೊಸ ವರ್ಷದ ಕೊಡುಗೆ | ಇಂದೇ ರಾಜ್ಯಗಳಿಗೆ ರವಾನೆ ಸಾಧ್ಯತೆ

**ನವದೆಹಲಿ:** ಹೊಸ ರೂಪದೊಂದಿಗೆ ಲಗ್ಗೆ ಇಟ್ಟಿರುವ ಕರೊನಾ ಮಹಾಮಾರಿಗೆ ಇಡೀ ದೇಶ ಬೆಚ್ಚಿರುವ ಸಂದರ್ಭದಲ್ಲೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೊಸ ವರ್ಷದ ಕೊಡುಗೆಯಾಗಿ ಭಾರತೀಯರಿಗೆ ಸಿಹಿ ಸುದ್ದಿ ಪ್ರಕಟಿಸಿದೆ. ಕೋವಿಡ್ -19 ತುರ್ತು ಚಿಕಿತ್ಸೆಗಾಗಿ ಆಕ್ಸ್‌ಫರ್ಡ್-ಅಸ್ಟ್ರಾಜೆನಿಕಾ ಕಂಪನಿಯ ಕೊವಿಶೀಲ್ಡ್ ಲಸಿಕೆ ಬಳಸುವಂತೆ ಕೇಂದ್ರ ಸರ್ಕಾರ ರಚಿಸಿದ್ದ ವಿಶೇಷ ತಜ್ಞರ ಸಮಿತಿ ಶಿಫಾರಸು ಮಾಡಿದೆ. ಡಿಸಿಜಿಐ (ಭಾರತೀಯ ಔಷಧಗಳ ಮಹಾ ನಿಯಂತ್ರಕ) ಸಮ್ಮತಿ ದೊರೆತ ಬಳಿಕ ಲಸಿಕೆ ಬಳಕೆಗೆ ಮುಕ್ತವಾಗಲಿದೆ.

» ಲಸಿಕೆಗೆ ತಜ್ಞರ ಸಮಿತಿ ಶಿಫಾರಸು

» ಡಿಸಿಜಿಐ ಅನುಮತಿ ಬಾಕಿ

ರೂಪಾಂತರಿ ಕರೊನಾ ಸೋಂಕಿತರ ಪ್ರಕರಣ ದೇಶದಲ್ಲಿ ಹೆಚ್ಚುತ್ತಿರುವ ಬೆನ್ನಲ್ಲೇ ಲಸಿಕೆಯ ತುರ್ತು ಬಳಕೆಗೆ ಅನುಮತಿ ನೀಡುವಂತೆ ಆಕ್ಸ್‌ಫರ್ಡ್-ಅಸ್ಟ್ರಾಜೆನಿಕಾ ಮತ್ತು ಭಾರತ್ ಬಯೋಟೆಕ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದವು. ಈ ಸಂಬಂಧ ಕೇಂದ್ರೀಯ ಔಷಧಗಳ ಮಾನಕ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ನೇಮಿಸಿದ್ದ ವಿಷಯ ತಜ್ಞರ ಸಮಿತಿ ಶುಕ್ರವಾರ ಸಭೆ ನಡೆಸಿ ಲಸಿಕೆ ಬಳಕೆಗೆ ಸಮ್ಮತಿ ನೀಡಿತು. ಜಗತ್ತಿನ ಅತಿ ದೊಡ್ಡ ಲಸಿಕೆ ತಯಾರಿಕೆ ಸಂಸ್ಥೆ, ಪುಣೆ ಮೂಲದ ಭಾರತೀಯ ಸೆರಂ (ಎಸ್‌ಐಐ) ಸಲ್ಲಿಸಿದ್ದ ದತ್ತಾಂಶಗಳನ್ನು ಪರಿಶೀಲಿಸಿದ ಬಳಿಕ ಸಮಿತಿ ಅನುಮೋದನೆ ನೀಡಿದೆ.

**8 ತಿಂಗಳು, 30 ಕೋಟಿ ಗುರಿ:** ಜಗತ್ತಿನಲ್ಲೇ ಕರೊನಾ ಸೋಂಕಿತರಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಮುಂದಿನ ಆರರಿಂದ ಎಂಟು ತಿಂಗಳಲ್ಲಿ 30 ಕೋಟಿ ಜನರಿಗೆ ಕೊವಿಡ್-19 ಲಸಿಕೆ ನೀಡಲು ಸರ್ಕಾರ ಉದ್ದೇಶಿಸಿದೆ. ಅಗ್ಗದ ಆಕ್ಸ್‌ಫರ್ಡ್ ಲಸಿಕೆ ಅದರ ದೊಡ್ಡ ಆಶಾವಾದವಾಗಿದೆ. ಸೆರಂನೊಂದಿಗೆ ಭಾರತ ಸರ್ಕಾರ ಇನ್ನೂ ಅಧಿಕೃತ ಒಪ್ಪಂದ ಮಾಡಿಕೊಂಡಿಲ್ಲ. ಆದರೆ, ದೇಶೀಯ ಮಾರುಕಟ್ಟೆಗೆ ತನ್ನ ಮೊದಲ ಆದ್ಯತೆಯೆಂದು ಸಂಸ್ಥೆ ಸ್ಪಷ್ಟಪಡಿಸಿದೆ. ನಂತರ ರಫ್ತಿಗೆ ಗಮನ ನೀಡಲಿದೆ. ಪುಟ 2A




### ಯಾರಿಗೆ ಲಭ್ಯ?

- ಮುಂಚೂಣಿ ಆರೋಗ್ಯ ಕಾರ್ಯಕರ್ತರು, ವೃದ್ಧರಿಗೆ ಮೊದಲ ಹಂತದಲ್ಲಿ ಆದ್ಯತೆ ಮೇರೆಗೆ ಲಸಿಕೆ ಹಾಕಲಾಗುತ್ತದೆ
- 29,000 ಲಸಿಕಾ ಪಾಯಿಂಟ್‌ಗಳಿಗೆ ಲಸಿಕೆ ಸರಬರಾಜು ಮಾಡಲು 31 ಕೇಂದ್ರಗಳನ್ನು ಸ್ಥಾಪಿಸಲಾಗಿದೆ

### ಭಾರತದ ಅಂಕಿಸಂಖ್ಯೆ

1,02,88,158
ಒಟ್ಟು ಸೋಂಕಿತರು

98,83,813
ಚೇತರಿಕೆ

2.54 ಲಕ್ಷ
ಸಕ್ರಿಯ ಪ್ರಕರಣ

1,49,032
ಒಟ್ಟು ಮೃತರು

### ಎಲ್ಲೆಲ್ಲಿದೆ ಅನುಮತಿ

ಬ್ರಿಟನ್, ಅರ್ಜೆಂಟಿನಾದಲ್ಲಿ ಈಗಾಗಲೇ ಆಸ್ಟ್ರಾಜೆನಿಕಾ, ಆಕ್ಸ್‌ಫರ್ಡ್‌ನ ಕೋವಿಶೀಲ್ಡ್ ಲಸಿಕೆಯ ತುರ್ತು ಬಳಕೆಗೆ ಅನುಮತಿ ದೊರೆತಿದೆ.

### ಎಷ್ಟಿರಬಹುದು ಬೆಲೆ?

ಭಾರತ ಸರ್ಕಾರಕ್ಕೆ ಕೊವಿಶೀಲ್ಡ್ ಲಸಿಕೆಯ ಪ್ರತಿ ಡೋಸ್ ಬೆಲೆ 220 ರೂಪಾಯಿ (3 ಡಾಲರ್). ಇತರ ಎಲ್ಲ ವೆಚ್ಚ ಸೇರಿ ಒಬ್ಬ ವ್ಯಕ್ತಿಗೆ ಲಸಿಕೆ ಹಾಕಲು ಒಟ್ಟು 440 ರೂ. (6 ಡಾಲರ್) ತಗಲುತ್ತದೆ. ಖಾಸಗಿ ಮಾರುಕಟ್ಟೆಯಲ್ಲಾದರೆ ತಲಾ ಡೋಸ್ ಬೆಲೆ 700-800 ರೂ.ಆಗುತ್ತದೆ.

### ಅನುಕೂಲಗಳೇನು?

ಹೆಚ್ಚಿನ ಫ್ರೀಜಿಂಗ್ ಅಗತ್ಯ ಇಲ್ಲದಿರುವುದರಿಂದ ಸಾಮೂಹಿಕ ಲಸಿಕೆ ಕಾರ್ಯಕ್ರಮದ ಗುರಿ ಹೊಂದಿರುವ ಭಾರತಕ್ಕೆ ಕೊವಿಶೀಲ್ಡ್ ಲಸಿಕೆಯೇ ಹೆಚ್ಚು ಅಪ್ಯಾಯಮಾನವಾಗಲಿದೆ. ಲಸಿಕೆಯ ಉತ್ಪಾದನೆ ವೆಚ್ಚ ಕೂಡ ಕಡಿಮೆ. ಇದು ಬಡ ದೇಶಗಳಲ್ಲಿ ಆಶಾವಾದ ಮೂಡಿಸಿದೆ.

## ಇಂದಿನಿಂದ ರಾಜ್ಯದಲ್ಲಿ ತಾಲೀಮು

**ಬೆಂಗಳೂರು:** ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಕೋವಿಡ್ ಲಸಿಕೆಯ ಪೂರ್ವಾಭ್ಯಾಸ (ಡ್ರೈರನ್)ಕಾರ್ಯಾಚರಣೆಗೆ ಕರ್ನಾಟಕದ ಐದು ಜಿಲ್ಲೆ ಸೇರಿದಂತೆ ದೇಶಾದ್ಯಂತ ಶನಿವಾರ ಚಾಲನೆ ಸಿಗಲಿದೆ. ಕ್ಷೇತ್ರೀಯಮಟ್ಟದಲ್ಲಿ ಎದುರಾಗುವ ಸವಾಲು ಗಮನದಲ್ಲಿರಿಸಿ ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ, ಶಿವಮೊಗ್ಗ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ವಿವರ ಪುಟ 9

» 5 ಜಿಲ್ಲೆಗಳಲ್ಲಿ ಲಸಿಕೆ ಡ್ರೈರನ್

## ಎಲ್ಲರಿಗೂ ಲಸಿಕೆ ಉಚಿತವಿಲ್ಲ



ಲಸಿಕೆ ನೀಡಿಕೆ ವೆಚ್ಚಕ್ಕೆ ಸಂಬಂಧಿಸಿದಂತೆ ಸರ್ಕಾರ ಶುಕ್ರವಾರ ಮಹತ್ವದ ಸ್ಪಷ್ಟನೆ ನೀಡಿದೆ. ಆದ್ಯತೆ ವಿಭಾಗದಲ್ಲಿ ಬರುವ 30 ಕೋಟಿ ಜನರ ಲಸಿಕಾ ವೆಚ್ಚವನ್ನು ಮಾತ್ರ ಸರ್ಕಾರ ಭರಿಸಲಿದೆ. ದೇಶದ ಎಲ್ಲರಿಗೂ ಉಚಿತವಾಗಿ ನೀಡಲಾಗದೆಂದು ನೀತಿ ಆಯೋಗದ ಸದಸ್ಯ ಹಾಗೂ ರಾಷ್ಟ್ರೀಯ ಕೊವಿಡ್-19 ಕಾರ್ಯ ಪಡೆ ಮುಖ್ಯಸ್ಥ ವಿನೋದ್ ಪೌಲ್ ಹೇಳಿದ್ದಾರೆ.

### ಐದು ಕೋಟಿ ಡೋಸ್

ಅಸ್ಟ್ರಾಜೆನಿಕಾ ಲಸಿಕೆಯ ಸ್ಥಳೀಯ ಉತ್ಪಾದಕರಾದ ಭಾರತೀಯ ಸೆರಂ ಸಂಸ್ಥೆ (ಎಸ್‌ಐಐ) ಬಳಿ ಈಗಾಗಲೇ ಲಸಿಕೆಯ 5 ಕೋಟಿ ಡೋಸ್ ಸಂಗ್ರಹವಿದೆ. ಶೈತ್ಯಾಗಾರದಿಂದ ಲಸಿಕೆಯನ್ನು ಎಲ್ಲ ರಾಜ್ಯಗಳಿಗೆ ಸಾಗಿಸುವ ಕೆಲಸ ಶನಿವಾರವೇ ಆರಂಭವಾಗಬಹುದೆನ್ನಲಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1
ಕನ್ನಡ ದಿನಪತ್ರಿಕೆ

# ಪಾಲಿಕೆ ಶಾಲೆ-ಕಾಲೇಜು ಆರಂಭ

## ಶೇ.40 ವಿದ್ಯಾರ್ಥಿಗಳ ಹಾಜರಾತಿ | ವಿಶೇಷ ಆಯುಕ್ತರ ಭೇಟಿ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯ ಶಾಲೆಗಳಿಗೆ ಮೊದಲ ದಿನ ಎಸ್ಸೆಸ್ಸೆಲ್ಸಿಯ 860 ಹಾಗೂ ಕಾಲೇಜುಗಳಿಗೆ 654 ದ್ವಿತೀಯ ಪಿಯು ವಿದ್ಯಾರ್ಥಿಗಳು ಆಗಮಿಸಿದ್ದಾರೆ ಎಂದು ಪಾಲಿಕೆ ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ್ ತಿಳಿಸಿದ್ದಾರೆ.

» **ಕರೊನಾ ಮಾರ್ಗಸೂಚಿ ಪಾಲನೆ**

ಲಾಕ್‌ಡೌನ್ ಕಾರಣ ಮುಚ್ಚಿದ್ದ ಶಾಲೆಗಳು 8 ತಿಂಗಳ ಬಳಿಕ ಆರಂಭವಾಗಿರುವುದಕ್ಕೆ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತ ವಾಗಿದೆ. ಮೊದಲ ದಿನ ಪಾಲಿಕೆಯ 33 ಪ್ರೌಢಶಾಲೆಗಳ 2,190 ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಲ್ಲಿ 860 (ಶೇ.40) ಹಾಗೂ 15 ಪಿಯು ಕಾಲೇಜುಗಳ 2,140 ವಿದ್ಯಾರ್ಥಿಗಳಲ್ಲಿ 654 (ಶೇ.31) ಮಂದಿ ಆಗಮಿಸಿದ್ದರು ಎಂದು ಸುದ್ದಿಗಾರರಿಗೆ ತಿಳಿಸಿದರು.

ಕರೊನಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದ್ದು, ಶಿಕ್ಷಕರು ಎಲ್ಲ ವಿಷಯಗಳ ಬಗ್ಗೆ ಅಗತ್ಯ ನೋಟ್ಸ್‌ಗಳನ್ನು ಆನ್‌ಲೈನ್ ತರಗತಿ ಮೂಲಕವೇ ನೀಡಿದರು ಎಂದು ಅವರು ಮಾಹಿತಿ ನೀಡಿದರು.

**ವಿದ್ಯಾರ್ಥಿಗಳೊಂದಿಗೆ ಸಂವಹನ:** ಶ್ರೀರಾಮಪುರದ ಪ್ರೌಢ ಶಾಲೆ ಹಾಗೂ ಪಿಯು ಕಾಲೇಜಿಗೆ ಜೆ. ಮಂಜುನಾಥ್ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿದರು.

ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಆಗಾಗ್ಗೆ ಕೈಗಳನ್ನು ತೊಳೆಯುವುದು ಹಾಗೂ ವ್ಯಕ್ತಿಗತ ಅಂತರ ಕಾಯ್ದುಕೊಳ್ಳುವ ಕುರಿತು ಅರಿವು ಮೂಡಿಸಿದರು.

ಪಾಲಿಕೆ ಶಿಕ್ಷಣ ಸಹಾಯಕ ಆಯುಕ್ತ ನಾಗೇಂದ್ರ ನಾಯ್ಕ, ಶಿಕ್ಷಣಾಧಿಕಾರಿ ಹರೀಶ್ ಕುಮಾರ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.



ಶ್ರೀರಾಂಪುರದಲ್ಲಿನ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ವಿದ್ಯಾರ್ಥಿಗಳಿಗೆ ಶಿಕ್ಷಕರು ಹೂ, ಚಾಕೋಲೇಟ್ ನೀಡಿ ತರಗತಿಗೆ ಸ್ವಾಗತಿಸಿದರು.

# ಪ್ರತಿ ಜಿಲ್ಲೆಗೂ ವಿಚಕ್ಷಣಾ ದಳ

**ಆನೇಕಲ್:** ಕರೊನಾ ಮುನ್ನೆಚ್ಚರಿಕೆ ಕ್ರಮಗಳ ಪರಿಶೀಲನೆ ಹಾಗೂ ಕೊರತೆ ಇದ್ದೆಡೆ ಸರಿಪಡಿಸುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆಗೊಂದು ವಿಚಕ್ಷಣಾ ದಳ ರಚಿಸಲಾಗುವುದು ಎಂದು ಸಚಿವ ಸುರೇಶ್‌ಕುಮಾರ್ ಹೇಳಿದರು.

ತಾಲೂಕಿನ ವಿವಿಧ ಶಾಲೆಗಳಿಗೆ ಶುಕ್ರವಾರ ಭೇಟಿ ನೀಡಿದ ಅವರು ಕರೊನಾ ಬಗ್ಗೆ ಆತಂಕ ಬೇಡ ಎಂದು ಪಾಲಕರಲ್ಲಿ ಧೈರ್ಯ ತುಂಬಿದರು.

ಮಾರ್ಚ್, ಏಪ್ರಿಲ್‌ನಲ್ಲಿ ಪರೀಕ್ಷೆ ನಡೆಸುವುದಿಲ್ಲ, ಎಷ್ಟು ಪಾಠ ಕಡಿತ ಮಾಡಲಾಗುತ್ತದೆ ಎನ್ನುವುದನ್ನು 2 ದಿನದಲ್ಲಿ ತಿಳಿಸಲಾಗುವುದು ಎಂದು ಸಚಿವರು ತಿಳಿಸಿದರು. ಚಂದಾಪುರ ಶಾಲೆಯಲ್ಲಿ ವಿದ್ಯಾರ್ಥಿಯಿಂದ ಬೋರ್ಡ್ ಮೇಲೆ 'ಬನ್ನಿ ಕರೊನಾ ಓಡಿಸೋಣ, ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ಓದಿಸೋಣ' ಎಂದು ಬರೆಸಿದರು. ಸರ್ಜಾಪುರ ಶಾಲೆಯಲ್ಲಿ ಹಿಂದಿ ಶಿಕ್ಷಕರೊಬ್ಬರು ಪಾಠ ಮಾಡುವಾಗ ಸಚಿವರು ವಿದ್ಯಾರ್ಥಿಗಳೊಂದಿಗೆ ಕುಳಿತು ಪಾಠ ಕೇಳಿದರು. ಮಕ್ಕಳಿಗೆ ಚೆನ್ನಾಗಿ ಕಲಿಸುತ್ತಿದ್ದೀರಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು.



**ಶಾಲೆ ಆರಂಭದ ಮೊದಲ ದಿನ ಖುದ್ದು ಭೇಟಿ ನೀಡಿದ್ದೇನೆ. ಇದು ನಿರಂತರವಾಗಿರುತ್ತದೆ. ಹಾಗೆಯೇ ನ್ಯೂನತೆ ಇದ್ದಲ್ಲಿ ಸರಿಪಡಿಸಿಕೊಳ್ಳಲಾಗುವುದು. ಇಂದು ಶೇ.35 ರಿಂದ 40 ವಿದ್ಯಾರ್ಥಿಗಳು ಶಾಲೆಗೆ ಬಂದಿದ್ದಾರೆ.**

| **ಎಸ್. ಸುರೇಶ್ ಕುಮಾರ್** ಶಿಕ್ಷಣ ಸಚಿವ

ವಿಜಯವಾಣಿ
ಕನ್ನಡಿಗರ ಧ್ವನಿ

### ಒಟ್ಟು ಹತ್ತು ಮಂದಿಯಲ್ಲಿ ಪತ್ತೆ | ನಿಗದಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ, ನಿಗಾ

# ಮೂವರಿಗೆ ರೂಪಾಂತರಿ ವೈರಸ್


■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ಮತ್ತೆ ಮೂವರಲ್ಲಿ ರೂಪಾಂತರಿ ಕರೊನಾ ವೈರಸ್ ಪತ್ತೆಯಾಗಿದ್ದು, ಈ ಪೈಕಿ ಸ್ಥಳೀಯರೊಬ್ಬರಿಗೆ ಸೋಂಕು ತಲುಗಿದೆ. ಇದರೊಂದಿಗೆ ರಾಜ್ಯದಲ್ಲಿ ರೂಪಾಂತರ ವೈರಸ್ ಸೋಂಕಿತರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಬ್ರಿಟನ್ ಸೋಂಕಿತರು ಮತ್ತು ಅವರ ಸಂಪರ್ಕಿತರು ಸೇರಿ ಶುಕ್ರವಾರ ಕರೊನಾ ಸೋಂಕು ಹೊಂದಿದ್ದ 12 ಮಂದಿಯ ರಕ್ತದ ಮಾದರಿಯನ್ನು ವಿಶೇಷ ವಿಶ್ಲೇಷಣಾ ಪರೀಕ್ಷೆಗಾಗಿ ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಈ ಪೈಕಿ ಮೂವರಲ್ಲಿ ಸೋಂಕು ಪತ್ತೆಯಾಗಿದೆ. ಇವರಲ್ಲಿ ಒಬ್ಬರು ಬೊಮ್ಮನಹಳ್ಳಿಯ ವಲಯದವರಾಗಿದ್ದು, ಈ ಮೊದಲು ಸೋಂಕಿತರಾಗಿರುವ ತಾಯಿ ಮತ್ತು ಮಗಳ ನೇರ ಸಂಪರ್ಕದಿಂದ ಸೋಂಕು ತಲುಗಿದೆ. ಇತರ ಇಬ್ಬರು ಬ್ರಿಟನ್‌ನಿಂದ ಬಂದಿದ್ದು ರಾಜಾಜಿನಗರ ನಿವಾಸಿಗಳಾಗಿದ್ದಾರೆ.

**ಮಗಳಿಂದ ತಾಯಿಗೆ ಸೋಂಕು:** ರಾಜಾಜಿನಗರ 1ನೇ ಬ್ಲಾಕ್ ನಿವಾಸಿ ಅನಾರೋಗ್ಯದಿಂದಾಗಿ ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರ 40 ವರ್ಷದ ಪುತ್ರಿ ತಂದೆಯ ಆರೋಗ್ಯ ವಿಚಾರಿಸಲು ಡಿ.19ರಂದು ಇಂಗ್ಲೆಂಡ್‌ನಿಂದ ಬೆಂಗಳೂರಿಗೆ ಆಗಮಿಸಿದ್ದರು. ಡಿ.24ರಂದು ಆಕೆಗೆ ಹಾಗೂ ಡಿ.25ರಂದು ಅವರ ಪ್ರಾಥಮಿಕ ಸಂಪರ್ಕಕ್ಕೆ ಬಂದಿದ್ದ ತಾಯಿಗೆ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಿದಾಗ ಕರೊನಾ ಸೋಂಕು ದೃಢಪಟ್ಟಿತ್ತು. ಅವರಿಬ್ಬರ ಗಂಟಲು ದ್ರವ ಮಾದರಿ ಯನ್ನು ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆಗಾಗಿ ನಿಮ್ಹಾನ್ಸ್‌ಗೆ ಕಳುಹಿಸಲಾಗಿತ್ತು. ಇಬ್ಬರಿಗೂ ರೂಪಾಂತರ ವೈರಸ್ ಇರುವುದು ಶುಕ್ರವಾರ ದೃಢಪಟ್ಟಿದೆ. ಇಬ್ಬರೂ 3 ದಿನಗಳ ಹಿಂದೆಯೇ ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇಬ್ಬರ ಆರೋಗ್ಯ ಸ್ಥಿರವಾಗಿದ್ದು, ನಿಗಾ ವಹಿಸಲಾಗುತ್ತಿದೆ ಎಂದು ವೈದ್ಯರು ತಿಳಿಸಿದ್ದಾರೆ. ಬೊಮ್ಮನಹಳ್ಳಿ ವಲಯದ ವ್ಯಕ್ತಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

» **ನಿಮ್ಹಾನ್ಸ್‌ನಿಂದ ವಿಶೇಷ ವಿಶ್ಲೇಷಣಾ ಪರೀಕ್ಷೆ**


ಸಾಂದರ್ಭಿಕ ಚಿತ್ರ

## ಕರೊನಾ ಲಸಿಕೆ ಬಳಕೆಗೆ ಓಕೆ

ಮೊದಲನೇ ಪುಟದಿಂದ..

**ಅಭಿವೃದ್ಧಿ-ತಯಾರಿ:** ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಕೊವಿಶೀಲ್ಡ್ ಲಸಿಕೆಯನ್ನು ಅಸ್ಟ್ರಾಜೆನಿಕಾ ಕಂಪನಿ ಮಾನವ ಬಳಕೆಗಾಗಿ ಉತ್ಪಾದಿಸುತ್ತಿದೆ. ಬ್ರಿಟನ್ ಈಗಾಗಲೇ ಈ ಲಸಿಕೆಗೆ ಅನುಮೋದನೆ ನೀಡಿದೆ.

**ಶೇ. 70.4 ಪರಿಣಾಮ:** ಲಭ್ಯವಿರುವ ಮಧ್ಯಂತರ ದತ್ತಾಂಶ ಗಳ ಪ್ರಕಾರ, ಸೋಂಕಿನ ಲಕ್ಷಣ ಹೊಂದಿದವರ ಚಿಕಿತ್ಸೆಯಲ್ಲಿ ಕೊವಿಶೀಲ್ಡ್ ಲಸಿಕೆ ಶೇಕಡ 70.4 ಪರಿಣಾಮ ಬೀರುತ್ತದೆ. ಇನ್ನೆರಡು ಪ್ರಮುಖ ಲಸಿಕೆಗಳಾದ ಫೈಜರ್-ಬಯೋಎನ್‌ಟೆಕ್ ಮತ್ತು ಮಾಡರ್ನಾ ಲಸಿಕೆಗಳು ಅನುಕ್ರಮವಾಗಿ ಶೇ. 95 ಮತ್ತು ಶೇ. 94.5 ಪರಿಣಾಮ ಹೊಂದಿವೆ.

## ನಾಪತ್ತೆಯಾಗಿರುವ 75 ಜನರಿಗಾಗಿ ಶೋಧ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ 70 ಹಾಗೂ ಇತರ ಜಿಲ್ಲೆಗಳ 5 ಜನರು ಇನ್ನೂ ಸಂಪರ್ಕಕ್ಕೆ ಸಿಕ್ಕಿಲ್ಲ. ಈ ಪೈಕಿ ವಿದೇಶಿಯರು ಸೇರಿರುವ ಕಾರಣ ಸಂಬಂಧಿಸಿದ ವಲಸೆ ಅಧಿಕಾರಿಗಳಿಂದ ಮಾಹಿತಿ ಪಡೆದು ಶೀಘ್ರ ಪತ್ತೆ ಹಚ್ಚುವ ವಿಶ್ವಾಸವನ್ನು ಗೃಹ ಇಲಾಖೆ ಹೊಂದಿದೆ ಎಂದು ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಡಿ.9 ರಿಂದ ಇಂಗ್ಲೆಂಡ್‌ನಿಂದ ರಾಜ್ಯಕ್ಕೆ 5,238 ಮಂದಿ ಬಂದಿದ್ದಾರೆ. ನಗರದಲ್ಲಿ ಇಳಿದು ಬೇರೆ ರಾಜ್ಯಗಳಿಗೆ ಹೋದವರು 810 ಮಂದಿ, ಇವರ ಬಗ್ಗೆ ಸಂಬಂಧಿಸಿದ ರಾಜ್ಯಗಳ ಜತೆಗೆ ಮಾಹಿತಿ ಹಂಚಿಕೊಳ್ಳಲಾಗಿದೆ. ಇಂಗ್ಲೆಂಡ್‌ನಿಂದ ರಾಜ್ಯಕ್ಕೆ ಹಿಂದಿರುಗಿದವರಲ್ಲಿ 33 ಜನರಿಗೆ ಸೋಂಕಿರುವುದು ಆರ್‌ಟಿಪಿಸಿಆರ್ ಟೆಸ್ಟ್‌ನಿಂದ ದೃಢಪಟ್ಟಿದ್ದು, ಮಾದರಿಗಳನ್ನು ಪರೀಕ್ಷೆಗಾಗಿ ನಿಮ್ಹಾನ್ಸ್‌ಗೆ ಕಳುಹಿಸಲಾಗಿದೆ. ಅಲ್ಲದೆ, ಸಂಪರ್ಕಿತ 5 ಜನರಿಗೆ ಕರೊನಾ ಸೋಂಕಿರುವುದು ಖಚಿತಪಟ್ಟಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಲಸಿಕೆ ಹಂಚಿಕೆಗೆ ಇಂದಿನಿಂದ ತಾಲೀಮು

**ಬೆಂಗಳೂರು:** ನಗರದ 3 ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಶನಿವಾರ (ಜ.2) ಕೋವಿಡ್ ಲಸಿಕೆ ಹಾಕುವ ಬಗ್ಗೆ ತಾಲೀಮು (ಡ್ರೈ ರನ್) ಮಾಡಲಾಗುತ್ತಿದೆ ಎಂದು ಪಾಲಿಕೆ ಆಡಳಿತಾಧಿಕಾರಿ ಗೌರವ್‌ಗುಪ್ತ ತಿಳಿಸಿದ್ದಾರೆ.

ಈ ಕುರಿತು ಶುಕ್ರವಾರ ಸುದ್ದಿಗಾರರೊಂದಿಗೆ ಮಾಹಿತಿ ನೀಡಿದ ಅವರು, ವಿದ್ಯಾಪೀಠದ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ), ಕಾಮಾಕ್ಷಿಪಾಳ್ಯದ ಪಿಎಚ್‌ಸಿ ಹಾಗೂ ಬೆಂಗಳೂರು ನಗರ ಜಿಲ್ಲೆಯ ಅನೇಕಲ್‌ನ ಹರ್ಗಾದೆಯಲ್ಲಿರುವ ಆರೋಗ್ಯ ಕೇಂದ್ರದಲ್ಲಿ ಶನಿವಾರ ಬೆಳಗ್ಗೆ ಲಸಿಕೆ ತಾಲೀಮು ನಡೆಸಲಾಗುತ್ತಿದೆ. ಇದರಲ್ಲಿ ತಾಲೀಮಿನಲ್ಲಿ 75 ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಈ ಕುರಿತ ಸಾಧಕ-ಬಾಧಕಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಎಂದರು ಮಾಹಿತಿ ನಿಡಿದರು.

ಈಗಾಗಲೇ ಲಸಿಕೆ ವಿತರಣೆಗೆ ನಗರದಲ್ಲಿ 1,517 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದ್ದು, ಜನವರಿ ಅಂತ್ಯ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಲಸಿಕೆ ನೀಡುವ ಕಾರ್ಯ ಪ್ರಾರಂಭಿಸಲು ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು. ಕೋವಿಡ್ ಲಸಿಕೆ ಪಡೆಯುವ ಕರೊನಾ ವಾರಿಯರ್‌ಗಳ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಈ ಮಾದರಿಯಲ್ಲಿಯೇ ಕೇಂದ್ರದ ಸೂಚನೆಯಂತೆ ಲಸಿಕೆ ವಿತರಣೆ ಮಾಡುತ್ತೇವೆ. ಪ್ರತಿನಿತ್ಯ ಲಸಿಕೆ ಪಡೆವ ವ್ಯಕ್ತಿಗೆ ಸಂದೇಶ ಹೋಗಲಿದ್ದು, ವಿತರಣೆ ಕೇಂದ್ರಗಳಿಂದ ವ್ಯಾಕ್ಸಿನ್ ಹೊರಟ ಸಮಯದ ಬಗ್ಗೆ ಮಾಹಿತಿ ನೀಡಲಾಗುವುದು. ಈಗ (ಲಸಿಕೆ ಇಲ್ಲದೆ) ಕೇವಲ ತಾಲೀಮು ಮಾಡುತ್ತಿದ್ದು, ಇದಕ್ಕೆ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡಲಾಗಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ರಾಜೇಂದ್ರ ಚೋಳನ್ ಮಾಹಿತಿ ನೀಡಿದರು.

» **ಕಾಮಾಕ್ಷಿಪಾಳ್ಯ, ವಿದ್ಯಾಪೀಠ ಆಸ್ಪತ್ರೆಗಳಲ್ಲಿ ಸಿದ್ಧತೆ**

Bengaluru Edition
Jan 2, 2021 Page No. 3
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ತಗ್ಗಿದ ಕರೊನಾ ಪ್ರಕರಣ

## 2.54 ಲಕ್ಷಕ್ಕೆ ಇಳಿಕೆಯಾದ ಸಕ್ರಿಯ ಸೋಂಕಿತರ ಸಂಖ್ಯೆ

**ನವದೆಹಲಿ:** ದೇಶದಲ್ಲಿ 179 ದಿನಗಳಲ್ಲಿ ಇದೇ ಮೊದಲ ಬಾರಿಗೆ ಅತ್ಯಂತ ಕಡಿಮೆ ಪ್ರಮಾಣದ ಕರೊನಾ ಸಕ್ರಿಯ ಪ್ರಕರಣ ದಾಖಲಾಗಿದೆ. ಶುಕ್ರವಾರ ವರೆಗಿನ ಸಕ್ರಿಯ ಪ್ರಕರಣಗಳ ಸಂಖ್ಯೆ 2.54 ಲಕ್ಷ ಆಗಿದೆ ಎಂದು ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ. ಸಕ್ರಿಯ ಪ್ರಕರಣಗಳು ದೇಶದ ಒಟ್ಟು ಸೋಂಕಿತರ ಕೇವಲ ಶೇಕಡ 2.47 ಆಗಿದೆ. ಕಳೆದ 24 ಗಂಟೆಗಳಲ್ಲಿ 256 ಜನರು ಬಲಿಯಾಗಿದ್ದಾರೆ. ಮೃತರಲ್ಲಿ ಶೇಕಡ 63 ಜನರು ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ ಮತ್ತು ದೆಹಲಿಗೆ ಸೇರಿದವರು.




ಅಧಿಕ ವೇಗವಾಗಿ ಹರಡುವುದೆಂದು ನಂಬಲಾಗಿರುವ ರೂಪಾಂತರಿ ಕರೊನಾ ವೈರಸ್ ಸೋಂಕಿನ ಇನ್ನೂ ನಾಲ್ಕು ಪ್ರಕರಣಗಳು ಭಾರತದಲ್ಲಿ ಶುಕ್ರವಾರ ಪತ್ತೆಯಾಗಿವೆ. ಈ ಪೈಕಿ ಮೂರು ಬೆಂಗಳೂರು ಹಾಗೂ ಒಂದು ಹೈದರಾಬಾದ್‌ನಲ್ಲಿ ದೃಢಪಟ್ಟಿದೆ. ಇದರೊಂದಿಗೆ ದೇಶದಲ್ಲಿ ರೂಪಾಂತರಿ ವೈರಸ್ ಸೋಂಕಿನ ಒಟ್ಟು ಸಂಖ್ಯೆ 29ಕ್ಕೆ ಏರಿದೆ. ಈ ವೈರಸ್ ಪ್ರಥಮ ಬಾರಿಗೆ ಬ್ರಿಟನ್‌ನಲ್ಲಿ ಕಂಡು ಬಂದಿತ್ತು.

**» ಚೇತರಿಕೆ ಪ್ರಮಾಣ ನಿರಂತರ ಏರಿಕೆ ಹಿನ್ನೆಲೆಯಲ್ಲಿ ಸಕ್ರಿಯ ಪ್ರಕರಣ ಸಂಖ್ಯೆ ಗಮನಾರ್ಹ ಇಳಿಕೆ**

ಬೆಂಗಳೂರು ಮತ್ತು ದೆಹಲಿ ಪ್ರಯೋಗಾಲಯಗಳು ತಲಾ 10, ಹೈದರಾಬಾದ್ ಲ್ಯಾಬ್ ಮೂರು, ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆ ಐದು ಹಾಗೂ ಪಶ್ಚಿಮ ಬಂಗಾಳ ಲ್ಯಾಬ್ ಒಂದು ಪ್ರಕರಣ ಪತ್ತೆ ಹಚ್ಚಿವೆ. ಡೆನ್ಮಾರ್ಕ್, ನೆದರ್ಲೆಂಡ್, ಆಸ್ಟ್ರಿಯಾ, ಇಟಲಿ, ಸ್ವೀಡನ್, ಫ್ರಾನ್ಸ್, ಸ್ವಿಜರ್ಲೆಂಡ್, ಜರ್ಮನಿ, ಕೆನಡಾ, ಜಪಾನ್, ಲೆಬನಾನ್, ಸಿಂಗಾಪುರದಲ್ಲೂ ರೂಪಾಂತರಿತ ಕರೊನಾ ಪತ್ತೆಯಾಗಿದೆ. ವೈರಸ್‌ನ ಹೊಸ ಪ್ರಭೇದ ಹರಡುವುದನ್ನು ತಡೆಯುವ ಕ್ರಮವಾಗಿ ಬ್ರಿಟನ್‌ನಿಂದ ವಿಮಾನ ಪ್ರಯಾಣದ ಮೇಲೆ ಕೇಂದ್ರ ಸರ್ಕಾರ ಡಿಸೆಂಬರ್‌ನಲ್ಲಿ ತಾತ್ಕಾಲಿಕ ನಿಷೇಧ ಹೇರಿದೆ. ದೇಶದಾದ್ಯಂತ ಇರುವ 10 ಪ್ರಯೋಗಾಲಯಗಳಲ್ಲಿ ವೈರಸ್‌ನ ಜಿನೊಮ್ ಸೀಕ್ವೆನ್ಸಿಂಗ್ ಪ್ರಕ್ರಿಯೆಯನ್ನೂ ಆರಂಭಿಸಲಾಗಿದೆ.

### ನಿರ್ಬಂಧಗಳ ಜತೆ ಹೊಸ ವರ್ಷಾಚರಣೆ

**ಕ**ರೊನಾ ವೈರಸ್ ಹಾವಳಿ ಕಾರಣ ದೇಶದಲ್ಲಿ ಹೊಸ ವರ್ಷ ಸ್ವಾಗತಿಸುವ ಸಂಭ್ರಮ ತಗ್ಗಿತ್ತು. ದೆಹಲಿ, ಮುಂಬೈ ಮತ್ತು ಚೆನ್ನೈ ಮಹಾನಗರಗಳಲ್ಲಿ ಜನರು ಗುಂಪು ಸೇರುವುದರ ಮೇಲೆ ನಿಷೇಧ ಹೇರಲಾಗಿತ್ತು. ರಾತ್ರಿ ಕರ್ಫ್ಯೂ ವಿಧಿಸಲಾಗಿತ್ತು.




ಸಂಗ್ರಹ ಚಿತ್ರ

### 20 ಸಾವಿರ ಹೊಸ ಪ್ರಕರಣಗಳು

**ಶು**ಕ್ರವಾರ ಬೆಳಗಿನ ವರೆಗೆ 20,035 ಹೊಸ ಪ್ರಕರಣಗಳು ವರದಿಯಾಗಿವೆ. 23,181 ರೋಗಿಗಳು ಚೇತರಿಸಿಕೊಂಡಿದ್ದಾರೆ. ಕಳೆದ ಕೆಲವು ದಿನಗಳಿಂದ ಹೊಸ ಪ್ರಕರಣಗಳ ಸಂಖ್ಯೆ 20 ಸಾವಿರದ ಆಸುಪಾಸು ಇದೆ. ಕಳೆದ 35 ದಿನಗಳಿಂದ ದೈನಿಕ ಹೊಸ ಪ್ರಕರಣಗಳಿಗಿಂತ ಚೇತರಿಕೆ ಪ್ರಮಾಣವು ಹೆಚ್ಚಿರುವುದರಿಂದ ಸಕ್ರಿಯ ಪ್ರಕರಣಗಳು ಸತತವಾಗಿ ಇಳಿಮುಖವಾಗಲು ನೆರವಾಗಿದೆ. ಇದೊಂದು ಆಶಾದಾಯಕ ವಿದ್ಯಮಾನ ಎಂದು ಆರೋಗ್ಯ ಸಚಿವಾಲಯ ಹೇಳಿದೆ. 10 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಧಿಕ ಚೇತರಿಕೆ ಪ್ರಮಾಣ ದಾಖಲಾಗಿದೆ.

### ಆಯುರ್ವೇದ ಸೂತ್ರ ಪರೀಕ್ಷೆ

ಕರೊನಾ ವೈರಸ್‌ಗಳ ವಿರುದ್ಧ ಹೋರಾಡುವಲ್ಲಿ ಆಯುರ್ವೇದ ಚಿಕಿತ್ಸೆಯ ಪರಿಣಾಮ ಪರಿಶೀಲಿಸಲು ಪರೀಕ್ಷೆ ನಡೆಸಲಾಗುತ್ತದೆ. ಸೆಂಟರ್ ಫಾರ್ ಮಾಲೆಕ್ಯುಲಾರ್ ಬಯಾಲಜಿಯಲ್ಲಿ (ಸಿಸಿಎಂಬಿ) ಈ ಪರೀಕ್ಷೆ ನಡೆಸಲು ಕೇರಳದ ಆರ್ಯ ವೈದ್ಯ ಶಾಲಾದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಂದು ವೇಳೆ ಪರೀಕ್ಷೆಗಳಲ್ಲಿ ಧನಾತ್ಮಕ ಫಲಿತಾಂಶ ಕಂಡುಬಂದರೆ ದೇಶದ ಫಾರ್ಮಾಸ್ಯುಟಿಕಲ್ ಉದ್ಯಮದಲ್ಲಿ ಪ್ರಮುಖ ಪ್ರಗತಿ ಸಾಧನೆಯಾಗುತ್ತದೆ ಎಂದು ಸಿಸಿಎಂಬಿ ನಿರ್ದೇಶಕ ರಾಕೇಶ್ ಮಿಶ್ರಾ ಹೇಳಿದ್ದಾರೆ.



### ತಾಲೀಮು ಸಿದ್ಧತೆ ಪರಿಶೀಲನೆ

ಅಧಿಕೃತ ಅನುಮೋದನೆ ಸಿಗುತ್ತಿದ್ದಂತೆ ಕರೊನಾ ಲಸಿಕೆ ಅಭಿಯಾನಕ್ಕೆ ಸೂಕ್ತ ತಯಾರಿ ಮಾಡಿಕೊಳ್ಳಲು ಶನಿವಾರ ಎಲ್ಲ ರಾಜ್ಯಗಳಲ್ಲಿ ಪೂರ್ವಪ್ರಯೋಗ ತಾಲೀಮು (ಡ್ರೈ ರನ್) ನಡೆಸಲಾಗುತ್ತದೆ. ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಈ ಪೂರ್ವಾಭ್ಯಾಸ ಕುರಿತಂತೆ ಅಧಿಕಾರಿಗಳ ಸಭೆ ನಡೆಸಿ ಪರಿಸ್ಥಿತಿ ಅವಲೋಕಿಸಿದರು.

### ಫೈಜರ್‌ಗೆ ಹಸಿರು ನಿಶಾನೆ

**ಕೋ**ವಿಡ್-19 ಚಿಕಿತ್ಸೆಯ ತುರ್ತು ಬಳಕೆಗೆ ಫೈಜರ್-ಬಯೋಎನ್‌ಟೆಕ್ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆ ಗುರುವಾರ ನೀಡಿದೆ. ಔಷಧ ನಿಯಂತ್ರಣ ಸಂಸ್ಥೆ ಹೊಂದಿರುವ ದೇಶಗಳು ಯಾವುದೇ ಲಸಿಕೆಗಾದರೂ ಆಯಾ ರಾಷ್ಟ್ರದ ಸಂಸ್ಥೆಯ ಅನುಮೋದನೆಯನ್ನು ಪಡೆಯಬೇಕಾಗುತ್ತದೆ. ಆದರೆ ಅಂಥ ವ್ಯವಸ್ಥೆ ಇಲ್ಲದ ದುರ್ಬಲ ದೇಶಗಳು ಡಬ್ಲ್ಯುಎಚ್‌ಒ ಸಲಹೆಯ ಮೇರೆಗೆ ಕ್ರಮ ಕೈಗೊಳ್ಳುತ್ತವೆ.

### ಆಮದು-ರಫ್ತಿಗೆ ಅನುಮತಿ

**ಕ**ರೊನಾ ಲಸಿಕೆಯ ಲಭ್ಯತೆಯನ್ನು ಖಾತರಿಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಲಸಿಕೆಯ ಮುಕ್ತ ಆಮದು ಮತ್ತು ರಫ್ತಿಗೆ ಅನುಮತಿ ನೀಡಿದೆ.

### 8ರಿಂದ ಬ್ರಿಟನ್‌ಗೆ ವಿಮಾನ

ಬ್ರಿಟನ್‌ನಲ್ಲಿ ಹೊಸ ಸ್ವರೂಪದ ಕರೊನಾ ಸೋಂಕು ಪತ್ತೆಯಾದ ಬಳಿಕ ಭಾರತ-ಬ್ರಿಟನ್ ನಡುವೆ ಸ್ಥಗಿತಗೊಂಡಿದ್ದ ವಿಮಾನಯಾನ ಸೇವೆ ಜ.8ಕ್ಕೆ ಪುನರಾರಂಭಗೊಳ್ಳಲಿದೆ. ಜ.23ರವರೆಗೆ ಕಾರ್ಯಾಚರಣೆಯನ್ನು ವಾರಕ್ಕೆ 15 ವಿಮಾನಗಳಿಗೆ ಮಾತ್ರ ಸೀಮಿತಗೊಳಿಸವುದಾಗಿ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಹರ್ದೀಪ್ ಸಿಂಗ್ ಪುರಿ ಮಾಹಿತಿ ನೀಡಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ
ನಂ.1 ಕನ್ನಡ ದಿನಪತ್ರಿಕೆ

# ಕರೊನಾ ಕಲ್ಪಿತ ಲಸಿಕೆ ತಾಲೀಮು ಇಂದು

**ಬೆಂಗಳೂರು:** ಕರೊನಾ ವೈರಸ್ ನಿರ್ಮೂಲನೆಗಾಗಿ ರಾಜ್ಯದ 5 ಜಿಲ್ಲೆಗಳಲ್ಲಿ ಜ.2ರ ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆ ವರೆಗೆ ಕೋವಿಡ್ ಲಸಿಕೆ ತಾಲೀಮು ನಡೆಯಲಿದೆ. ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ ಹಾಗೂ ಶಿವಮೊಗ್ಗ ಜಿಲ್ಲೆಗಳ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಲಸಿಕೆ ತಾಲೀಮು ನಡೆಯಲಿದ್ದು, ಭಾನುವಾರ ಅಂತಿಮ ವರದಿ ಸಿದ್ಧಪಡಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

**ಕಾರ್ಯಾಚರಣೆ ಹೇಗೆ?:** ಲಸಿಕೆ ತಾಲೀಮು ಕಾರ್ಯಚರಣೆ 2 ದಿನ ನಡೆಯಲಿದ್ದು, ಬೆಳಗ್ಗೆ 9ಕ್ಕೆ ಸ್ಥಳ ಪರಿಶೀಲನೆ, ಕೋ-ವಿನ್ ಟೆಸ್ಟ್ ಪೋರ್ಟಲ್‌ಗೆ ಫಲಾನುಭವಿ ಮಾಹಿತಿ ದಾಖಲು. 10ಕ್ಕೆ ಲಸಿಕೆ ವಿತರಣಾ ಸ್ಥಳಗಳ ಹಂಚಿಕೆ. 11ಕ್ಕೆ ಕೋಲ್ಡ್ ಚೈನ್ ಪಾಯಿಂಟ್‌ಗೆ ಮಾಹಿತಿ. 12ಕ್ಕೆ ಅಧಿಕಾರಿ ಹಾಗೂ ಮೇಲ್ವಿಚಾರಕರಿಗೆ ಮಾಹಿತಿ. 1ಕ್ಕೆ ಲಸಿಕೆ ಪ್ರಕ್ರಿಯೆ. ಸಂಜೆ 4ಕ್ಕೆ ಬ್ಲಾಕ್ ಮಟ್ಟದಲ್ಲಿ ಪರಿಶೀಲನಾ ಸಭೆ. 6ಕ್ಕೆ ಜಿಲ್ಲಾ ಮಟ್ಟದಲ್ಲಿ ಪರಿಶೀಲನಾ ಸಭೆ.

> **ಕೇಂದ್ರದ ಸೂಚನೆಯಂತೆ ರಾಜ್ಯದ 5 ಜಿಲ್ಲೆಗಳಲ್ಲಿ ಕರೊನಾ ಕಲ್ಪಿತ ಲಸಿಕೆ ತಾಲೀಮು ಹಮ್ಮಿಕೊಳ್ಳಲಾಗಿದೆ. ಆ ಮೂಲಕ ಕರೊನಾ ಲಸಿಕೆ ಹಾಕುವುದಕ್ಕೆ ಮಾಡಿಕೊಂಡ ಸಿದ್ಧತೆಗಳನ್ನು ಪರೀಕ್ಷಿಸಲಾಗುವುದು. ವೈದ್ಯರು ಸೇರಿ ನಿಗದಿಪಡಿಸಿದ ತಲಾ 25 ಸಿಬ್ಬಂದಿಗೆ ಕಲ್ಪಿತ ಲಸಿಕೆ ಹಾಕಲಾಗುವುದು.**
> | ಡಾ.ಕೆ.ಸುಧಾಕರ್ ಆರೋಗ್ಯ ಸಚಿವ

**ಎಲ್ಲೆಲ್ಲಿ ಲಸಿಕೆ ತಾಲೀಮು:** • ಬೆಂಗಳೂರು: ನಗರ ಪ್ರಾಥಮಿಕ ಆರೋಗ್ಯ ಕೇಂದ್ರ -ಕಾಮಾಕ್ಷಿಪಾಳ್ಯ (ಬಿಬಿಎಂಪಿ ಪಶ್ಚಿಮ ವಲಯ), ವಿದ್ಯಾಪೀಠ (ಬಿಬಿಎಂಪಿ ದಕ್ಷಿಣ ವಲಯ), ಸಾರ್ವಜನಿಕ ಆಸ್ಪತ್ರೆ -ಯಲಹಂಕ ಮತ್ತು ಆನೇಕಲ್ ತಾಲೂಕು ಹಾರಗದ್ದೆಯ ಪಿಎಚ್‌ಎಸ್ • ಬೆಳಗಾವಿ: ಒಂಟೆಮರಿ ಕಾಲನಿ ಪ್ರಾಥಮಿಕ ಆರೋಗ್ಯ ಕೇಂದ್ರ, ಹುಕ್ಕೇರಿಯ ಸಾರ್ವಜನಿಕ ಆಸ್ಪತ್ರೆ, ಬೈಲಹೊಂಗಲ ತಾಲೂಕಿನ ಕಿತ್ತೂರಿನ ಸಮುದಾಯ ಆರೋಗ್ಯ ಕೇಂದ್ರ. • ಮೈಸೂರು: ಜಯನಗರದ ನಗರ ಸಮುದಾಯ ಆರೋಗ್ಯ ಕೇಂದ್ರ, ಕೆ.ಆರ್.ನಗರದ ತಾಲೂಕು ಆಸ್ಪತ್ರೆ, ಹುಣಸೂರು ತಾಲೂಕು ಬಿಳಿಕೆರೆಯ ಪ್ರಾಥಮಿಕ ಆರೋಗ್ಯ ಕೇಂದ್ರ. • ಕಲಬುರಗಿ: ಆಶೋಕ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರ, ಜೇವರ್ಗಿ ತಾಲೂಕು ಆಸ್ಪತ್ರೆ, ಔರಾದ್‌ನ ಪ್ರಾಥಮಿಕ ಆರೋಗ್ಯ ಕೇಂದ್ರ. • ಶಿವಮೊಗ್ಗ: ನಗರದ ಮೆಗ್ಗಾನ್ ಆಸ್ಪತ್ರೆ, ಶಿಕಾರಿಪುರ ತಾಲೂಕು ಆಸ್ಪತ್ರೆ, ಭದ್ರಾವತಿ ತಾಲೂಕಿನ ಅಂತರಗಂಗೆ ಪ್ರಾಥಮಿಕ ಆರೋಗ್ಯ ಕೇಂದ್ರ.

Bengaluru Edition
Jan 2, 2021 Page No. 13
Powered by : eReleGo.com

ಉದಯವಾಣಿ
ಜನಮನದ ಜೀವನಾಡಿ

# ಸೋಂಕು ತಡೆ ಲಸಿಕೆ ತಾಲೀಮು ಆರಂಭ

## ಮೊದಲ ಹಂತದಲ್ಲಿ 75 ಕಾರ್ಯಕರ್ತರಿಗೆ ಲಸಿಕೆ | ಜನವರಿ ಕೊನೆ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಲಸಿಕೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಸೋಂಕು ತಡೆ ಲಸಿಕೆ ತಾಲೀಮು ಇಂದಿನಿಂದ (ಜ.2) ಪ್ರಾರಂಭವಾಗಲಿದ್ದು, ಮೊದಲ ಹಂತದಲ್ಲಿ 75 ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಯಲಿದೆ.

ನಗರದ ದಕ್ಷಿಣ ವಲಯದ ವಿದ್ಯಾಪೀಠ ಸಾರ್ವಜನಿಕ ಆರೋಗ್ಯ ಕೇಂದ್ರ, ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯ ಸಾರ್ವಜನಿಕ ಆರೋಗ್ಯ ಕೇಂದ್ರ, ಬೆಂಗಳೂರು ನಗರ ಗ್ರಾಮಾಂತರ ಆನೇಕಲ್ ಭಾಗದ ಹರ್ಗಾದೆಯಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಸೋಂಕು ತಡೆ ಲಸಿಕೆ ತಾಲೀಮು ಪ್ರಾರಂಭವಾಗಲಿದೆ.

ಈ ಸಂಬಂಧ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಪಾಲಿಕೆ ಆಡಳಿತಾಧಿಕಾರಿ ಗೌರವ್‌ಗುಪ್ತ, ಶನಿವಾರ ಬೆಳಗ್ಗೆ 9ರಿಂದ 11ಗಂಟೆವರೆಗೆ 2 ಗಂಟೆ ಕಾಲ ಲಸಿಕೆ ತಾಲೀಮು ಪ್ರಕ್ರಿಯೆ ನಡೆಯಲಿದೆ. ಇದಕ್ಕಾಗಿ ಪ್ರತಿ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ 25ಜನ ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದ್ದು, ಮೂರು ಸಾರ್ವಜನಿಕ ಆರೋಗ್ಯ ಕೇಂದ್ರಗಳಿಂದ 75 ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಯಲಿದೆ ಎಂದು ಹೇಳಿದರು.

ಕೋವಿಡ್ ಸೋಂಕು ತಡೆ ಲಸಿಕೆ ನೀಡಲು ನಗರದಲ್ಲಿ ಒಟ್ಟು 1,517 ಆರೋಗ್ಯ ಕೇಂದ್ರ ಗುರುತಿಸಲಾಗಿದ್ದು, ಜನವರಿ ಕೊನೆಯಿಂದ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಲಸಿಕೆ ನೀಡುವ ಕಾರ್ಯ ಪ್ರಾರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

# ಬ್ರಿಟನ್ ರೂಪಾಂತರ ಕೊರೊನಾ ಪ್ರಕರಣ 10ಕ್ಕೇರಿಕೆ


ಸಾಂದರ್ಭಿಕ ಚಿತ್ರ

**ಬೆಂಗಳೂರು:** ರಾಜ್ಯದಲ್ಲಿ ಇದೇ ಮೊದಲ ಬಾರಿ ಇಂಗ್ಲೆಂಡ್ ಪ್ರಯಾಣಿಕರ ಸಂಪರ್ಕ ಹೊಂದಿದ್ದ ಸ್ಥಳೀಯ ವೃದ್ಧೆಯೊಬ್ಬರಲ್ಲಿ (73) ಬ್ರಿಟನ್ ರೂಪಾಂತರ ಕೊರೊನಾ ವೈರಸ್ ಪತ್ತೆಯಾಗಿದೆ. ಇದರೊಂದಿಗೆ ಶುಕ್ರವಾರ 3 ರೂಪಾಂತರ ಕೊರೊನಾ ವೈರಸ್ ಪ್ರಕರಣ ದೃಢಪಟ್ಟಿದ್ದು, ಒಟ್ಟಾರೆ ಪ್ರಕರಣಗಳ ಸಂಖ್ಯೆ 10ಕ್ಕೇರಿಕೆಯಾಗಿದೆ.

ಇಂಗ್ಲೆಂಡ್‌ನಿಂದ ಬಂದು ಕೊರೊನಾ ಸೋಂಕು ದೃಢಪಟ್ಟವರಿಗೆ ತಗುಲಿರುವುದು ಬ್ರಿಟನ್ ರೂಪಾಂತರ ವೈರಸ್ ಎಂಬುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ನಿಮ್ಹಾನ್ಸ್‌ನಲ್ಲಿ ಕೊರೊನಾ ವಂಶವಾಹಿನಿ ಪರೀಕ್ಷೆ ನಡೆಸಲಾಗುತ್ತಿದೆ.

ಶುಕ್ರವಾರ 12 ಪರೀಕ್ಷಾ ವರದಿ ಬಂದಿದ್ದು, ಇಬ್ಬರು ಇಂಗ್ಲೆಂಡ್ ಪ್ರಯಾಣಿಕರು, ಪ್ರಯಾಣಿಕರ ಪ್ರಾಥಮಿಕ ಸಂಪರ್ಕದಲ್ಲಿದ್ದ ಒಬ್ಬರನ್ನು ಸೇರಿ ಬೆಂಗಳೂರಿನ ಮೂರು ಮಂದಿಯಲ್ಲಿ ರೂಪಾಂತರ ವೈರಸ್ ದೃಢಪಟ್ಟಿದೆ. ಇವರೆಲ್ಲರನ್ನು ಕೆ.ಸಿ.ಜನರಲ್, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಐಸೋಲೇಷನ್ ವಾರ್ಡ್‌ಗೆ ದಾಖಲಿಸಲಾಗಿದೆ. ಈ ಹಿಂದೆ ಬೆಂಗಳೂರಿನ ಮೂವರು, ಶಿವಮೊಗ್ಗದ 4 ಮಂದಿ ಸೇರಿ ಒಟ್ಟು ಈವರೆಗೂ 10 ಮಂದಿಯಲ್ಲಿ ರೂಪಾಂತರ ವೈರಸ್ ಕಾಣಿಸಿಕೊಂಡಿದೆ.

**ಸಂಪರ್ಕಿತರಲ್ಲಿ ಮೊದಲು:** ಇದೇ ಮೊದಲ ಬಾರಿ ಇಂಗ್ಲೆಂಡ್ ಪ್ರಯಾಣ ಹಿನ್ನೆಲೆ ಹೊಂದಿರದ ಸ್ಥಳೀಯರೊಬ್ಬರಲ್ಲಿ ರೂಪಾಂತರ ವೈರಸ್ ಪತ್ತೆಯಾಗಿದೆ. ತಂದೆ ಅನಾರೋಗ್ಯದ ಹಿನ್ನೆಲೆ ಡಿ.19 ರಂದು ಇಂಗ್ಲೆಂಡ್‌ನಿಂದ 40 ವರ್ಷದ ಮಹಿಳೆ ರಾಜಾಜಿನಗರಕ್ಕೆ ಆಗಮಿಸಿದ್ದಾರೆ. ಡಿ.24ಕ್ಕೆ ಅವರಲ್ಲಿ ಸೋಂಕು ದೃಢಪಟ್ಟಿದ್ದು, ಪ್ರಾಥಮಿಕ ಸಂಪರ್ಕದಲ್ಲಿದ್ದ 73 ವರ್ಷದ ತಾಯಿಯನ್ನು ಪರೀಕ್ಷೆಗೊಳಪಡಿಸಲಾಗಿತ್ತು. ಅವರಲ್ಲೂ ಸೋಂಕು ಪತ್ತೆಯಾದ ಹಿನ್ನೆಲೆ ಇಬ್ಬರ ಗಂಟಲ ದ್ರವ ಮಾದರಿಯನ್ನು ಕೊರೊನಾ ವಂಶವಾಹಿನಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಸದ್ಯ ಇಬ್ಬರಲ್ಲೂ ರೂಪಾಂತರ ವೈರಸ್ ಕಾಣಿಸಿಕೊಂಡಿದೆ ಎಂದು ಬಿಬಿಎಂಪಿ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಡಿಸೆಂಬರ್‌ನಿಂದೀಚೆಗೆ ಇಂಗ್ಲೆಂಡ್‌ನಿಂದ ರಾಜ್ಯಕ್ಕೆ ಬಂದ 2127 ಪ್ರಯಾಣಿಕರ ಪೈಕಿ ಈವರೆಗೂ 2106 ಮಂದಿ ಪತ್ತೆಯಾಗಿದ್ದಾರೆ. 1993 ಮಂದಿಯಲ್ಲಿ ಸೋಂಕು ನೆಗೆಟಿವ್ ಬಂದಿದ್ದು, 33 ಪಾಸಿಟಿವ್ ವರದಿಯಾಗಿವೆ. 80 ಮಂದಿ ವರದಿ ಬರಬೇಕಿದೆ.

### ಯಾರು? ಎಲ್ಲಿಯವರು?

- ಡಿ.19 ರಂದು ಇಂಗ್ಲೆಂಡ್‌ನಿಂದ ರಾಜಾಜಿನಗರಕ್ಕೆ ಬಂದಿದ್ದ 40 ವರ್ಷ ಮಹಿಳೆ, ಆಕೆಯ 73 ವರ್ಷದ ತಾಯಿ.
- ಡಿ.21 ರಂದು ಇಂಗ್ಲೆಂಡ್‌ನಿಂದ ನಗರದ ಬೊಮ್ಮನಹಳ್ಳಿಗೆ ಬಂದಿದ್ದ 38 ವರ್ಷದ ಪುರುಷ. ( ಈತನ ಹೆಂಡತಿ ಮತ್ತು ಮಗುವಿಗೂ ರೂಪಾಂತರ ವೈರಸ್ ದೃಢಪಟ್ಟಿತ್ತು)

ಈವರೆಗೂ ಇಂಗ್ಲೆಂಡ್‌ನಿಂದ ಬಂದ 33 ಪ್ರಯಾಣಿಕರಲ್ಲಿ 27 ಮಂದಿಯ ಕೊರೊನಾ ರೂಪಾಂತರ ಪರೀಕ್ಷೆ ಮುಗಿದಿದ್ದು, 10 ಪಾಸಿಟಿವ್ ಬಂದಿದೆ. ಬಾಕಿ 6 ಪ್ರಯಾಣಿಕರು ಮತ್ತು 3 ಸಂಪರ್ಕಿತರು ಸೇರಿ 9 ಮಂದಿ ವರದಿ ಭಾನುವಾರ ಬರುವ ಸಾಧ್ಯತೆ ಇದೆ.

- **ಡಾ.ವಿ.ರವಿ,** ಕೊರೊನಾ ರೂಪಾಂತರ ಪರೀಕ್ಷೆ ಮುಖ್ಯಸ್ಥರು, ಕೊರೊನಾ ತಾಂತ್ರಿಕ ಸಲಹಾ ಸಮಿತಿ ಸದಸ್ಯರು.

ಉದಯವಾಣಿ
ಜನಮನದ ಜೀವನಾಡಿ

ಮಾಡಿಕೊಳ್ಳಲಾಗುತ್ತಿದ ಎಂದು ಮಾಹಿತಿ ನೀಡಿದರು. ಬೆಂಗಳೂರಿನ ಮೂವರು, ಶಿವಮೊಗ್ಗದ 4 ಮಂದಿ ರಂದು ಇಂಗ್ಲೆಂಡ್‌ನಿಂದ 40 ವರ್ಷದ ಮಹಿಳೆ ಒಳಪಡಿಸಲಾಗಿತ್ತು.

# ಶೇ.40 ವಿದೇಶಿಗರ ಬಳಿ ಇಲ್ಲ ವರದಿ

## ವಿಮಾನ ನಿಲ್ದಾಣದಲ್ಲಿ ಕೊರೊನಾ ಪರೀಕ್ಷೆಗೆಂದು ಮಾದರಿ ನೀಡಿ ರಾಜ್ಯಾದ್ಯಂತ ಸಂಚಾರ

• ಜಯಪ್ರಕಾಶ್ ಬಿರಾದಾರ್

**ಬೆಂಗಳೂರು:** 'ನಾವು ಅನುಭವದಿಂದ ಪಾಠ ಕಲಿಯಲಿಲ್ಲ. ಏಕೆಂದರೆ, ವಿದೇಶದಿಂದ ರಾಜ್ಯದ ವಿಮಾನ ನಿಲ್ದಾಣಗಳಿಗೆ ಬಂದು ಇಳಿಯುತ್ತಿರುವ ಪ್ರಯಾಣಿಕರ ಪೈಕಿ ಶೇ.40 ಮಂದಿ ಬಳಿ ಕೊರೊನಾ ಸೋಂಕು ಪರೀಕ್ಷೆ ವರದಿ ಇಲ್ಲ. ಅವರಿಗಾಗಿ ಸ್ಥಳದಲ್ಲಿಯೇ ಪರೀಕ್ಷೆಗೆ ವ್ಯವಸ್ಥೆ ಮಾಡಿದರೂ, ಪ್ರಯಾಣಿಕರು ಪರೀಕ್ಷೆಗೆಂದು ಮಾದರಿ ನೀಡಿ ರಾಜ್ಯಾದ್ಯಂತ ಹಂಚಿಹೋಗುತ್ತಿದ್ದಾರೆ!

ಇದು ರೂಪಾಂತರ ಸೇರಿ ಕೊರೊನಾ ಹರಡುವಿಕೆಗೆ ಹಾದಿಯಾಗಿದ್ದು, ಎಲ್ಲಾ ವಿದೇಶಿ ಪ್ರಯಾಣಿಕರಿಗೂ ಕಡ್ಡಾಯ ಸಾಂಸ್ಥಿಕ/ಹೋಂ ಕ್ವಾರಂಟೈನ್ ಕಡ್ಡಾಯ ಕೂಗು ಕೇಳಿಬಂದಿದೆ.

ವಿದೇಶಿ ಮೂಲದ ಕೊರೊನಾ ವೈರಸ್‌ಗೆ ವಿಮಾನ ನಿಲ್ದಾಣಗಳೇ ಹೆಬ್ಬಾಗಿಲು. ಸೋಂಕು ಆರಂಭದ ಫೆಬ್ರವರಿ, ಮಾರ್ಚ್‌ನಲ್ಲಿ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದ ವಿದೇಶಿ ಪ್ರಯಾಣಿಕರಿಗೆ ಥರ್ಮಲ್ ಸ್ಕ್ರೀನಿಂಗ್ ಮಾತ್ರ ಮಾಡಲಾಗುತ್ತಿತ್ತು. ಹೀಗಾಗಿ, ಸೋಂಕಿನ ಲಕ್ಷಣ ಇಲ್ಲದೇ ಕೊರೊನಾ ವೈರಸ್ ಹೊತ್ತು ತಂದಿದ್ದ ನೂರಾರು ಪ್ರಯಾಣಿಕರು ರಾಜ್ಯ ಸೇರಿದರು. ಇದರಿಂದಾಗಿ ನಂತರದ ದಿನಗಳಲ್ಲಿ ರಾಜ್ಯದಲ್ಲಿ ಸೋಂಕಿನ ಮಹಾಸ್ಫೋಟವೇ ಆಯಿತು.

ಪ್ರಸ್ತುತವೂ ರೂಪಾಂತರ ಕೊರೊನಾ ಭೀತಿ ತಡೆಗಟ್ಟಲು ಡಿ.23 ರಿಂದ ಎಲ್ಲಾ ವಿದೇಶ ಪ್ರಯಾಣಿಕರಿಗೂ ಸೋಂಕು ಪರೀಕ್ಷೆ ವರದಿ ಕಡ್ಡಾಯ ಮಾಡಲಾಗಿದೆ. ಆದರೂ, ನಿತ್ಯ ವಿಮಾನ ನಿಲ್ದಾಣಕ್ಕೆ ವಿದೇಶದಿಂದ ಬಂದಿಳಿಯುವವರ ಪೈಕಿ ಶೇ.40 ರಷ್ಟು ಪ್ರಯಾಣಿಕರು ಕೊರೊನಾ ವರದಿ ಇಲ್ಲದೆ ಆಗಮಿಸುತ್ತಿದ್ದಾರೆ. ಇವರಿಗೆ ಥರ್ಮಲ್ ಸ್ಕ್ರೀನಿಂಗ್ ಮಾಡಿ, ವಿಮಾನ ನಿಲ್ದಾಣದಲ್ಲಿ ಖಾಸಗಿ, ಆರೋಗ್ಯ ಇಲಾಖೆಯಿಂದ ಲಭ್ಯವಿರುವ ಸೋಂಕು ಪರೀಕ್ಷೆಗೆ ಒಳಗಾಗುವಂತೆ ಸೂಚಿಸಲಾಗುತ್ತದೆ. ಅಲ್ಲಿ ಪರೀಕ್ಷೆಗೆಂದು ಗಂಟಲು ದ್ರವ ಮಾದರಿ ಪಡೆದು ಫಲಿತಾಂಶ ಬಂದ ಕೂಡಲೇ ತಿಳಿಸಲಾಗುತ್ತದೆ ಎಂದು ಹೇಳಿ ನಿಲ್ದಾಣದಿಂದ ಹೊರಗೆ ಕಳುಹಿಸಲಾಗುತ್ತಿದೆ. ಸೋಂಕು ಇದ್ದವರೂ ನಿರಾತಂಕವಾಗಿ ಯಾವುದೇ ಕಡಿವಾಣ ಇಲ್ಲದೆ ಮುಕ್ತವಾಗಿ ರಾಜ್ಯದೊಳಗೆ ಪ್ರವೇಶಿಸುತ್ತಿದ್ದಾರೆ. ವಿಮಾನ ನಿಲ್ದಾಣದಲ್ಲಿ ಕಠಿಣ ಕ್ರಮಗಳಿಗೆ ಮುಂದಾಗದೇ ರಾಜ್ಯ ಸರ್ಕಾರ ಹಿಂದಿನ ತಪ್ಪನ್ನೇ ಮತ್ತೆ ಮಾಡುತ್ತಿದೆ. ನೆಗೆಟಿವ್ ವರದಿ ಬಂದ ನಂತರವಷ್ಟೇ ಮನೆಗೆ ಕಳುಹಿಸಬೇಕು. ಇಲ್ಲದಿದ್ದರೆ ಸೋಂಕಿನ ಹರಡುವಿಕೆಗೆ ದಾರಿಯಾಗುವ ಸಾಧ್ಯತೆ ಇದೆ ಎನ್ನುತ್ತಾರೆ ತಜ್ಞರು.

ಸಾಂದರ್ಭಿಕ ಚಿತ್ರ



> ನಿತ್ಯ ಬರುವ ವಿದೇಶಿ ಪ್ರಯಾಣಿಕರ ಪೈಕಿ ಶೇ.35ರಿಂದ 40 ಮಂದಿ ಕೊರೊನಾ ವರದಿ ಇಲ್ಲದೆ ಆಗಮಿಸುತ್ತಿದ್ದಾರೆ. ಕಾರಣ ಕೇಳಿದರೆ ಪ್ರವಾಸ ನಿಗದಿ ಆಗಿರಲಿಲ್ಲ, ಸೂಕ್ತ ಪ್ರಯೋಗಾಲಯ ಲಭ್ಯವಿರಲಿಲ್ಲ, ಇಲ್ಲಿಯೇ ಪರೀಕ್ಷೆಗೊಳಗಾಗೋಣ ಎಂದು ಹೇಳುತ್ತಾರೆ. ನಿಲ್ದಾಣದಲ್ಲಿ ಸೋಂಕು ಪರೀಕ್ಷೆಗೆ ವ್ಯವಸ್ಥೆ ಮಾಡಲಾಗಿದೆ.
>
> • ಹೆಸರು ಹೇಳಲಿಚ್ಛಿಸದ ಆರೋಗ್ಯ ಇಲಾಖೆ ಅಧಿಕಾರಿ

**2,000ಕ್ಕೂ ಅಧಿಕ ಪ್ರಯಾಣಿಕರ ಬಳಿ ವರದಿ ಇಲ್ಲ:** ವಿದೇಶಿ ಪ್ರಯಾಣಿಕರಿಗೆ ಕೊರೊನಾ ವರದಿ ಕಡ್ಡಾಯಗೊಳಿಸಿದ ಡಿ.23 ರಿಂದ ಡಿ.31 ರವರೆಗೂ ಬೆಂಗಳೂರು, ಮಂಗಳೂರು ವಿಮಾನ ನಿಲ್ದಾಣಗಳಿಗೆ 5,512 ಪ್ರಯಾಣಿಕರು ಆಗಮಿಸಿದ್ದಾರೆ. ವಿಮಾನ ನಿಲ್ದಾಣದಲ್ಲಿ ತಪಾಸಣೆ ನಡೆಸುತ್ತಿರುವ ಆರೋಗ್ಯ ಇಲಾಖೆ ಅಧಿಕಾರಿಗಳ ಮಾಹಿತಿ ಪ್ರಕಾರ ಶೇ.35 ರಿಂದ 40 ಪ್ರಯಾಣಿಕರು ವರದಿ ತರುತ್ತಿಲ್ಲ, ಈ ಪ್ರಕಾರ ಅಂದಾಜು 2,000ಕ್ಕೂ ಅಧಿಕ ಮಂದಿ ವರದಿ ಇಲ್ಲದೆ ಆಗಮಿಸಿದ್ದು, ನಿಲ್ದಾಣದಲ್ಲಿಯೇ ಪರೀಕ್ಷೆಗೆ ಒಳಗಾಗಿದ್ದಾರೆ. ಇವರಲ್ಲಿ ಎಷ್ಟು ಮಂದಿಗೆ ಸೋಂಕು ದೃಢಪಟ್ಟಿದೆ ಎಂಬ ಮಾಹಿತಿಯನ್ನು ಇಲಾಖೆ ನೀಡುತ್ತಿಲ್ಲ.

**772ಕ್ಕೂ ಹೆಚ್ಚು ಪ್ರಯಾಣಿಕರು ಉಚಿತ ತಪಾಸಣೆ ಆಯ್ಕೆ:** ಕೊರೊನಾ ವರದಿ ಇಲ್ಲದೆ ಆಗಮಿಸುತ್ತಿರುವವರ ಪೈಕಿ 772 ವಿದೇಶಿ ಪ್ರಯಾಣಿಕರು ಆರೋಗ್ಯ ಇಲಾಖೆ ವಿಮಾನ ನಿಲ್ದಾಣದಲ್ಲಿಟ್ಟಿರುವ ಉಚಿತ ಪರೀಕ್ಷಾ ಶಿಬಿರದಲ್ಲಿ ಪರೀಕ್ಷೆಗೊಳಗಾಗಿದ್ದಾರೆ. ಬಾಕಿ ಪ್ರಯಾಣಿಕರು ನಿಲ್ದಾಣ ಪ್ರಾಧಿಕಾರ ವ್ಯವಸ್ಥೆ ಮಾಡಿರುವ ಖಾಸಗಿ ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಗಾಗುತ್ತಿದ್ದಾರೆ ಎಂದು ಬೆಂ.ಗ್ರಾಮಾಂತರ ಜಿಲ್ಲೆ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

**ಪ್ರವಾಸ ಮೋಜು ಮಸ್ತಿಯಲ್ಲಿ:** ವಿಮಾನ ನಿಲ್ದಾಣದಲ್ಲಿ ಪರೀಕ್ಷೆಗೆಂದು ಗಂಟಲು ದ್ರವ ನೀಡುವ ಪ್ರಯಾಣಿಕರಿಗೆ ವರದಿ ಬರುವವರೆಗೂ ಹೋಂ ಕ್ವಾರಂಟೈನ್ ಇರುವಂತೆ ತಿಳಿಸಲಾಗುತ್ತದೆ. ಆದರೆ, ಈ ಪ್ರಯಾಣಿಕರು ತಮ್ಮ ಊರುಗಳಿಗೆ, ಪ್ರವಾಸ ಸ್ಥಳಗಳಿಗೆ ಮುಕ್ತವಾಗಿ ಓಡಾಡುತ್ತಿದ್ದರೆ. ಇನ್ನೊಂದೆಡೆ ಈ ಪ್ರಯಾಣಿಕರ ಸೋಂಕು ಪರೀಕ್ಷಾ ವರದಿಯೂ ತಡವಾಗುತ್ತಿದೆ ಎಂಬ ಆರೋಪ ಕೇಳಿಬಂದಿವೆ.

### ಕ್ವಾರಂಟೈನ್ ಆಗುತ್ತಿಲ್ಲ

ಈ ಹಿಂದೆ ವಿದೇಶದಿಂದ ಬಂದ ಪ್ರಯಾಣಿಕರು ಸೋಂಕು ವರದಿ ಇದ್ದರೂ ಕಡ್ಡಾಯ 14 ದಿನಗಳ ಹೋಂ ಕ್ವಾರಂಟೈನ್ ಇರಬೇಕಿತ್ತು. ಸದ್ಯ ವಿದೇಶದಿಂದ ಬರುವವರಿಂದಲೇ ರೂಪಾಂತರ ಆತಂಕವಿದ್ದರೂ ಕ್ವಾರಂಟೈನ್ ನಿಯಮ ಜಾರಿಗೊಳಿಸಿಲ್ಲ. ನೆಗೆಟಿವ್ ವರದಿ ಇದ್ದರೂ, ತಡವಾಗಿ ಸೋಂಕು ಕಾಣಿಸಿಕೊಳ್ಳುವವರಿಂದ ಅಥವಾ ವಿಮಾನದಲ್ಲಿ ಸೋಂಕಿತರೊಂದಿಗೆ ಪ್ರಯಾಣ ಮಾಡಿರುವವರಿಂದ ರಾಜ್ಯದಲ್ಲಿ ಸೋಂಕು ಹರಡುವ ಸಾಧ್ಯತೆಗಳಿವೆ. ಹೀಗಾಗಿ, ಎಲ್ಲಾ ವಿದೇಶಿ ಪ್ರಯಾಣಿಕರಿಗೆ ಕಡ್ಡಾಯ ಏಳು ದಿನವಾದರೂ ಹೋಂ ಕ್ವಾರಂಟೈನ್ ಸೂಚಿಸಬೇಕು ಎಂಬ ಅಭಿಪ್ರಾಯ ಕೇಳಿಬಂದಿದೆ.

ಉದಯವಾಣಿ
ಜನಮನದ ಜೀವನಾಡಿ

# ಕೊರೊನಾ ಅಧ್ಯಯನಕ್ಕೆ ಸೆಂಟ್ರಲ್ ಆಫ್ ಎಕ್ಸಲೆನ್ಸ್

- ಆರೋಗ್ಯ ಕ್ಷೇತ್ರದಲ್ಲಿ ಜನತೆ ಉಂಟಾದ ಸಮಸ್ಯೆ ತಿಳಿದುಕೊಳ್ಳಲು ಸಹಕಾರಿ
- ವ್ಯವಸ್ಥೆ ಸುಧಾರಣೆಗೆ ಕ್ರಮ: ಮಂಜುನಾಥ್ ಪ್ರಸಾದ್

**ಬೆಂಗಳೂರು:** ನಗರದಲ್ಲಿ ಕೊರೊನಾ ಸೋಂಕಿನ ಸಂದರ್ಭದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಹಾಗೂ ಸಾರ್ವಜನಿಕರಿಗೆ ಉಂಟಾದ ಸಮಸ್ಯೆ ತಿಳಿದುಕೊಳ್ಳಲು ಬಿಬಿಎಂಪಿ ಹಾಗೂ ಪಬ್ಲಿಕ್ ಹೆಲ್ತ್ ಫೌಂಡೇಶನ್ ಆಫ್ ಇಂಡಿಯಾ ಜಂಟಿಯಾಗಿ ಸೆಂಟರ್ ಆಫ್ ಎಕ್ಸಲೆನ್ಸ್ ತಾಂತ್ರಿಕ ಕೇಂದ್ರ ಸ್ಥಾಪನೆ ಮಾಡಿದೆ.

ನಗರದ ಮಾಗಡಿ ರಸ್ತೆಯ ಕುಷ್ಟರೋಗ ಆಸ್ಪತ್ರೆ ಆವರಣದ ಪಬ್ಲಿಕ್ ಹೆಲ್ತ್ ಫೌಂಡೇಶನ್ ಆಫ್ ಇಂಡಿಯಾ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್)ನಲ್ಲಿ ಕೇಂದ್ರ ಇರಲಿದ್ದು, ಮುಂದಿನ 1 ವರ್ಷ ವೈಜ್ಞಾನಿಕ ಅಧ್ಯಯನ ನಡೆಯಲಿದೆ. ಕೇಂದ್ರ ಸ್ಥಾಪನೆಗೆ ಏಷಿಯನ್ ಡೆವಲೆಪ್‌ಮೆಂಟ್ ಬ್ಯಾಂಕ್ ಸಹಕಾರ ನೀಡಿದೆ.



ಈ ಸಂಬಂಧ 'ಉದಯವಾಣಿ'ಯೊಂದಿಗೆ ಮಾತನಾಡಿದ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್, ನಗರದಲ್ಲಿ ಕೊರೊನಾ ಹೆಚ್ಚಾದ ವೇಳೆ ಯಾವೆಲ್ಲಾ ಸಮಸ್ಯೆ ಸೃಷ್ಟಿಯಾದವು. ಸಾರ್ವಜನಿಕರಿಗೆ ನಾವು ನೀಡಿದ ಸೇವೆ ಹೇಗಿತ್ತು ಎನ್ನುವುದು ಈ ಕೇಂದ್ರದ ವರದಿಯಿಂದ ತಿಳಿಯಲಿದೆ. ಇದರಿಂದ ವ್ಯವಸ್ಥೆ ಸುಧಾರಿಸಲು ಸಾಧ್ಯವಾಗಲಿದೆ ಎಂದರು.

ಕೊರೊನಾ ಸೋಂಕು ಸೇರಿ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಸಮಸ್ಯೆಗೆ ಪೂರ್ವ ಸನ್ನದ್ಧರಾಗಿರಲೂ ಸಹಕಾರಿ. ಈ ಕೇಂದ್ರ ವೈಜ್ಞಾನಿಕವಾಗಿ ಅಧ್ಯಯನ ಮಾಡಲಿದ್ದು, ಉದ್ದೇಶಿತ ಅಧ್ಯಯನಕ್ಕೆ ಪಾಲಿಕೆ ಸಂಪೂರ್ಣ ಸಹಕಾರ ನೀಡಲಿದೆ. ಆದರೆ, ಇದರಿಂದ ಪಾಲಿಕೆಗೆ ಹೆಚ್ಚುವರಿ ಹೊರೆ ಆಗುವುದಿಲ್ಲ ಎಂದರು.

ಪಬ್ಲಿಕ್ ಹೆಲ್ತ್ ಫೌಂಡೇಶನ್ ಆಫ್ ಇಂಡಿಯಾ ತಂಡದ ಅಧ್ಯಕ್ಷ ಡಾ.ಸುರೇಶ ಎಸ್.ಶಾಪೇಟಿ, ಕೊರೊನಾ ವೇಳೆ ಪಾಲಿಕೆ ಆರೋಗ್ಯ ಸೇವೆ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಪಡೆದುಕೊಳ್ಳುತ್ತೇವೆ. ನಗರದಲ್ಲಿನ ಸೂಕ್ಷ್ಮ ಪ್ರದೇಶ, ಕೊಳಗೇರಿ ಪ್ರದೇಶದಲ್ಲಿ ಸಾರ್ವಜನಿಕರಿಗೆ ಬೇಕಾಗಿರುವ ಆರೋಗ್ಯ ಸೇವೆಗೆ ಸಂಬಂಧಿಸಿದ ಅಂಶಗಳನ್ನು ಪಾಲಿಕೆಗೆ ಶಿಫಾರಸ್ಸು ಮಾಡುತ್ತೇವೆ ಎಂದರು.

ಉದಯವಾಣಿ
ಜನಮನದ ಜೀವನಾಡಿ

# ಸ್ವಚ್ಛ ಸರ್ವೇಕ್ಷಣ್: ಅಭಿಪ್ರಾಯ ಸಂಗ್ರಹ


**ಬೆಂಗಳೂರು:** ಬೆಂಗಳೂರು ಸೇರಿ ರಾಜ್ಯದ ಎಲ್ಲಾ ನಗರಗಳಲ್ಲಿ (ಜ.1) ಇಂದಿನಿಂದ 2021ನೇ ಸಾಲಿನ ಸ್ವಚ್ಛ ಸರ್ವೇಕ್ಷಣ್‌ನ ಭಾಗವಾದ ಜನಾಭಿಪ್ರಾಯ ಸಂಗ್ರಹ ಅಭಿಯಾನ ಶುರುವಾಗಿದೆ. ಸ್ವಚ್ಛ ಸರ್ವೇಕ್ಷಣ್‌ನ ಭಾಗವಾಗಿ ಆಯಾ ನಗರದಲ್ಲಿನ ಸ್ವಚ್ಛತೆ ಹಾಗೂ ಕಸ ವಿಲೇವಾರಿ ವಿಧಾನಗಳ ಪಾಲನೆ ಬಗ್ಗೆ ಸಾರ್ವಜನಿಕರಿಂದಲೇ ತಿಳಿದು ಕೊಳ್ಳಲು ಕೇಂದ್ರ ಸರ್ಕಾರ ಸ್ವಚ್ಛ ಸರ್ವೇಕ್ಷಣ್‌ನ ಭಾಗವಾಗಿ ಅಭಿಯಾನವನ್ನು ಪ್ರತಿ ವರ್ಷ ನಡೆಸುತ್ತದೆ. ಸಾರ್ವಜನಿಕರ ಅಭಿಪ್ರಾಯಕ್ಕಾಗಿ 1,800 ಅಂಕ ನಿಗದಿಪಡಿಸಲಾಗಿದೆ. ರ್‍ಯಾಂಕಿಂಗ್‌ನ ಮೇಲೂ ಸಾರ್ವಜನಿಕರ ಅಭಿಪ್ರಾಯ ಪ್ರಮಾಣ ಪರಿಣಾಮ ಬೀರುತ್ತದೆ. ರಾಜ್ಯದಲ್ಲಿ ಯಾವುದೇ ನಗರದಲ್ಲಿದ್ದರೂ, ಸಾರ್ವಜನಿಕರು swachhsurvekshan2021.org ಲಿಂಕ್‌ನ ಮೂಲಕ ನಿರ್ದಿಷ್ಟ ನಗರವನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಅಭಿಪ್ರಾಯ ದಾಖಲಿಸಬಹುದಾಗಿದೆ. ಅಭಿಯಾನ ಜ.1ರಿಂದ ಮಾ.31ರ ವರೆಗೆ ನಡೆಯಲಿದೆ.

ಉದಯವಾಣಿ
ಜನಮನದ ಜೀವನಾಡಿ

# ಖುಷಿಯಿಂದಲೇ ಶಾಲೆಗೆ ಬಂದರು...

## ಮಕ್ಕಳಿಗೆ ಆರತಿ ಬೆಳಗಿ ಸ್ವಾಗತ ಕೋರಿದ ಶಿಕ್ಷಕಿಯರು









**ಬೆಂಗಳೂರು:** ಬಿಬಿಎಂಪಿ ಶಾಲೆಗಳಿಗೆ ಶುಕ್ರವಾರ ಮೊದಲ ದಿನವೇ ಎಸ್ಸೆಸ್ಸೆಲ್ಸಿ 860 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಪಿಯುಸಿ 654 ವಿದ್ಯಾರ್ಥಿಗಳು ಹಾಜರಾಗಿದ್ದಾರೆ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ.ಮಂಜುನಾಥ್ ತಿಳಿಸಿದ್ದಾರೆ.

ಈ ಸಂಬಂಧ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊರೊನಾ ಸೋಂಕು ಭೀತಿ ನಡುವೆಯೂ ವಿದ್ಯಾರ್ಥಿಗಳು ಉತ್ಸಾಹದಿಂದ ಶಾಲಾ - ಕಾಲೇಜುಗಳಿಗೆ ಬಂದಿದ್ದಾರೆ. ಮೊದಲ ದಿನ ಪಾಲಿಕೆ 33 ಪ್ರೌಢಶಾಲೆಗಳ 2,190 ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಲ್ಲಿ 860(ಶೇ.40) ಹಾಗೂ 15 ಪಿಯು ಕಾಲೇಜುಗಳ 2,140 ವಿದ್ಯಾರ್ಥಿಗಳಲ್ಲಿ 654 (ಶೇ.31) ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಮಕ್ಕಳ ಆರೋಗ್ಯ ದೃಷ್ಟಿಯಿಂದ ಎಲ್ಲಾ ಮುಂಜಾಗ್ರತಾ ಕ್ರಮ, ಕೊರೊನಾ ಸೋಂಕು ತಡೆ ನಿಯಮಗಳನ್ನು ಪಾಲನೆ ಮಾಡಲಾಗಿದೆ ಎಂದರು.

ಜೆ.ಮಂಜುನಾಥ್ ಅವರು ಶ್ರೀರಾಮಪುರದ ಪ್ರೌಢ ಶಾಲೆ, ಪದವಿ ಪೂರ್ವ ಕಾಲೇಜಿಗೆ ಶುಕ್ರವಾರ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿದರು. ಈ ವೇಳೆ ಪಾಲಿಕೆ ಶಿಕ್ಷಣ ಸಹಾಯಕ ಆಯುಕ್ತ ನಾಗೇಂದ್ರನಾಯ್ಕ, ಶಿಕ್ಷಣಾಧಿಕಾರಿ ಹರೀಶ್ ಕುಮಾರ್ ಮತ್ತಿತರರಿದ್ದರು.



ಸಂಯುಕ್ತ ಕರ್ನಾಟಕ

## ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕಲರವ | ಮಾಸ್ಕ್ ಧರಿಸಿ ಒಳಗೆ ಬಾ

# ತೆರೆಯಿತು ಶಾಲೆಗಳ ಬಾಗಿಲು...

**ಸಂ.ಕ.ಸಮಾಚಾರ ಬೆಂಗಳೂರು**

ಕೊರೊನಾ ಗುಮ್ಮಗೆ ಅಂಜಿ ಕಳೆದ ಎಂಟು ತಿಂಗಳುಗಳಿಂದ ಮನೆಯ ನಾಲ್ಕು ಗೋಡೆಗಳ ನಡುವೆ ಬಂಧಿಯಾಗಿದ್ದ ಶಾಲಾ ಮಕ್ಕಳು ಶುಕ್ರವಾರ ಆರಂಭವಾದ ಶಾಲಾ-ಕಾಲೇಜುಗಳತ್ತ ಹೆಜ್ಜೆ ಹಾಕುತ್ತಿದ್ದ ದೃಶ್ಯಗಳು ರಾಜಧಾನಿಯ ಬೀದಿಗಳಲ್ಲಿ ಕಂಡುಬಂತು.

ಈ ಎಂಟು ತಿಂಗಳು ಕಾಲ ಮಕ್ಕಳನ್ನು ಮನೆಯಲ್ಲಿ ಕೂಡಿಹಾಕುವಲ್ಲಿ ಹೆತ್ತವರಿಗೆ ಸಾಕು ಬೇಕಾಗಿಹೋಯಿತು. ಕೆಲವು ಮಕ್ಕಳು ಈ ಎಂಟು ತಿಂಗಳ ಕಾಲ ಓದುವುದಕ್ಕಿಂತಲೂ ಟಿವಿ-ಮೊಬೈಲ್‌ಗಳೊಂದಿಗೆ ಹೆಚ್ಚು ಕಾಲ ಕಳೆಯುತ್ತಿದ್ದರು. ಹೆತ್ತವರು ಕೊಂಚ ಯಾಮಾರಿದರೆ ಸಾಕು ಬಹುತೇಕ ಮಕ್ಕಳು ತಮ್ಮ ಮಿತ್ರರೊಂದಿಗೆ ಆಟವಾಡಲು ಬೀದಿಗೆ ಹೋಗುತ್ತಿದ್ದರು. ಬೀದಿಗೆ ಹೋದ ಮಕ್ಕಳನ್ನು ಪುನಃ ಮನೆಗೆ ಕರೆದುಕೊಂಡು ಬರುವಷ್ಟರಲ್ಲೇ ಹೆತ್ತವರು ಪಡುತ್ತಿದ್ದ ಪಾಡು ಅಷ್ಟಿಷ್ಟಲ್ಲ.

ಶುಕ್ರವಾರದಿಂದ ಶಾಲೆಗಳು ಆರಂಭವಾಗಿರುವುದು ಕೆಲವು ಪೋಷಕರಿಗೆ ನೆಮ್ಮದಿ ಉಂಟುಮಾಡಿದ್ದರೆ ಮತ್ತಷ್ಟು ಪೋಷಕರಿಗೆ ಒಂದು ರೀತಿಯ ಕಸಿವಿಸಿ ಆಗುತ್ತಿದೆ. ಇನ್ನು ಶಾಲೆಗಳಿಗೆ ಹೋದ ಮಕ್ಕಳು ಮನೆಗೆ ವಾಪಸಾಗುತ್ತಿದ್ದಂತೆ ಪೋಷಕರು ಮಕ್ಕಳಿಗೆ ಉಪ್ಪು ನೀರಿನಿಂದ ಬಾಯಿಯನ್ನು ಮುಕ್ಕಳಿಸಿ, ಸ್ನಾನ ಮಾಡಿಸಿ ಮನೆ ಪ್ರವೇಶಿಸಬೇಕೆಂದು ಹುಕುಂ ನೀಡುತ್ತಿದ್ದರು.

ಎಂಟು ತಿಂಗಳಿಂದ ಮಕ್ಕಳಿಲ್ಲದ ಶಾಲಾ ಕೊಠಡಿಗಳು ಧೂಳು ಜೊತೆಗೆ ಖಾಲಿ.. ಖಾಲಿಯಾಗಿತ್ತು. ಬೆಂಚು-ಶಾಲಾ ಗೋಡೆಗಳು, ಆಟ ಮತ್ತು ಊಟದ ಮೈದಾನಗಳು ಸಪ್ಪೆಮೋರೆ ಮಾಡಿ ಮಕ್ಕಳ ಹಾದಿಯನ್ನು ನೋಡುತ್ತಿತ್ತು.



ಪಿಇಎಸ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾದರು.

> “ಶಾಲೆಗೆ ಬಂದ ಮಕ್ಕಳಿಗೆ ಥರ್ಮಲ್ ಸ್ಕ್ಯಾನಿಂಗ್, ಕೈಗಳಿಗೆ ಸ್ಯಾನಿಟೈಸರ್ ಹಾಕಲಾಯಿತು. ಮಾಸ್ಕ್ ತೆರೆಯದಂತೆ ಹಾಗೂ ಸಾಮಾಜಿಕ ಅಂತರ ಕಾಪಾಡಬೇಕೆಂದು ತಿಳಿಹೇಳಲಾಯಿತು.
>
> ■ **ಅಂಬಿಕಾ** | ಶಾಲಾ ಶಿಕ್ಷಕಿ

ಶಾಲಾ ಆವರಣದಲ್ಲಿ ಧೂಳು ಮತ್ತು ಕಸದ ರಾಶಿ ತುಂಬಿಕೊಂಡಿತ್ತು. ಆದರೆ ಇಂದು ಬಹುತೇಕ ಶಾಲೆಗಳು ಮಧವಣಗಿತ್ತಿಯಂತೆ ಸಿಂಗಾರಗೊಂಡಿತ್ತು. ಅಂದರೆ ಶಾಲೆಗಳ ಆವರಣಗಳು ತಳಿರು ತೋರಣ, ಹೂವು-ಬೆಲೂನ್, ಬಾಳೆಕಂಬಗಳಿಂದ ಮತ್ತು ರಂಗುರಂಗಿನ ರಂಗೋಲಿಯಿಂದ ಸಿಂಗರಿಸಲಾಗಿತ್ತು.

> “ಎಂಟು ತಿಂಗಳಿನಿಂದ ಶಿಕ್ಷಕರು-ಮಿತ್ರರನ್ನು ಭೇಟಿಯಾಗದೆ ಬೇಸರವಾಗಿತ್ತು. 24 ಗಂಟೆಗಳು ಸಹ ಮನೆಯ ನಾಲ್ಕು ಗೋಡೆಗಳ ನಡುವೆ ಆಟ-ಪಾಠ-ಟಿವಿ ನೋಡುವುದಾಗಿತ್ತು. ಶಾಲೆ ಆರಂಭವಾಗಿರುವುದು ಸಂತೋಷವಾಗಿದೆ.
>
> ■ **ರೋಹಿತ್** | ಶಾಲಾ ವಿದ್ಯಾರ್ಥಿ

ಇನ್ನು ಬೆಳಗ್ಗೆ ಮಕ್ಕಳು ಶಾಲೆಗಳಿಗೆ ಬರುತ್ತಿದ್ದಂತೆ ಶಿಕ್ಷಕರು ಮಕ್ಕಳ ಕೈಗಳಿಗೆ ಹೂವು-ಮಿಠಾಯಿ ಕೊಟ್ಟು ಬರಮಾಡಿಕೊಳ್ಳುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿತ್ತು. ಮಕ್ಕಳು ಶಾಲೆಗೆ ಪ್ರವೇಶಿಸುವ ಮುನ್ನ ಥರ್ಮಲ್ ಸ್ಕ್ಯಾನರ್‌ನಿಂದ ಪರೀಕ್ಷೆ ಮಾಡಲಾಯಿತು ಹಾಗೂ ಸ್ಯಾನಿಟೈಸರ್ ಹಾಕಿ ಶಾಲೆಯೊಳಗೆ ಬಿಡಲಾಗುತ್ತಿತ್ತು.

## ಪಾಲಿಕೆ ಶಾಲೆಗಳಿಗೆ ಶೇ.40 ವಿದ್ಯಾರ್ಥಿಗಳ ಹಾಜರಿ

**ಬೆಂಗಳೂರು:** ಎಂಟು ತಿಂಗಳ ನಂತರ ಶಾಲೆಗಳು ಆರಂಭವಾಗಿದ್ದು ಬಿಬಿಎಂಪಿ ಶಾಲೆಗಳ ಶೇ.40ರಷ್ಟು ವಿದ್ಯಾರ್ಥಿಗಳು ಪ್ರಥಮ ದಿನ ಹಾಜರಾಗಿದ್ದಾರೆ.

ಬಿಬಿಎಂಪಿ ನಡೆಸುತ್ತಿರುವ ಶಾಲೆಗಳಿಗೆ ಮೊದಲ ದಿನ ಎಸ್‌ಎಸ್‌ಎಲ್‌ಸಿಯ 860 ಎಸ್ಸೆಸ್ಸೆಲ್ಸಿ-ದ್ವಿತೀಯ ಪಿಯು 654 ವಿದ್ಯಾರ್ಥಿ ಗಳು ಕಾಲೇಜಿಗೆ ಆಗಮಿಸಿದ್ದು ಅವರಲ್ಲಿ ಹುರುಪು ಮೂಡಿರುವುದು ಕಾಣಿಸಿತು.

ವಿದ್ಯಾರ್ಥಿಗಳು ಶಾಲಾ-ಕಾಲೇಜಿಗೆ ಆಗಮಿಸಿರುವ ಕುರಿತಂತೆ ಪಾಲಿಕೆ ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ್ ಸುದ್ದಿಗಾರರಿಗೆ ಮಾಹಿತಿ ನೀಡಿ, ಸುಮಾರು 8 ತಿಂಗಳ ನಂತರ ಕೋವಿಡ್ ಆತಂಕದ ನಡುವೆಯೂ ಶಾಲಾ-ಕಾಲೇಜುಗಳು ಆರಂಭವಾಗಿದೆ. ಮೊದಲ ದಿನ ಪಾಲಿಕೆಯ 33 ಪ್ರೌಢಶಾಲೆಗಳ 2,190 ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಲ್ಲಿ 860 (ಶೇ.40) ಹಾಗೂ 15 ಪಿ.ಯು ಕಾಲೇಜುಗಳ 2,140 ವಿದ್ಯಾರ್ಥಿಗಳಲ್ಲಿ 654 (ಶೇ.31) ಮಂದಿ ಆಗಮಿಸಿದ್ದರು. ಶಾಲೆಗಳಿಗೆ ಸೋಂಕು ನಿವಾರಕ ದ್ರಾವಣ ಸಿಂಪಡಣೆ, ಸಾಮಾಜಿಕ ಅಂತರದೊಂದಿಗೆ 15 ರಿಂದ 20 ಮಕ್ಕಳಿಗೆ ಮಾತ್ರ ತರಗತಿಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಶಾಲಾ ಪ್ರವೇಶದ ವೇಳೆ ಥರ್ಮಲ್ ಸ್ಕ್ಯಾನರ್‌ನಿಂದ ಪರೀಕ್ಷೆ ಮಾಡಿ, ಸ್ಯಾನಿಟೈಸರ್ ಹಾಕಿ



ಶಾಲೆಯೊಳಗೆ ಬಿಡಲಾಗುತ್ತಿದೆ ಎಂದರು. ಶಿಕ್ಷಕರು ಎಲ್ಲ ವಿಷಯಗಳ ಬಗ್ಗೆ ಅಗತ್ಯ ನೋಟ್ಸ್‌ಗಳನ್ನು ಆನ್‌ಲೈನ್ ತರಗತಿ ಮೂಲಕವೇ ನೀಡಿದ್ದು, ಪರೀಕ್ಷೆಗೆ ತಯಾರಾಗಲು ಪ್ರೋತ್ಸಾಹ ನೀಡಲಾಯಿತು ಎಂದರು. ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ್ ಅವರು ಶ್ರೀರಾಮಪುರದ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿದರು. ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಸ್ಕ್ ಧರಿಸುವುದು, ಆಗಾಗ್ಗೆ ಕೈಗಳನ್ನು ತೊಳೆಯುವುದು ಹಾಗೂ ವ್ಯಕ್ತಿಗತ ಅಂತರ ಕಾಯ್ದುಕೊಳ್ಳುವ ಕುರಿತು ಅರಿವು ಮೂಡಿಸಿದರು.

ಸಂಯುಕ್ತ ಕರ್ನಾಟಕ

# ಪೌರಕಾರ್ಮಿಕರು ನಿರಾಳ

ಸಂ.ಕ.ಸಮಾಚಾರ ಬೆಂಗಳೂರು

ಕೊರೊನಾ ಹಿನ್ನೆಲೆಯಲ್ಲಿ ನಗರದಲ್ಲಿ ಹೊಸ ವರ್ಷಾಚರಣೆಗೆ ಕಡಿವಾಣ ಹಾಕಿದ್ದರಿಂದ ಈ ವರ್ಷ ಪೌರಕಾರ್ಮಿಕರು ಕೊಂಚ ನಿರಾಳರಾಗಿದ್ದಾರೆ.

ಪ್ರತಿ ವರ್ಷ ಹೊಸ ವರ್ಷಾಚರಣೆ ವೇಳೆ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಭಾಗಶಃ ರೆಸಿಡೆನ್ಸಿ ರಸ್ತೆಗಳಲ್ಲಿ ಕಸದ ರಾಶಿಯೇ ಬೀಳುತ್ತಿತ್ತು. ಇದನ್ನು ಸ್ವಚ್ಛ ಮಾಡಲು ಪೌರಕಾರ್ಮಿಕರು ಮೂರರಿಂದ ನಾಲ್ಕು ಗಂಟೆಗಳ ಕಾಲ ಕೆಲಸ ಮಾಡಬೇಕಾಗಿತ್ತು. ಆದರೆ, ಈ ಬಾರಿ ಅವರು ನಿರಾಳರಾಗುವಂತಾಗಿದೆ.

ಈ ಹಿಂದಿನ ವರ್ಷದಂತೆ ಈ ರಸ್ತೆಗಳಲ್ಲಿ ಹೆಚ್ಚು ಜನ ಸೇರಲು ಪೊಲೀಸರು ಅವಕಾಶವನ್ನೇ ನೀಡಲಿಲ್ಲ. ರಾತ್ರಿ 8ರ ನಂತರ ಈ ಪ್ರಮುಖ ರಸ್ತೆಗಳಲ್ಲಿ ಬ್ಯಾರಿಕೇಡ್ ಹಾಕಿ ಜನರು, ವಾಹನಗಳ ಪ್ರವೇಶಕ್ಕೆ ಕಡಿವಾಣ ಹಾಕಿದ್ದರು. ಪಬ್, ಬಾರ್, ರೆಸ್ಟೋರೆಂಟ್‌ಗಳಲ್ಲಿ ಮುಂಚಿತವಾಗಿ ಆಸನ ಕಾಯ್ದಿರಿಸಿದ್ದವರು ಕೂಪನ್ ತೋರಿಸಿದಲ್ಲಿ ಮಾತ್ರ ಈ ರಸ್ತೆಗಳಲ್ಲಿ ಪ್ರವೇಶಕ್ಕೆ ಅವಕಾಶ ನೀಡಲಾಗಿತ್ತು. ಇದನ್ನು ಹೊರತುಪಡಿಸಿದರೆ ಬೇರೆಯವರಿಗೆ ಅವಕಾಶವಿರಲಿಲ್ಲ.



ಇನ್ನು ಹೊಸ ವರ್ಷ ಎಂದರೆ ಇಲ್ಲಿ ಬಗೆಬಗೆಯ ಆಹಾರ ಪದಾರ್ಥ, ಕುರುಕಲು ತಿಂಡಿಗಳು ಮಾತ್ರವಲ್ಲದೆ, ಬರ್ಗರ್, ಸಮೋಸಾ, ಕಳ್ಳೆಪುರಿ ಸೇರಿದಂತೆ ಇನ್ನಿತರ ವಸ್ತುಗಳನ್ನು ಪಾದಚಾರಿ ಮಾರ್ಗದಲ್ಲೇ ಮಾರಾಟ ಮಾಡಲಾಗುತ್ತಿತ್ತು. ಇದನ್ನು ಕಾಗದದಲ್ಲಿ ಸುತ್ತಿ ನೀಡಲಾಗುತ್ತಿತ್ತು. ತಿಂಡಿಯನ್ನು ತಿಂದವರು ಕಾಗದವನ್ನು ರಸ್ತೆ ಬದಿ ಬಿಸಾಡಲಾಗುತ್ತಿತ್ತು. ಇದರಿಂದ ವರ್ಷಾಚರಣೆ ಮಾರನೆ ದಿನ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ಗಳಲ್ಲಿ ಕಸದ ರಾಶಿಯೇ ಬಿದ್ದಿರುತ್ತಿತ್ತು. ಇದನ್ನು ತೆರವು ಮಾಡಲು ಅಂದು ನೂರಾರು ಮಂದಿ ಪೌರಕಾರ್ಮಿಕರನ್ನು ನಿಯೋಜನೆ ಮಾಡಲಾಗುತ್ತಿತ್ತಲ್ಲದೆ, ನಾಲ್ಕಾರು ಕಾಂಪಾಕ್ಟರ್‌ಗಳನ್ನು ಇಲ್ಲಿ ನಿಲ್ಲಿಸಿ ಬೆಳಗ್ಗೆ 7 ಗಂಟೆಯೊಳಗೆ ಈ ಪ್ರಮುಖ ರಸ್ತೆಗಳಲ್ಲಿನ ಕಸವನ್ನು ತೆರವು ಮಾಡಲಾಗುತ್ತಿತ್ತು.

ಈ ಬಾರಿ ಅಂತಹ ವಾತಾವರಣ ಕಂಡುಬರಲಿಲ್ಲ. ಕೊರೊನಾ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನಿಷೇಧಾಜ್ಞೆ ಜಾರಿ ಮಾಡಿದ್ದರಿಂದ ಜನರ ಗುಂಪು ಸೇರದೇ ಇದ್ದುದರಿಂದ ಈ ರಸ್ತೆಗಳಲ್ಲಿ ಪ್ರತಿದಿನ ಉತ್ಪತ್ತಿಯಾಗುತ್ತಿದ್ದುದಕ್ಕಿಂತ ಕಡಿಮೆ ಕಸ ಉತ್ಪತ್ತಿಯಾಗಿತ್ತು. ಈ ಎಲ್ಲ ರಸ್ತೆಗಳಲ್ಲಿ ಸಂಗ್ರಹವಾದ ಕಸ ಒಂದು ಲಾರಿಗಿಂತಲೂ ಕಡಿಮೆಯಾಗಿತ್ತು.

ಸಂಯುಕ್ತ ಕರ್ನಾಟಕ

# 464 ಮಂದಿಗೆ ಸೋಂಕು

ಬೆಂಗಳೂರು: ರಾಜಧಾನಿಯಲ್ಲಿ ಕೊರೊನಾ ದಿನದಿಂದ ದಿನಕ್ಕೆ ಇಳಿಕೆಯಾಗಿದ್ದು ಕಳೆದ 24 ಗಂಟೆಗಳಲ್ಲಿ 464 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು ಸೋಂಕಿತರ ಸಂಖ್ಯೆ 3,88,850ಕ್ಕೆ ಏರಿಕೆಯಾಗಿದೆ.

ಶುಕ್ರವಾರ ನಾಲ್ವರು ಮೃತಪಟ್ಟಿದ್ದು, ಇದುವರೆಗೆ 4321 ಮಂದಿ ಸಾವನ್ನಪ್ಪಿದ್ದಾರೆ. 608 ಮಂದಿ ಗುಣಮುಖರಾಗಿ ಡಿಸ್ಚಾರ್ಜ್ ಆಗಿದ್ದು ಇದುವರೆಗೂ 3,77,443 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. 7085 ಸಕ್ರಿಯ ಪ್ರಕರಣಗಳು ಇವೆ.

ಕಳೆದ 24 ಗಂಟೆಗಳಲ್ಲಿ ರಾಜ್ಯದಲ್ಲಿ ಶುಕ್ರವಾರ 877 ಮಂದಿಗೆ ಕೊರೊನಾ ದೃಢಪಟ್ಟಿದ್ದು ಈ ಮೂಲಕ ಸೋಂಕಿತರ ಸಂಖ್ಯೆ 9,20,373ಕ್ಕೆ ಏರಿಕೆ ಆಗಿದೆ. 6 ಮಂದಿ ಕೋವಿಡ್‌ಗೆ ಮೃತರಾಗಿದ್ದು, ಸಾವಿನ ಸಂಖ್ಯೆ 12,096ಕ್ಕೆ ಏರಿಕೆ ಆಗಿದೆ. 1,084 ಸೋಂಕಿತರು ಗುಣಮುಖರಾಗಿದ್ದು ಈವರೆಗೆ 8,97,200 ಡಿಸ್ಚಾರ್ಜ್ ಆಗಿದ್ದಾರೆ.

ಸಂಯುಕ್ತ ಕರ್ನಾಟ

ಸಂಯುಕ್ತ ಕರ್ನಾಟಕ




ಹೊಸ ವರ್ಷದ ಸಂಭ್ರಮಾಚರಣೆಯ ಬಳಿಕ ಪಾಲಿಕೆ ವಾಹನಗಳಿಂದ ಎಂ.ಜಿ.ರಸ್ತೆಯಲ್ಲಿ ಸ್ಯಾನಿಟೈಸರ್ ಮಾಡಲಾಯಿತು.

ಸಂಯುಕ್ತ ಕರ್ನಾಟ

ಸಂಯುಕ್ತ ಕರ್ನಾಟಕ

# ಕೊರೊನಾ ಲಸಿಕೆ ತಾಲೀಮು



**ಸಂ.ಕ.ಸಮಾಚಾರ ಬೆಂಗಳೂರು**

ನಗರದಲ್ಲಿ ಕೋವಿಡ್ ಸೋಂಕು ತಡೆ ಲಸಿಕೆ ತಾಲೀಮು ಜ.2ರಂದು ಪ್ರಾರಂಭವಾಗಲಿದ್ದು ಮೊದಲ ಹಂತದಲ್ಲಿ 75 ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಯಲಿದೆ.

ನಗರದ ದಕ್ಷಿಣ ವಲಯದ ವಿದ್ಯಾಪೀಠ ಸಾರ್ವಜನಿಕ ಆರೋಗ್ಯ ಕೇಂದ್ರ, ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯ ಸಾರ್ವಜನಿಕ ಆರೋಗ್ಯ ಕೇಂದ್ರ ಹಾಗೂ ಬೆಂಗಳೂರು ನಗರ ಜಿಲ್ಲೆ ಆನೇಕಲ್ ಭಾಗದ ಹರ್ಗಾದೆಯಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಸೋಂಕು ತಡೆ ಲಸಿಕೆ ತಾಲೀಮು ಪ್ರಾರಂಭವಾಗಲಿದೆ.

ಈ ಕುರಿತು ಪಾಲಿಕೆಯ ಆಡಳಿತಾಧಿಕಾರಿ ಗೌರವ್‌ಗುಪ್ತ ಅವರು, ಸುದ್ದಿಗಾರರಿಗೆ ವಿವರಿಸಿ, ಶನಿವಾರ ಬೆಳಗ್ಗೆ 9ರಿಂದ 11ಗಂಟೆಯವರೆಗೆ ಎರಡು ಗಂಟೆಗಳ ಕಾಲ ಲಸಿಕೆ ತಾಲೀಮು ಪ್ರಕ್ರಿಯೆ ನಡೆಯಲಿದೆ. ಇದಕ್ಕಾಗಿ ಪ್ರತಿ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ 25 ಜನ ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದ್ದು, ಮೂರು ಸಾರ್ವಜನಿಕ ಆರೋಗ್ಯ ಕೇಂದ್ರಗಳಿಂದ 75 ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಯಲಿದೆ ಎಂದು ಹೇಳಿದರು.

ಕೋವಿಡ್ ಸೋಂಕು ತಡೆ ಲಸಿಕೆ ನೀಡಲು ನಗರದಲ್ಲಿ ಒಟ್ಟು 1,517 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದ್ದು, ಜನವರಿ ಕೊನೆಯಿಂದ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಲಸಿಕೆ ನೀಡುವ ಕಾರ್ಯ ಪ್ರಾರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಹೊಸ ದಿಗಂತ

ಹೊಸ ದಿಗಂತ

1

02 Jan 2021

## ಬೆಂಗಳೂರು, ಕಲಬುರಗಿ, ಶಿವಮೊಗ್ಗ ಸೇರಿ 5 ಜಿಲ್ಲೆಗಳಲ್ಲಿ ತಾಲೀಮು

# ರಾಜ್ಯದಲ್ಲಿ ಇಂದು ಲಸಿಕೆ ಪ್ರಯೋಗ

• ದಿಗಂತ ವರದಿ, ಬೆಂಗಳೂರು

ಕರ್ನಾಟಕ ಸೇರಿದಂತೆ ದೇಶದ ಎಲ್ಲಾ ರಾಜ್ಯಗಳಲ್ಲೂ ಕೊರೋನಾ ಲಸಿಕೆ ತಾಲೀಮು ಇಂದಿನಿಂದ ಆರಂಭವಾಗಲಿದ್ದು, ರಾಜ್ಯದಲ್ಲಿ ಐದು ಕೇಂದ್ರಗಳನ್ನು ಗುರುತಿಸಲಾಗಿದೆ. ಬೆಂಗಳೂರು, ಕಲಬುರಗಿ, ಮೈಸೂರು, ಬೆಳಗಾವಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಲಸಿಕೆ ತಾಲೀಮು ನಡೆಸಲಾಗುತ್ತಿದ್ದು, ನಿಗದಿಪಡಿಸಿದ ತಾಲ್ಲೂಕು, ಜಿಲ್ಲಾ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಿಯೋಜಿತ ಆರೋಗ್ಯ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗುತ್ತಿದೆ.

ತಾಲೀಮುಗೆ ಮೂರು ಪ್ರತ್ಯೇಕ ಕೊಠಡಿಗಳನ್ನು ನಿಯೋಜಿಸಲಾಗುತ್ತಿದ್ದು, ಲಸಿಕೆ ಸರಬರಾಜು, ಸಂಗ್ರಹ, ಕೋಲ್ಡ್ ಚೈನ್ ಮ್ಯಾನೇಜ್ಮೆಂಟ್ ಎಲ್ಲದಕ್ಕೂ ಸಿದ್ಧತೆ ಮಾಡಿಕೊಳ್ಳಲಾಗಿದೆ. ದೇಶಾದ್ಯಂತ 96,000 ಸಾವಿರ ಜನರಿಗೆ ಲಸಿಕೆ ಕೊಡುವ ತರಬೇತಿ ನೀಡಲಾಗಿದ್ದು, ಈಗಾಗಲೇ 719 ಜಿಲ್ಲೆಗಳಲ್ಲಿ ತರಬೇತಿ ನೀಡಲಾಗಿದೆ. ಜನವರಿ ತಿಂಗಳಲ್ಲಿ ದೇಶಾದ್ಯಂತ ಕೊರೋನಾ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡುವ ಗುರಿ ಹೊಂದಿರುವ ಕೇಂದ್ರ ಇದಕ್ಕೆ ಪೂರ್ವಭಾವಿಯಾಗಿ ಜನವರಿ 2ರಿಂದ ದೇಶಾದ್ಯಂತ ಕೊರೋನಾ ಲಸಿಕೆ ತಾಲೀಮು ನಡೆಸಲು ಮುಂದಾಗಿದೆ. ಲಸಿಕೆ ತಾಲೀಮುನಲ್ಲಿ ಭಾಗವಹಿಸುವವರಿಗೆ ಪರೀಕ್ಷಾ ಕೊರೋನಾ ವೈರಸ್ ಲಸಿಕೆ ನೀಡಲಾಗುತ್ತದೆ. ಅಲ್ಲದೇ ಲಸಿಕೆ ವಿತರಣೆ ಹಾಗೂ ಹಂಚಿಕೆಯ ಪ್ರಕ್ರಿಯೆಯ ತಾಲೀಮು ನಡೆಸಲಾಗುತ್ತದೆ. ದೇಶಾದ್ಯಂತ ವಿವಿಧ ರಾಜ್ಯಗಳಲ್ಲಿ ಎರಡು ಕೇಂದ್ರಗಳಲ್ಲಿ ಮಾತ್ರ ಲಸಿಕೆ ತಾಲೀಮು ನಡೆಸಲಾಗುತ್ತಿದ್ದು, ಕರ್ನಾಟಕದಲ್ಲಿ 5 ಕೇಂದ್ರಗಳಲ್ಲಿ ಲಸಿಕೆ ಪ್ರಯೋಗ ನಡೆಯಲಿದೆ.



“5 ಜಿಲ್ಲೆಗಳಲ್ಲಿ ಲಸಿಕೆ ಪರೀಕ್ಷಾರ್ಥವಾಗಿ ನೀಡಲಾಗುತ್ತದೆ. ಒಂದು ಸ್ಥಳದಲ್ಲಿ ಆರೋಗ್ಯ ಸಿಬ್ಬಂದಿಯನ್ನು ಸೇರಿಸಿ 25 ಜನರಿಗೆ ಕೊಡುವ ವ್ಯವಸ್ಥೆ ಮಾಡಲಾಗಿದೆ. ಅವರ ದೂರವಾಣಿ ಸಂಖ್ಯೆಗಳಿಗೇ ಸಂದೇಶ ಹೋಗಲಿದೆ. ಹೊಸ ವರ್ಷದಲ್ಲೇ ಲಸಿಕೆ ನೀಡುವ ಮೂಲಕ ಕೊರೋನಾ ಮುಕ್ತ ರಾಜ್ಯ ಮಾಡಲಾಗುವುದು.

■ ಡಾ.ಕೆ.ಸುಧಾಕರ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

**ಲಸಿಕೆ ರಫ್ತು, ಆಮದಿಗೆ ಅನುಮತಿ**

• ಪುಟ ೫

### ಜನವರಿ ಅಂತ್ಯಕ್ಕೆ ವಿತರಣೆ

ಜನವರಿ ಅಂತ್ಯದೊಳಗೆ ಸೋಂಕಿತರಿಗೆ ಅಧಿಕೃತವಾಗಿ ಲಸಿಕೆ ನೀಡುವ ಕಾರ್ಯ ಪ್ರಾರಂಭಿಸಲು ಆರೋಗ್ಯ ಇಲಾಖೆ ಯೋಜನೆ ರೂಪಿಸುತ್ತಿದೆ. ಇದಕ್ಕಾಗಿ ಬೆಂಗಳೂರಿನ ಒಟ್ಟು 1517 ಆರೋಗ್ಯ ಕೇಂದ್ರಗಳನ್ನು ಲಸಿಕೆ ವಿತರಣೆಗಾಗಿ ಗುರುತಿಸಲಾಗಿದ್ದು, ಆರೋಗ್ಯ ಮೇಲ್ವಿಚಾರಕರು ಸೇರಿದಂತೆ ಸಹಾಯಕರು ದಿನದಲ್ಲಿ 100ಕ್ಕೂ ಹೆಚ್ಚು ಸೋಂಕಿತರಿಗೆ ಲಸಿಕೆ ನೀಡಲಿದ್ದಾರೆ.

ಹೊಸ ದಿಗಂತ

ಹೊಸ ದಿಗಂತ



## ಲಸಿಕೆ ವಿತರಣೆಗೆ 1517 ಆರೋಗ್ಯ ಕೇಂದ್ರಗಳ ಗುರುತು

# ರಾಜಧಾನಿಯಲ್ಲಿ ಇಂದು ಲಸಿಕೆಯ ಡ್ರೈ ರನ್ ಟ್ರಯಲ್

**ಬೆಂಗಳೂರು:** ಕೊರೋನಾ ಸೋಂಕಿಗೆ ಲಸಿಕೆ ವಿತರಣೆ ನಡೆಸಲು ಬೆಂಗಳೂರು ಮಹಾನಗರ ಪಾಲಿಕೆ ಸಜ್ಜಾಗಿದ್ದು, ಜ.2ರಂದು ಬಿಬಿಎಂಪಿ ವ್ಯಾಪ್ತಿಯ ಮೂರು ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ತಾಲೀಮು ನಡೆಯಲಿದೆ.

ಲಸಿಕೆ ತಾಲೀಮು ನಡೆಸಿ ಅದರ ಸಾಧಕ ಬಾಧಕಗಳನ್ನು ಪಟ್ಟಿ ಮಾಡಿ ಅದರ ವರದಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ನಗರ ದಕ್ಷಿಣ ವಲಯದ ವಿದ್ಯಾಪೀಠದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ, ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ ಮತ್ತು ಬೆಂಗಳೂರು ನಗರದ ಹೊರವಲಯದ ವ್ಯಾಪ್ತಿಯಲ್ಲಿರುವ ಆನೇಕಲ್ ವಿಭಾಗದ ಹರ್ಗಾದೆಯಲ್ಲಿರುವ ಸಾರ್ವಜನಿಕರ ಆರೋಗ್ಯ ಕೇಂದ್ರದಲ್ಲಿ ಕೊರೋನಾ ನಿಯಂತ್ರಣ ಲಸಿಕೆ ತಾಲೀಮು ನಡೆಯಲಿದೆ.

ತಲಾ ಒಂದು ಸಾರ್ವಜನಿಕರ ಆರೋಗ್ಯ ಕೇಂದ್ರದಿಂದ 25 ಮಂದಿ ಆರೋಗ್ಯ ಸಿಬ್ಬಂದಿಗಳು ಸೇರಿದಂತೆ ಒಟ್ಟು ಮೂರು ಆರೋಗ್ಯ ಕೇಂದ್ರಗಳಲ್ಲಿ 75 ಮಂದಿ ಆರೋಗ್ಯ ಸಿಬ್ಬಂದಿಗಳನ್ನು ಕೊರೋನಾ ಲಸಿಕೆ ತಾಲೀಮುಗೆ ಆಯ್ಕೆ ಮಾಡಲಾಗಿದೆ. ಲಸಿಕೆ ತಾಲೀಮು ಕಾರ್ಯಕ್ರಮವು ಸುಮಾರು 2ಗಂಟೆ ಹೊತ್ತು ನಡೆಯಲಿದ್ದು, ಬೆಳಗ್ಗೆ 8ಗಂಟೆಗೆ ಆರಂಭವಾಗಲಿದೆ.

- ತಾಲೀಮಿಗೆ ಒಟ್ಟು 75 ಸಿಬ್ಬಂದಿ ಆಯ್ಕೆ
- ಬಿಬಿಎಂಪಿ ವ್ಯಾಪ್ತಿಯ 2, ಹೊರವಲಯದ 1 ಪಿಎಚ್‌ಸಿಯಲ್ಲಿ ಸಿದ್ಧತೆ
- ಡಿಜನವರಿ ಅಂತ್ಯದ ವೇಳೆ ಅಧಿಕೃತ ಲಸಿಕೆ ವಿತರಣೆಗೆ ಯೋಜನೆ




"ಕೊರೋನಾ ಲಸಿಕೆ ಪಡೆಯುವ ಕೊರೋನಾ ವಾರಿಯರ್ಸ್‌ಗಳ ಹೆಸರನ್ನು ಸರ್ಕಾರಕ್ಕೆ ಕಳುಹಿಸಲಾಗುವುದು. ಕೇಂದ್ರ ಸರ್ಕಾರದ ಸೂಚನೆಯಂತೆ ಲಸಿಕೆ ವಿತರಣೆ ಮಾಡಲಾಗುತ್ತಿದ್ದು, ಲಸಿಕೆ ಪಡೆದ ಪ್ರತಿ ವ್ಯಕ್ತಿಗೆ ಸಂದೇಶ ರವಾನೆಯಾಗಲಿದೆ.

■ **ರಾಜೇಂದ್ರ ಚೋಳನ್**, ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ

### ಜನವರಿ ಅಂತ್ಯದ ವೇಳೆ ಲಸಿಕೆ ವಿತರಣೆ

ಜನವರಿ ಅಂತ್ಯದ ವೇಳೆಗೆ ಸೋಂಕಿತರಿಗೆ ಅಧಿಕೃತವಾಗಿ ಲಸಿಕೆ ನೀಡುವ ಕಾರ್ಯ ಪ್ರಾರಂಭಿಸಲು ಆರೋಗ್ಯ ಇಲಾಖೆ ಯೋಜನೆ ರೂಪಿಸಿದೆ. ಇದಕ್ಕಾಗಿ ನಗರದ ಒಟ್ಟು 1517 ಆರೋಗ್ಯ ಕೇಂದ್ರಗಳನ್ನು ಲಸಿಕೆ ವಿತರಣೆಗಾಗಿ ಗುರುತಿಸಲಾಗಿದ್ದು, ಆರೋಗ್ಯ ಮೇಲ್ವಿಚಾರಕರು ಸೇರಿದಂತೆ ಸಹಾಯಕರು ದಿನದಲ್ಲಿ 100ಕ್ಕೂ ಹೆಚ್ಚು ಸೋಂಕಿತರಿಗೆ ವ್ಯಾಕ್ಸಿನ್ ನೀಡಲಿದ್ದಾರೆ.

ಹೊಸ ದಿಗಂತ
12
02 Jan 2021

# ಪಾಲಿಕೆ ಶಾಲೆ: ಅರ್ಧಕ್ಕಿಂತ ಕಡಿಮೆ ಹಾಜರಾತಿ

**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಶಾಲಾ ಕಾಲೇಜುಗಳು ಪರಾಂಭಗೊಂಡಿದ್ದು, ಪ್ರೌಢ ಶಾಲೆಯಲ್ಲಿ ಮೊದಲ ದಿನ ಶೇ.40ರಷ್ಟು ವಿದ್ಯಾರ್ಥಿಗಳು ಹಾಜರಾದರೆ ಪಿಯುಸಿ ಕಾಲೇಜುಗಳಲ್ಲಿ ಶೇ.69 ರಷ್ಟು ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಪಾಲಿಕೆ ಅಧೀನದ 33 ಪ್ರೌಢ ಶಾಲೆಗಳಲ್ಲಿ ಒಟ್ಟು 2190 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಗೆ ದಾಖಲಾತಿ ಮಾಡಿಕೊಂಡಿದ್ದು, ಈ ಪೈಕಿ ಶಾಲಾ ಪ್ರಾರಂಭದ ದಿನ 860 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಇನ್ನು 15 ಪಿಯುಸಿ ಕಾಲೇಜುಗಳಿಗೆ ದಾಖಲಾದ 2140 ವಿದ್ಯಾರ್ಥಿಗಳ ಪೈಕಿ 645 ವಿದ್ಯಾರ್ಥಿಗಳು ಹಾಜರಾಗಿದ್ದಾರೆ.

ಶಾಲಾ ಕಾಲೇಜು ಆರಂಭಗೊಂಡ ಹಿನ್ನೆಲೆ ಕೊರೋನಾ ಮುಂಜಾಗ್ರತಾ ಕ್ರಮಗಳ ಅಳವಡಿಕೆ ಬಗ್ಗೆ ತಪಾಸಣೆ ನಡೆಸಲು ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಜೆ.ಮಂಜುನಾಥ್ ಅವರು ಶ್ರೀರಾಮಪುರದ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿದರು. ಈ ವೇಳೆ ಅವರು ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿ ಸರ್ಕಾರ ಸೂಚಿಸಿದ ಎಲ್ಲಾ ನಿಯಮಗಳನ್ನು ಪಾಲಿಸುವಂತೆ ಮತ್ತು ತರಗತಿಗಳಿಗೆ ಬರುವ ವೇಳೆ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಕೈಗಳನ್ನು ತೊಳೆಯುತ್ತಿರಬೇಕು, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಎಂಬ ಇತ್ಯಾದಿ ಸಲಹೆಗಳನ್ನು ನೀಡಿದರು. ಶಿಕ್ಷಣ ವಿಭಾಗದ ಸಹಾಯಕ ಆಯುಕ್ತ ನಾಗೇಂದ್ರ ನಾಯ್ಕ್, ಶಿಕ್ಷಣ ವಿಭಾಗದ ವಿದ್ಯಾಧಿಕಾರಿ ಹರೀಶ್ ಹಾಗೂ ವಿದ್ಯಾಧಿಕಾರಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಪರೀಕ್ಷಕರು ಪಾಲಿಕೆಯ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕೋವಿಡ್-19 ಮಾರ್ಗಸೂಚಿಗಳನ್ನು ಚಾಚುತಪ್ಪದೆ ಪಾಲಿಸುವಂತೆ ಸೂಚಿಸಿದರು.



## ಆರತಿ ಎತ್ತಿ ಸ್ವಾಗತ

ಸೋಂಕು ಹರಡುವಿಕೆ ಹಿನ್ನೆಲೆ ಹಲವು ತಿಂಗಳುಗಳ ಕಾಲ ಶಾಲಾ ಕಾಲೇಜುಗಳನ್ನು ಮುಚ್ಚಲಾಗಿತ್ತು. ಇದೀಗ ಹೊಸ ವರ್ಷದಂದು ಶಾಲಾ ಕಾಲೇಜುಗಳು ಪ್ರಾರಂಭಗೊಂಡಿದ್ದು, ಕೆಲವೆಡೆ ಶಾಲಾ ಕಾಲೇಜಿನ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ಆರತಿ ಎತ್ತಿ ತರಗತಿಗೆ ಸ್ವಾಗತಿಸಿದರು.

ಜನದನಿಯ ಸಾರಥಿ
ವಾರ್ತಾ ಭಾರತಿ


ಜನದನಿಯ ಸಾರಥಿ
ವಾರ್ತಾ ಭಾರತಿ

# ಹತ್ತು ತಿಂಗಳ ಬಳಿಕ ಶಾಲೆ ಆರಂಭ

## ಶಾಲೆಯತ್ತ ಲವಲವಿಕೆಯಿಂದ ಹೆಜ್ಜೆ ಹಾಕಿದ ವಿದ್ಯಾರ್ಥಿಗಳು



ಚಿಕ್ಕಮಗಳೂರಿನಲ್ಲಿ ಶುಕ್ರವಾರ ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳ ಸ್ಕ್ರೀನಿಂಗ್ ನಡೆಸಲಾಯಿತು.



ಬೆಂಗಳೂರಿನಲ್ಲಿ ಪಿಯು ಕಾಲೇಜೊಂದರ ತರಗತಿಯಲ್ಲಿ ಶುಕ್ರವಾರ ವಿದ್ಯಾರ್ಥಿಗಳ ವಿರಳ ಹಾಜರಾತಿ ಕಂಡುಬಂತು.

ಬೆಂಗಳೂರು, ಜ.1: ಕೋವಿಡ್ ಲಾಕ್‌ಡೌನ್‌ನಿಂದಾಗಿ ಕಳೆದ 10 ತಿಂಗಳಿನಿಂದ ಮುಚ್ಚಲ್ಪಟ್ಟಿದ್ದ ಶಾಲೆಗಳು ಜ.1ರಂದು ಹೂವಿನ ಅಲಂಕಾರ, ರಂಗೋಲಿಯಿಂದ ಸಿಂಗಾರಗೊಂಡಿದ್ದವು. ವಿದ್ಯಾರ್ಥಿಗಳು ಪೋಷಕರೊಂದಿಗೆ ತಮ್ಮ ತಮ್ಮ ಶಾಲೆಗಳತ್ತ ಲವಲವಿಕೆಯಿಂದ ಹೆಜ್ಜೆ ಹಾಕುತ್ತಿದ್ದ ದೃಶ್ಯಗಳು ರಾಜ್ಯದೆಲ್ಲೆಡೆ ಸಾಮಾನ್ಯವಾಗಿತ್ತು.

ಬೆಂಗಳೂರು, ಮೈಸೂರು, ತುಮಕೂರು, ಮಂಡ್ಯ, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಹಾಗೂ ಕರಾವಳಿ ಭಾಗ ಸೇರಿದಂತೆ ರಾಜ್ಯದೆಲ್ಲೆಡೆ ಶಾಲೆಗಳನ್ನು ಕೋವಿಡ್ ಮಾರ್ಗಸೂಚಿಯಂತೆ ಸ್ಯಾನಿಟೈಸ್ ಮಾಡಲಾಗಿತ್ತು. ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳು ಕುಳಿತುಕೊಳ್ಳುವ ಮೇಜುಗಳನ್ನು ಸುರಕ್ಷಿತ ಅಂತರವನ್ನು ಕಾಯ್ದುಕೊಳ್ಳಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿತ್ತು.

ಮಕ್ಕಳು ಮಾಸ್ಕ್ ಹಾಕಿಕೊಂಡು, ಪೋಷಕರ ಅನುಮತಿ ಪತ್ರದೊಂದಿಗೆ ಲವಲವಿಕೆಯಿಂದ ಶಾಲೆಗೆ ಹಾಜರಾಗಿದ್ದಾರೆ. ರಾಜ್ಯದ ಬಹುತೇಕ ಎಲ್ಲ ಶಾಲೆಗಳಲ್ಲಿ ಮಕ್ಕಳನ್ನು ಬರಮಾಡಿಕೊಳ್ಳಲು ಊರಿನ ಗಣ್ಯರು, ಶಾಲಾಭಿವೃದ್ಧಿ ಸಮಿತಿಯವರು ಮಾವು, ತೆಂಗಿನ ಗರಿ, ಬಾಳೆಕಂಬಗಳೊಂದಿಗೆ ತಳಿರು ತೋರಣ ಕಟ್ಟಿದ್ದು ವಿಶೇಷವಾಗಿತ್ತು. ಇಂದು ರಾಜ್ಯದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

6ನೇ ಪುಟಕ್ಕೆ

## ಶಾಲಾ ಆರಂಭಕ್ಕೆ ಜನತೆಯಿಂದ ಅದ್ದೂರಿ ಸ್ವಾಗತ ಸಿಕ್ಕಿದೆ

### ದ್ವಿತೀಯ ಪಿಯುಗೆ ಶೇ.32.56, ಎಸೆಸೆಲ್ಸಿಗೆ ಶೇ.41 ಹಾಜರಾತಿ

### ಸುರೇಶ್‌ಕುಮಾರ್



ಬೆಂಗಳೂರು, ಜ.1: ಶಾಲೆ ಪ್ರಾರಂಭವಾದ ಮೊದಲ ದಿನ ರಾಜ್ಯದೆಲ್ಲೆಡೆ ಶಾಲಾ ಪರಿಸರದಲ್ಲಿ ಮಕ್ಕಳ ಕಲರವ ಕೇಳಿ ಬಂದಿದ್ದು, ಮಕ್ಕಳು ಮತ್ತು ಪೋಷಕರಲ್ಲಿ ಸಂಭ್ರಮ ಮನೆ ಮಾಡಿದೆ ಎಂದು ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಸಂತಸ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ ಶಾಲೆ ಪ್ರಾರಂಭವಾದ ಮೊದಲ ದಿನ ಆನೇಕಲ್ ತಾಲೂಕಿನ ಸುತ್ತಮುತ್ತಲ ಪ್ರದೇಶದಲ್ಲಿರುವ ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯದಲ್ಲಿ ಕೊರೋನ ಓಡಿಸೋಣ... ನಮ್ಮ ಮಕ್ಕಳನ್ನು ಸುರಕ್ಷಿತ ವಾತಾವರಣದಲ್ಲಿ ಓದಿಸೋಣ... ಎಂಬ ಧ್ಯೇಯವಾಕ್ಯದೊಂದಿಗೆ ಶಾಲೆಗಳು ಆರಂಭವಾಗಿರುವುದಕ್ಕೆ ರಾಜ್ಯದೆಲ್ಲೆಡೆಯಿಂದ ಅದ್ದೂರಿ ಸ್ವಾಗತ ಸಿಕ್ಕಿದೆ ಎಂದು ತಿಳಿಸಿದರು.

ರಾಜ್ಯದಲ್ಲಿರುವ 5,492 ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾಗಿರುವ 2,41,965 ವಿದ್ಯಾರ್ಥಿಗಳಲ್ಲಿ78,794(ಶೇ.32.56) ಹಾಜರಾಗಿದ್ದಾರೆ ಹಾಗೂ 16,850 ಪ್ರೌಢಶಾಲೆಗಳಲ್ಲಿ 10ನೇ ತರಗತಿಗೆ ದಾಖಲಾಗಿರುವ 9,27,472 ವಿದ್ಯಾರ್ಥಿಗಳಲ್ಲಿ 3,80,264(ಶೇ.41) ವಿದ್ಯಾರ್ಥಿಗಳು ಹಾಜರಾಗಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಎಲ್ಲರ ಸಹಕಾರದಿಂದ ಶಾಲೆಗಳು ಆರಂಭ: ಇಲಾಖೆಯ ಹಿರಿಯ ಅಧಿಕಾರಿಗಳು, ಜಿಲ್ಲಾಡಳಿತಗಳು, ಜನಪ್ರತಿನಿಧಿಗಳು ಎಲ್ಲರೂ ಒಗ್ಗಟ್ಟಾಗಿ ನಮ್ಮ ಮಕ್ಕಳ ಭವಿಷ್ಯಕ್ಕೆ ಒಂದು ರೀತಿಯ ಕಾಯಕಲ್ಪವನ್ನು ದೊರಕಿಸಿಕೊಟ್ಟಿದ್ದಾರೆ. ರಾಜ್ಯದ ಎಲ್ಲ ಜನಪ್ರತಿನಿಧಿಗಳು ಸಹಕರಿಸಿದ್ದಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

10ನೇ ತರಗತಿ ಮತ್ತು ದ್ವಿತೀಯ ಪಿಯು ತರಗತಿಗಳು ಬೆಳಗ್ಗೆಆರಂಭವಾದರೆ, ಪ್ರಾಥಮಿಕಮತ್ತುಪ್ರೌಢಶಾಲೆಗಳಲ್ಲಿ ಬೆಳಗ್ಗೆ ಮತ್ತು ಮಧ್ಯಾಹ್ನದ ಪಾಳಿಗಳಲ್ಲಿ 6ರಿಂದ 9ನೇ ತರಗತಿಗಳ ವಿದ್ಯಾಗಮ ತರಗತಿಗಳು ಶಾಲಾವರಣದಲ್ಲಿ ಪುಟ್ಟಪುಟ್ಟ ತಂಡಗಳಲ್ಲಿ ಆರಂಭಗೊಂಡವು. ಹಲವಾರು ಕಡೆಗಳಲ್ಲಿ ಕೆಲವು ಮಕ್ಕಳು ತಮ್ಮದೇ ಆದ ಸ್ಯಾನಿಟೈಸ್ ಬಾಟಲಿಗಳನ್ನು ಜೊತೆಗಿಟ್ಟುಕೊಂಡಿದ್ದರು. ಮಾಸ್ಕ್ ಮರೆತು ಬಂದ ಮಕ್ಕಳಿಗೆ ಶಾಲೆಯ ಶಿಕ್ಷಕರು ಮಾಸ್ಕ್‌ಗಳನ್ನು ನೀಡಿದ್ದಾರೆಂದು ಅವರು ಶ್ಲಾಘನೆ ವ್ಯಕ್ತಪಡಿಸಿದರು.

6ನೇ ಪುಟಕ್ಕೆ

ಮಕ್ಕಳಿದ್ದರೆ ಮಾತ್ರ ಶಾಲೆ. ಹೀಗಾಗಿ ಕಳೆದ 9-10 ತಿಂಗಳಿನಿಂದ ವಿದ್ಯಾರ್ಥಿಗಳ ಮುಖ ನೋಡದೆ ಬೇಸರವಾಗಿತ್ತು. ಶುಕ್ರವಾರದಿಂದ ಶಾಲೆ ಆರಂಭವಾಗಿದೆ. ವಿದ್ಯಾರ್ಥಿಗಳನ್ನು ನೋಡಿ ಖುಷಿ ಆಗಿದೆ ಹಾಗೂ ಮಕ್ಕಳಿಗೆ ಶಾಲೆಯಲ್ಲಿ ಸುರಕ್ಷಿತ ವಾತಾವರಣ ಕಲ್ಪಿಸುವುದು ಶಿಕ್ಷಕರ ಜವಾಬ್ದಾರಿಯಾಗಿದೆ. ಇದರಿಂದ ಭಯಪಟ್ಟು ಮನೆಯಲ್ಲಿಯೇ ಇರುವ ವಿದ್ಯಾರ್ಥಿಗಳಿಗೂ ಶಾಲೆಗೆ ಬರಲು ಪ್ರೇರಣೆ ದೊರೆತಂತಾಗುತ್ತದೆ.

■ ಉಮೇಶ್, ಸರಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ ಶಿಕ್ಷಕ, ಆನೇಕಲ್

ನಮಗೆ ಓದುವುದಕ್ಕೆ ಬರುವುದಿಲ್ಲ. ನಮ್ಮ ಮಕ್ಕಳನ್ನು ಓದಿಕೊಳ್ಳಿ ಎಂದರೆ ಅವರು ಕೇಳುವುದಿಲ್ಲ. ಓದುವುದನ್ನೇ ಮರೆತುಬಿಟ್ಟಿದ್ದಾರೆ. ಹೀಗಾಗಿ ಶಾಲೆ ಆರಂಭವಾಗಿರುವುದು ನನಗಂತೂ ತುಂಬ ಖುಷಿಯಾಗಿದೆ.

■ ಸರೋಜಮ್ಮ, ಪೋಷಕರು

ಕಳೆದ ಹತ್ತು ತಿಂಗಳಿನಿಂದ ಶಾಲೆಗಳು ಬಂದ್ ಆಗಿದ್ದರಿಂದ ಶಾಲೆಯ ಆವರಣದಲ್ಲಿ ಗಿಡಗಂಟಿಗಳು ಬೆಳೆದು, ಹಾವು, ಚೇಳುಗಳ ವಾಸಸ್ಥಾನವಾಗಿ ಪರಿವರ್ತನೆಯಾಗಿದೆ. ಶಾಲೆಗಳನ್ನು ನೋಡಿದರೆ ತುಂಬ ಬೇಸರವಾಗುತ್ತಿತ್ತು. ಈಗಲಾದರೂ ಶಾಲೆಗಳು ಪ್ರಾರಂಭವಾಗುತ್ತಿರುವುದು ತುಂಬ ಖುಷಿ ತರಿಸಿದೆ.

■ ಶಂಕರ್, ಪೋಷಕ

ಶಾಲೆಯಿಲ್ಲದೆ ಮನೆಯಲ್ಲಿ ಕೂತು ಬೇಸರ ಆಗಿತ್ತು. ಫ್ರೆಂಡ್ಸ್‌ಗಳನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ ಹಾಗೂ ಆನ್‌ಲೈನ್ ತರಗತಿಗಳು ಸರಿಯಾಗಿ ಅರ್ಥ ಆಗುತ್ತಿರಲಿಲ್ಲ. ಡೌಟ್ಸ್‌ಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಶಾಲೆ ಆರಂಭವಾಗಿರುವುದು ನನಗೆ ಸಂತೋಷವಾಗಿದೆ.

■ ಮಮತಾ, ಎಸೆಸೆಲ್ಸಿ ವಿದ್ಯಾರ್ಥಿನಿ

## ಮಕ್ಕಳ ಸುರಕ್ಷತೆಗೆ ಎಲ್ಲ ಸಿದ್ಧತೆ: ಯಡಿಯೂರಪ್ಪ

ಬೆಂಗಳೂರು, ಜ.1: ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು. ಮಕ್ಕಳ ಶೈಕ್ಷಣಿಕ ಪ್ರಗತಿಯ ಹಿತದೃಷ್ಟಿಯಿಂದ ಜ.1ರಿಂದ 10 ಮತ್ತು 12ನೇ ತರಗತಿಗಳು ಆರಂಭವಾಗಿದ್ದು, 6ರಿಂದ 9ನೇ ತರಗತಿಗಳಿಗೆ ವಿದ್ಯಾಗಮ ಪುನರಾರಂಭಗೊಂಡಿದೆ. ಮಕ್ಕಳ ಸುರಕ್ಷತೆಗೆ ಎಲ್ಲ ಸಿದ್ಧತೆ ನಡೆಸಿದ್ದು, ಕಡ್ಡಾಯ ಮಾಸ್ಕ್ ಧರಿಸಿ, ಸುರಕ್ಷಿತ ಅಂತರ, ಸ್ವಚ್ಛತೆ ಪಾಲಿಸಿ ಸರಕಾರದೊಂದಿಗೆ ಸಹಕರಿಸಿ ಎಂದು ಸಿಎಂ ಬಿ.ಎಸ್. ಯಡಿಯೂರಪ್ಪ ಟ್ವೀಟ್ ಮಾಡಿದ್ದಾರೆ.

## ಕೊರೋನ ಓಡಿಸೋಣ ಮಕ್ಕಳನ್ನು ಸುರಕ್ಷಿತವಾಗಿ ಓದಿಸೋಣ: ಸುಧಾಕರ್

ಬೆಂಗಳೂರು, ಜ.1: ಇಂದಿನಿಂದ 10ನೇ ತರಗತಿ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಆರಂಭವಾಗುತ್ತಿವೆ. ಮಕ್ಕಳ ಆರೋಗ್ಯ ಮತ್ತು ಶೈಕ್ಷಣಿಕ ಪ್ರಗತಿ ಎರಡನ್ನೂ ಗಮನದಲ್ಲಿಟ್ಟುಕೊಂಡು ಸರಕಾರ ಬಹಳ ಎಚ್ಚರಿಕೆ ಮತ್ತು ಜವಾಬ್ದಾರಿಯಿಂದ ಈ ನಿರ್ಧಾರ ಕೈಗೊಂಡಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 8 ತಿಂಗಳ ನಂತರ ಶಾಲಾ ಕಾಲೇಜುಗಳಿಗೆ ಮರಳುತ್ತಿರುವ ವಿದ್ಯಾರ್ಥಿಗಳಿಗೆ, ಅವರ ಪೋಷಕರಿಗೆ ನನ್ನ ಕಿವಿಮಾತು. ಎಸೆಸೆಲ್ಸಿ ಪರೀಕ್ಷೆ ಸಂದರ್ಭದಲ್ಲೂ ಇದೇ ರೀತಿ ಆತಂಕ ಇದ್ದದ್ದು ಸಹಜ. ಆದರೆ ಅತ್ಯಂತ ಯಶಸ್ವಿಯಾಗಿ ಪರೀಕ್ಷೆ ನಡೆಸುವ ಮೂಲಕ ಸರಕಾರ ತನ್ನ ಬದ್ಧತೆ ನಿರೂಪಿಸಿತ್ತು ಎಂದರು. ಈಗಲೂ ಸಹ ಮಕ್ಕಳ ಹಿತದೃಷ್ಟಿಯಿಂದ ಶಿಕ್ಷಣ ಇಲಾಖೆ ಸಕಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. 'ಕೊರೋನ ಓಡಿಸೋಣ ಮಕ್ಕಳನ್ನು ಸುರಕ್ಷಿತವಾಗಿ ಓದಿಸೋಣ' ಎಂಬುದೇ ಸರಕಾರದ ಧ್ಯೇಯ. ಪೋಷಕರಲ್ಲಿ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದ ಪೋಷಕರಲ್ಲಿ ನನ್ನ ಮನವಿ. ಮಕ್ಕಳನ್ನು ಯಾವುದೇ ಆತಂಕವಿಲ್ಲದೆ ಶಾಲೆಗೆ ಕಳುಹಿಸಿ. ಮಕ್ಕಳ ಆಗಮನಕ್ಕೆ ಅವರ ಶಾಲೆ ಕಾಯುತ್ತಿದೆ, ಶಿಕ್ಷಕರು ಮಕ್ಕಳನ್ನು ಸ್ವಾಗತಿಸಲು ಎದುರು ನೋಡುತ್ತಿದ್ದಾರೆ. ಸರಕಾರ ಸದಾ ನಿಮ್ಮೊಂದಿಗಿದೆ. ಬನ್ನಿ, ಕೊರೋನ ಓಡಿಸೋಣ, ಮಕ್ಕಳನ್ನು ಸುರಕ್ಷಿತವಾಗಿ ಓದಿಸೋಣ ಎಂದು ಅವರು ಕರೆ ನೀಡಿದರು.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ರಾಜ್ಯದಲ್ಲಿ 877 ಕೊರೋನ ಪ್ರಕರಣ ದೃಢ

## 6 ಮಂದಿ ಸಾವು, 1,084 ಜನ ಗುಣಮುಖ



ಬೆಂಗಳೂರು, ಜ.1: ರಾಜ್ಯದಲ್ಲಿ ಶುಕ್ರವಾರ 877 ಹೊಸ ಕೊರೋನ ಪ್ರಕರಣಗಳು ದೃಢವಾಗಿವೆ. 6 ಜನರು ಸೋಂಕಿಗೆ ಬಲಿಯಾಗಿದ್ದು, 1,084 ಜನರು ಗುಣಮುಖರಾಗಿದ್ದಾರೆ.

ರಾಜ್ಯದಲ್ಲಿ ಈಗಾಗಲೇ ಒಟ್ಟು ಸೋಂಕಿತರ ಸಂಖ್ಯೆ 9,20,373ಕ್ಕೆ ತಲುಪಿದ್ದು, 189 ಜನ ಸೋಂಕಿತರು ಐಸಿಯುನಲ್ಲಿದ್ದಾರೆ. ಇಲ್ಲಿಯವರೆಗೆ ಒಟ್ಟು ಸಾವಿನ ಸಂಖ್ಯೆ 12,096ಕ್ಕೆ ತಲುಪಿದೆ. ಒಟ್ಟು ಸಕ್ರಿಯ ಕೊರೋನ ಪ್ರಕರಣ ಸಂಖ್ಯೆ 11,058ಕ್ಕೆ ಏರಿಕೆಯಾಗಿದ್ದು, ಸೋಂಕಿತರೆಲ್ಲ ಆಸ್ಪತ್ರೆ, ಕೊರೋನ ಕೇರ್ ಸೆಂಟರ್ ಹಾಗೂ ಮನೆಗಳಲ್ಲಿ ಚಿಕಿತ್ಸೆ ಮತ್ತು ಆರೈಕೆಯಲ್ಲಿದ್ದಾರೆ.

**6 ಸೋಂಕಿತರು ಬಲಿ:** ಬೆಂಗಳೂರು ನಗರ 4, ಚಿಕ್ಕಬಳ್ಳಾಪುರ 1, ರಾಮನಗರ ಜಿಲ್ಲೆಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ.

**ಎಲ್ಲೆಲ್ಲಿ ಎಷ್ಟು:** ರಾಜ್ಯದಲ್ಲಿ ಹೊಸದಾಗಿ 877 ಪ್ರಕರಣಗಳು ದೃಢವಾಗಿದ್ದು, ಅದರಲ್ಲಿ ಬಾಗಲಕೋಟೆ 16, ಬಳ್ಳಾರಿ 4, ಬೆಳಗಾವಿ 14, ಬೆಂಗಳೂರು ಗ್ರಾಮಾಂತರ 28, ಬೆಂಗಳೂರು ನಗರ 464, ಬೀದರ್ 6, ಚಾಮರಾಜನಗರ 12, ಚಿಕ್ಕಬಳ್ಳಾಪುರ 29, ಚಿಕ್ಕಮಗಳೂರು 8, ಚಿತ್ರದುರ್ಗ 39, ದಕ್ಷಿಣ ಕನ್ನಡ 27, ದಾವಣಗೆರೆ 10, ಧಾರವಾಡ 5, ಹಾಸನ 20, ಕಲಬುರಗಿ 11, ಕೊಡಗು 7, ಕೋಲಾರ 14, ಮಂಡ್ಯ 13, ಮೈಸೂರು 26, ಶಿವಮೊಗ್ಗ 20, ತುಮಕೂರು 32, ಉಡುಪಿ 14, ಉತ್ತರ ಕನ್ನಡ 16, ವಿಜಯಪುರ 19, ಯಾದಗಿರಿ ಜಿಲ್ಲೆಯಲ್ಲಿ 6 ಪ್ರಕರಣ ಪತ್ತೆಯಾಗಿವೆ.

### ರಾಜಧಾನಿಯಲ್ಲಿ 464 ಕೊರೋನ ಪ್ರಕರಣ ದೃಢ

ರಾಜಧಾನಿಯಲ್ಲಿ ಶುಕ್ರವಾರ 464 ಜನರಿಗೆ ಕೊರೋನ ಸೋಂಕು ದೃಢಪಟ್ಟಿದೆ. 608 ಸೋಂಕಿತರು ಬಿಡುಗಡೆಯಾಗಿದ್ದು, 4 ಜನರು ಮೃತರಾಗಿದ್ದಾರೆ.

ನಗರದಲ್ಲಿ ಇಲ್ಲಿಯವರೆಗೆ ಒಟ್ಟು 3,88,850 ಕೊರೋನ ಸೋಂಕಿತರು ದೃಢಪಟ್ಟಿದ್ದು, 4,321 ಜನರು ಸೋಂಕಿಗೆ ಬಲಿಯಾಗಿದ್ದಾರೆ. 3,77,443 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಕೋವಿಡ್ ನಿಗದಿತ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳಲ್ಲಿ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ.

Bengaluru Edition
Jan 2, 2021 Page No.2

ಜನದನಿಯ ಸಾರಥಿ
ವಾರ್ತಾ ಭಾರತಿ

ವಾರ್ತಾ ಭಾರತಿ

# ರೂಪಾಂತರಿತ ಕೊರೋನ ಸೋಂಕಿತರು ಆಸ್ಪತ್ರೆಗೆ ದಾಖಲು

ಯುಕೆಯಿಂದ ಬೆಂಗಳೂರಿಗೆ ಆಗಮಿಸಿದ ಪ್ರಯಾಣಿಕರ ಪೈಕಿ ಶುಕ್ರವಾರ ಮೂವರಲ್ಲಿ ರೂಪಾಂತರಿತ ಕೊರೋನ ಸೋಂಕು ಕಾಣಿಸಿಕೊಂಡಿದ್ದು, ಅವರನ್ನು ನಗರದ ಆಸ್ಪತ್ರೆಗಳಲ್ಲಿ ದಾಖಲು ಮಾಡಿಕೊಳ್ಳಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಶುಕ್ರವಾರ ಈ ಕುರಿತು ಪ್ರಕಟನೆ ಹೊರಡಿಸಿರುವ ಪಾಲಿಕೆ ಆರೋಗ್ಯಾಧಿಕಾರಿ, ಇದುವರೆಗೂ ಯುಕೆಯಿಂದ ಬೆಂಗಳೂರಿಗೆ ಆಗಮಿಸಿದ 20 ಪ್ರಯಾಣಿಕರಲ್ಲಿ ಕೋವಿಡ್-19 ಸೋಂಕು ದೃಢಪಟ್ಟಿದ್ದು, ಮೂವರಲ್ಲಿ ರೂಪಾಂತರಿತ ಕೊರೋನ ಸೋಂಕು ಖಚಿತವಾಗಿದೆ.

ಈ ಪೈಕಿ ಇಬ್ಬರನ್ನು ಕೆಸಿ ಜನರಲ್ ಆಸ್ಪತ್ರೆಗೆ ದಾಖಲಿಸಿದರೆ, ಮತ್ತೋರ್ವರು ವಿಕ್ಟೋರಿಯಾ ಆಸ್ಪ ತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನು, ಒಬ್ಬ ವ್ಯಕ್ತಿ ಪ್ರಾಥಮಿಕ ಸಂಪರ್ಕ ಹೊಂದಿದ್ದಾನೆ ಎಂದು ಅವರು ಹೇಳಿದ್ದಾರೆ.

Bengaluru Edition
Jan 2, 2021 Page No.2

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ರಾಜಧಾನಿ ಬೆಂಗಳೂರಿನಲ್ಲಿ ಜನವರಿಯಲ್ಲಿಯೇ ಲಸಿಕೆ



ಗೌರವ್ ಗುಪ್ತ

ಬೆಂಗಳೂರು, ಜ.1: ರಾಜಧಾನಿ ಬೆಂಗಳೂರಿನಲ್ಲಿ ಕೋವಿಡ್-19 ಸಂಬಂಧ ಇದೇ ತಿಂಗಳ ಅಂತ್ಯದಲ್ಲಿ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಲಸಿಕೆ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಹೇಳಿದ್ದಾರೆ.

ಶುಕ್ರವಾರ ನಗರದ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೊರೋನ ಸೋಂಕು ಸಂಬಂಧ ಲಸಿಕೆ ನೀಡುವ ಪ್ರಕ್ರಿಯೆ ಜನವರಿ ಮಾಸದಲ್ಲಿ ಹಂತ ಹಂತವಾಗಿ ನಡೆಯಲಿದ್ದು, ಮೊದಲ ಹಂತದಲ್ಲಿ ಆರೋಗ್ಯ ಸೇರಿದಂತೆ ಮುಂಚೂಣಿಯಲ್ಲಿರುವ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತದೆ ಎಂದು ತಿಳಿಸಿದರು.

ಎರಡು ತಾಸು ಲಸಿಕೆ ತಾಲೀಮು ನಡೆಯಲಿದ್ದು, ಪ್ರತಿ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ 25 ಮಂದಿ ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ. ತಾಲೀಮು ನಡೆಸಿರುವ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಲಾಗುತ್ತದೆ. ಹಾಗೆಯೇ, ಲಸಿಕೆ ನೀಡಲು ನಗರದಲ್ಲಿ ಒಟ್ಟು 1,517 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದೆ ಎಂದು ಆಡಳಿತಾಧಿಕಾರಿ ನುಡಿದರು.

**ಇಂದಿನಿಂದ ಚಾಲನೆ:** ದೇಶದಲ್ಲಿ ಲಸಿಕೆ ವಿತರಣೆ ಮಾಡುವ ಸಂಬಂಧ ಇಂದಿನಿಂದ(ಜ.2) ಎಲ್ಲ ರಾಜ್ಯಗಳಲ್ಲಿಯೂ ಕೊರೋನ ನಿಯಂತ್ರಣ ಲಸಿಕೆಯ ತಾಲೀಮು(ಡ್ರೈರನ್) ನಡೆಯಲಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಲಸಿಕೆ ತಾಲೀಮು ನಡೆಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿ, ಸಿಬ್ಬಂದಿಗೆ ಶನಿವಾರ ತರಬೇತಿ ಕಾರ್ಯ ನಡೆಯಲಿದೆ. ವಿದ್ಯಾಪೀಠದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ, ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ ಹಾಗೂ ಬೆಂಗಳೂರು ನಗರ ಗ್ರಾಮಾಂತರ ಆನೇಕಲ್ ಭಾಗದ ಹರ್ಗಾದೆಯಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ತಾಲೀಮು ನಡೆಸಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಮಾಹಿತಿ ನೀಡಿದರು.

ಸಂಜೆವಾಣಿ
1982

# ನಗರದಲ್ಲೂ ನಾಳೆ ಲಸಿಕೆ ನೀಡಿಕೆ ಪೂರ್ವಾಭ್ಯಾಸ

ಬೆಂಗಳೂರು, ಜ.1– ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಕೋವಿಡ್–19 ವಾಕ್ಸಿನ್ ಹಂಚಿಕೆ ಪ್ರಕ್ರಿಯೆ ಮತ್ತಷ್ಟು ಚುರುಕುಗೊಂಡಿ- ದ್ದು, ಈ ಸಂಬಂಧ ಬಿಬಿಎಂಪಿ ವ್ಯಾಪ್ತಿಯಲ್ಲಿ ನಾಳೆಯೇ (ಜ.2) ಲಸಿಕೆಯ ಪೂರ್ವಾಭ್ಯಾಸಕ್ಕೆ (ಡ್ರೈರನ್) 75 ಕೊರೋನಾ ವಾರಿಯರ್ಸ್ ಒಳಪಡಲಿದ್ದಾರೆ.

ಡ್ರೈ ರನ್ ಎಂದರೆ ಕೊರೋನಾ ಲಸಿಕೆಯನ್ನು ನೀಡುವುದು ಸೇರಿದಂತೆ ಇಡೀ ಪ್ರಕ್ರಿಯೆ ಹೇಗೆ ನಡೆಯುತ್ತೆ ಎನ್ನುವುದನ್ನು ಪರಿಶೀಲನೆನಡೆಸುವ ಪೂರ್ವ ಪರೀಕ್ಷೆಯಾಗಿದೆ. ಇನ್ನು ಈ ಸಂದರ್ಭದಲ್ಲಿ ಲಸಿಕೆ ಹಾಕುವ ಸಿಬ್ಬಂದಿಗೆ ವಿಶೇಷ ತರಬೇತಿಯೂ ನೀಡಲಾಗುತ್ತದೆ.

ನಗರದಲ್ಲಿಂದು ಈ ಕುರಿತು ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಪಾಲಿಕೆ ಆಯುಕ್ತ ಗೌರವ್ ಗುಪ್ತ, ಕೇಂದ್ರ ಸರ್ಕಾರದ ಆದೇಶದ ಅನುಸಾರ ದೇಶದಾದ್ಯಂತ ಜ.2ರಿಂದ ಪೂರ್ವಾಭ್ಯಾಸ ನಡೆಯಲಿದ್ದು, ಅದರಲ್ಲೂ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಕಾಮಾಕ್ಷಿಪಾಳ್ಯ, ವಿದ್ಯಾಪೀಠ ಸೇರಿದಂತೆ ಮೂರು ಲಸಿಕಾ ಸತ್ರಗಳಲ್ಲಿ ಪೂರ್ವಾಭ್ಯಾಸವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಮೊದಲ ಹಂತದಲ್ಲಿ ಆರೋಗ್ಯ ಸೇರಿದಂತೆ ಮುಂಚೂಣಿಯಲ್ಲಿರುವ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತದೆ. ಪೂರ್ವಾಭ್ಯಾಸವು ಪೋರ್ಟಲ್ ನಿರ್ವಹಣೆ ಸೇರಿದಂತೆ ಲಸಿಕೆ ವಿತರಣೆಗೆ ಸಂಬಂಧಿಸಿದ ವಿವಿಧ ಪ್ರಕ್ರಿಯೆಗಳನ್ನು ಪರೀಕ್ಷಿಸಲಾಗುವುದು ಎಂದು ಮಾಹಿತಿ ನೀಡಿದರು.

ಫಲಾನುಭವಿಗಳ ಮಾಹಿತಿಯನ್ನು ಈ ವೇಳೆ ದಾಖಲಿಸಲಾಗುತ್ತದೆ ಎಂದ ಅವರು,

ಲಸಿಕಾ ಸತ್ರಗಳಲ್ಲಿ ದಾಖಲಾತಿಗಳ ಪರಿಶೀಲನೆ ಸೇರಿದಂತೆ ವಿವಿಧ ಪ್ರಕ್ರಿಯೆಗಳ ಬಗ್ಗೆ ಕೂಡ ತಿಳಿಸಿಕೊಡಲಾಗುತ್ತದೆ. ಲಸಿಕೆ ವಿತರಣೆ ವೇಳೆ ಉಂಟಾಗಬಹುದಾದ ಸವಾಲುಗಳನ್ನು ಗುರುತಿಸಿ, ಕೇಂದ್ರ ಸರ್ಕಾರಕ್ಕೆ ವರದಿ ನೀಡಲಾಗುತ್ತದೆ ಎಂದು ವಿವರಿಸಿದರು.



### ಜನವರಿ ಅಂತ್ಯ, ಫೆಬ್ರವರಿ ಮೊದಲ ವಾರದಲ್ಲಿ ಲಸಿಕೆ ..!

ಜನವರಿ ಅಂತ್ಯ, ಫೆಬ್ರವರಿ ಮೊದಲ ವಾರದಲ್ಲಿ ಲಸಿಕೆ ನೀಡುವ ಕಾರ್ಯ ಪ್ರಾರಂಭಿಸಲು ಯೋಜಿಸಲಾಗಿದ್ದು, ಸದ್ಯ ಡ್ರೈ ರನ್ ಕುರಿತು ಎರಡು ತಾಸು ಲಸಿಕೆ ತಾಲೀಮು ನಡೆಯಲಿದೆ.

ಪ್ರತಿ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ 25 ಮಂದಿ ಆರೋಗ್ಯ ಕಾರ್ಯಕರ್ತರನ್ನು ಗುರುತಿಸಲಾಗಿದೆ. 3 ಸಾರ್ವಜನಿಕ ಆರೋಗ್ಯ ಕೇಂದ್ರಗಳಿಂದ 75 ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಸಲಾಗುತ್ತದೆ. ಲಸಿಕೆ ನೀಡಲು ನಗರದಲ್ಲಿ ಒಟ್ಟು 1,517 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದೆ.

**-ಗೌರವ್ ಗುಪ್ತ, ಬಿಬಿಎಂಪಿ ಆಡಳಿತಾಧಿಕಾರಿ**

ಬಿಬಿಎಂಪಿ ವ್ಯಾಪ್ತಿಯಲ್ಲಿ ಲಸಿಕೆ ಸಂಗ್ರಹ ಹಾಗೂ ವಿತರಣೆಗೆ ಈಗಾಗಲೇ ಸಿಬ್ಬಂದಿ ಹಾಗೂ ಕೇಂದ್ರಗಳನ್ನು ಗುರುತಿಸಲಾಗಿದೆ. ಎಷ್ಟು ಮಂದಿಗೆ ಲಸಿಕೆಯನ್ನು ಪ್ರಾಯೋಗಿಕವಾಗಿ ಮೊದಲು ನೀಡಲು ನಿರ್ಧರಿಸಲಾಗಿದ್ದು, ನಗರದಲ್ಲಿ ಶೀತಲೀಕರಣ ಘಟಕಗಳನ್ನು ಹೊಂದಲಾಗಿದೆ ಎಂದು ಗೌರವ್ ಗುಪ್ತ ಹೇಳಿದರು.

### ಡ್ರೈ ರನ್ ವೇಳೆ ಏನೆಲ್ಲಾ ಮಾಡಲಾಗುತ್ತೆ?

- ಪ್ಲಾನಿಂಗ್, ಅನುಷ್ಠಾನ ಮತ್ತು ವರದಿ ಮಾಡುವ ಕಾರ್ಯ
- ಲಸಿಕೆ ವಿತರಣೆಯನ್ನ ಮಾನಿಟರ್ ಮಾಡುವ ಕೋ-ವಿನ್ ಆನ್?ಲೈನ್ ಪ್ಲಾಟ್‌ಫಾರ್ಮ್‌ನಲ್ಲಿ ಮಾಹಿತಿ ಶೇಖರಣೆ
- ರಶೀದಿ ಪರೀಕ್ಷೆ ಮತ್ತು ತಂಡದ ಸದಸ್ಯರನ್ನು ನಿಯೋಜಿಸುವುದು
- ವ್ಯಾಕ್ಸಿನ್ ಪಡೆದುಕೊಂಡವರ ಜೊತೆ ಒಡನಾಟ ನಡೆಸುವುದು ಹೇಗೆ ಎಂಬ ಪರೀಕ್ಷೆ
- ಕೋಲ್ಡ್ ಸ್ಟೋರೇಜ್, ಟ್ರಾನ್ಸ್ ಪೋರ್ಟೇಶನ್ ಪರಿಶೀಲನೆ

### ಯಾರಿಗೆ ತರಬೇತಿ ?

- ವ್ಯಾಕ್ಸಿನ್ ನಿರ್ವಹಣೆ ಮತ್ತು ಮೇಲ್ವಿಚಾರಣಾಕಾರರಿಗೆ ತರಬೇತಿ
- ಆರೋಗ್ಯ ಅಧಿಕಾರಿಗಳು, ವ್ಯಾಕ್ಸಿನ್ ನೀಡುವವರು, ಕೋಲ್ಡ್ ಚೈನ್ ಹ್ಯಾಂಡಲರ್ಸ್, ಮೇಲ್ವಿಚಾರಕರು, ಡೇಟಾ ಮ್ಯಾನೇಜ್ ಮಾಡುವವರು, ಆಶಾ ಕಾರ್ಯಕರ್ತರುಮುಂತಾದವರಿಗೆತರಬೇತಿ ನೀಡಲಾಗಿದೆ.

ಸಂಜೆವಾಣಿ
1982

# ಬ್ರಿಟನ್‌ನಿಂದ ಬಂದ 75 ಪ್ರಯಾಣಿಕರ ಪತ್ತೆಗೆ ಕ್ರಮ

ಬೆಂಗಳೂರು, ಜ. 1– ಬ್ರಿಟನ್‌ನಿಂದ ರಾಜ್ಯಕ್ಕೆ ಬಂದಿರುವವರಲ್ಲಿ 75 ಪ್ರಯಾಣಿಕರು ಮಾತ್ರ ಪತ್ತೆಯಾಗಬೇಕಾಗಿದ್ದು, ಇವರ ಪತ್ತೆ ಮಾಡುವ ಕೆಲಸ ನಡೆದಿದ್ದು, ಇದುವರೆಗೂ 33 ಜನರಲ್ಲಿ ಕೋವಿಡ್ ದೃಢಪಟ್ಟಿದೆ. ಅದರಲ್ಲಿ 7 ಮಂದಿಗೆ ಮಾತ್ರ ರೂಪಾಂತರ ವೈರಸ್ ಇರುವುದು ಪತ್ತೆಯಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.



ಬ್ರಿಟನ್‌ನಿಂದ ಬಂದಿರುವವರಲ್ಲಿ 33 ಜನಕ್ಕೆ ಕೋವಿಡ್ ದೃಢಪಟ್ಟಿದ್ದು, ಇವರ ಸಂಪರ್ಕದಲ್ಲಿರುವ 5 ಮಂದಿಗೆ ಸೋಂಕು ದೃಢಪಟ್ಟಿದೆ. ಈ ಪೈಕಿ 7 ಜನರಲ್ಲಿ ಮಾತ್ರ ರೂಪಾಂತರ ವೈರಸ್ ಪತ್ತೆಯಾಗಿದೆ ಎಂದು ಅವರು ಹೇಳಿದರು.

ಸದಾಶಿವನಗರದ ತಮ್ಮ ನಿವಾಸದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನವೆಂಬರ್ 26 ರಿಂದ ಡಿಸೆಂಬರ್ 23 ರವರೆಗೆ ರಾಜ್ಯಕ್ಕೆ ಬ್ರಿಟನ್‌ನಿಂದ 5068 ಪ್ರಯಾಣಿಕರು ಆಗಮಿಸಿದ್ದು, ಇವರಲ್ಲಿ 810 ಪ್ರಯಾಣಿಕರು ಹೊರ ರಾಜ್ಯದವರು. ಇವರು ಬೆಂಗಳೂರಿನಲ್ಲಿ ಇಳಿದು ತಮ್ಮ ರಾಜ್ಯಗಳಿಗೆ ತೆರಳಿದ್ದಾರೆ. ಈ ಬಗ್ಗೆ ಆಯಾ ರಾಜ್ಯಗಳಿಗೆ ಮಾಹಿತಿ ನೀಡಲಾಗಿದೆ. ಉಳಿದ 5348 ಮಂದಿ ರಾಜ್ಯದವರಾಗಿದ್ದು, ಇವರಲ್ಲಿ 75 ಮಂದಿಯನ್ನು ಹೊರತುಪಡಿಸಿ ಉಳಿದವರನ್ನು ಪತ್ತೆಹಚ್ಚಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದರು.

ನಾಪತ್ತೆಯಾಗಿರುವ 75 ಜನರಲ್ಲಿ 70 ಮಂದಿ ಬಿಬಿಬಿಎಂಪಿ ವ್ಯಾಪ್ತಿಯವರಾಗಿದ್ದು, ಉಳಿದ 5 ಮಂದಿ ಬೇರೆ ಜಿಲ್ಲೆಗಳಿಗೆ ಸೇರಿದವರು. ಗೃಹ ಇಲಾಖೆಯ ಇವರನ್ನು ಪತ್ತೆಹಚ್ಚುವ ಕೆಲಸ ನಡೆಸಿದೆ ಎಂದು ಅವರು ಹೇಳಿದರು.

ಬ್ರಿಟನ್‌ನಿಂದ ಬಂದಿರುವ ಎಲ್ಲರನ್ನು ಪತ್ತೆಹಚ್ಚಿ ಅವರನ್ನು ಕೋವಿಡ್ ಪರೀ–ಕ್ಷೆಗೆ ಒಳಪಡಿಸಿ ರೂಪಾಂತರ ವೈರಸ್ ಇದಿಯೋ, ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದರು.

ಇದುವರೆಗೂ ಬ್ರಿಟನ್‌ನಿಂದ ಬಂದವರ ಪೈಕಿ 7 ಜನರಲ್ಲಿ ಮಾತ್ರ ರೂಪಾಂತರ ವೈರಸ್ ದೃಢಪಟ್ಟಿದೆ ಎಂದು ಅವರು ತಿಳಿಸಿದರು.

ನಾಳೆಯಿಂದ ರಾಜ್ಯದ ಬೆಂಗಳೂರು ನಗರ, ಮೈಸೂರು, ಬೆಳಗಾವಿ, ಕಲಬುರಗಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಕೊರೊನಾ ಲಸಿಕೆಯ ಅಣಕು ಕಾರ್ಯಾಚರಣೆ ನಡೆಯಲಿದ್ದು, ಇದಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಈ ಐದು ಜಿಲ್ಲೆಗಳ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಮತ್ತು ಜಿಲ್ಲಾಸ್ಪತ್ರೆಗಳಲ್ಲಿ ಈಗಾಗಲೇ ಹೆಸರು ನೋಂದಾವಣೆಗೊಂಡಿರುವ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡುವ ಅಣಕು ಕಾರ್ಯಾಚರಣೆ ನಡೆಯಲಿದೆ ಎಂದು ಅವರು ಹೇಳಿದರು.

ಹೊಸ ವರ್ಷದಲ್ಲಿ ಕೊರೊನಾ ಲಸಿಕೆ ಲಭ್ಯವಾಗಲಿದೆ. ಲಸಿಕೆ ಲಭ್ಯವಾದ ನಂತರ ಹಂತ ಹಂತವಾಗಿ ಎಲ್ಲರಿಗೂ ಲಸಿಕೆ ನೀಡಿ ಈ ವರ್ಷ ಕೊರೊನಾ ಮುಕ್ತ ವರ್ಷವನ್ನಾಗಿಸುವ ಕಾರ್ಯವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಡಲಿವೆ ಎಂದು ಅವರು ಹೇಳಿದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

## • ನಗರದಲ್ಲಿ 3 ಕಡೆ

# ಲಸಿಕೆ ಪಂಚಿಕೆ ತಾಲೀಮು

ಬೆಂಗಳೂರು,ಜ.1- ದೇಶದಲ್ಲಿ ಕೋವಿಡ್-19 ಲಸಿಕೆ ವಿತರಣೆ ಮಾಡುವ ಸಂಬಂಧ ಜನವರಿ 2 ರಂದು ಎಲ್ಲಾ ರಾಜ್ಯಗಳಲ್ಲಿಯೂ ಕೊರೋನಾ ನಿಯಂತ್ರಣ ಲಸಿಕೆಯ ತಾಲೀಮು(ಡ್ರೈರನ್) ನಡೆಯಲಿದೆ.

...ಪುಟ 2

## ತಾಲೀಮು

ಈ ಸಂಬಂಧ ಪಾಲಿಕೆ ವ್ಯಾಪ್ತಿಯಲ್ಲಿ ಲಸಿಕೆ ತಾಲೀಮು ನಡೆಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಬಿಬಿಎಂಪಿ ಆಡಳಿಧಿಕಾರಿ ಗೌರವ್ ಗುಪ್ತಾ ತಿಳಿಸಿದರು.

ಪಾಲಿಕೆ ವ್ಯಾಪ್ತಿಯ 2 ಬೆಂಗಳೂರು ನಗರ ಗ್ರಾಮಾಂತರ ಪ್ರದೇಶದ 1 ಕಡೆ ದಕ್ಷಿಣ ವಲಯದ ವಿದ್ಯಾಪೀಠದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ, ಪಶ್ಚಿಮ ವಲಯದ ಕಾಮಾಕ್ಷಿಪಾಳ್ಯದಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರ ಹಾಗೂ ಬೆಂಗಳೂರು ನಗರ ಗ್ರಾಮಾಂತರ ಭಾಗದ ಹರ್ಗಾದೆಯಲ್ಲಿರುವ ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ತಾಲೀಮು ನಡೆಸಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.

ಎರಡು ತಾಸು ಲಸಿಕೆ ತಾಲೀಮು ನಡೆಯಲಿದ್ದು, 1 ಸಾರ್ವಜನಿಕ ಆರೋಗ್ಯ ಕೇಂದ್ರದಲ್ಲಿ 25 ಮಂದಿ ಆರೋಗ್ಯ ಕಾರ್ಯಕರ್ತನ್ನು ಗುರುತಿಸಲಾಗಿದ್ದು, 3 ಸಾರ್ವಜನಿಕ ಆರೋಗ್ಯ ಕೇಂದ್ರಗಳಿಂದ 75 ಕಾರ್ಯಕರ್ತರಿಗೆ ಲಸಿಕೆ ತಾಲೀಮು ನಡೆಸಲಾಗುತ್ತದೆ.

ತಾಲೀಮು ನಡೆಸುವ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ವರದಿ ನೀಡಲಾಗುತ್ತದೆ. ನಗರದಲ್ಲಿ ಒಟ್ಟು 1,517 ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದ್ದು, ಜನವರಿ ಅಂತ್ಯದೊಳಗೆ ಅಧಿಕೃತವಾಗಿ ಲಸಿಕೆ ನೀಡುವ ಕಾರ್ಯ ಪ್ರಾರಂಭಿಸಲಾಗುತ್ತದೆ ಎಂದು ತಿಳಿಸಿದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಇನ್ನೂ 75 ಪ್ರಯಾಣಿಕರು ಪತ್ತೆಯಾಗಿಲ್ಲ

**ಬೆಂಗಳೂರು, ಜ.1-** ಬ್ರಿಟನ್‌ನಿಂದ ಆಗಮಿಸಿದವರಲ್ಲಿ ಇನ್ನು 75 ಪ್ರಯಾಣಿಕರು ಪತ್ತೆಯಾಗಿಲ್ಲ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಬಿಎಂಪಿ ವ್ಯಾಪ್ತಿಯಲ್ಲಿ 70 ಹಾಗೂ ಇತರೆ ಜಿಲ್ಲೆಗಳಿಗೆ ಸಂಬಂಧಿಸಿದ 5 ಜನರು ಸೇರಿದ್ದಾರೆ. ಪತ್ತೆಯಾಗದ ಇವರನ್ನು ಸಂಜೆ ವೇಳೆಗೆ ಪತ್ತೆ ಹಚ್ಚುವುದಾಗಿ ಗೃಹ ಇಲಾಖೆ ಭರವಸೆ ನೀಡಿದೆ ಎಂದರು.

ಯುಕೆಯಿಂದ ಬಂದ 33 ಪ್ರಯಾಣಿಕರ ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಪಾಸಿಟಿವ್ ಬಂದಿದೆ. ಇವರ ಸಂಪರ್ಕದಲ್ಲಿದ್ದ ಇತರೆ ಐದು ಜನರಿಗೂ ಪಾಸಿಟಿವ್ ಬಂದಿದ್ದು, ಒಟ್ಟು 38 ಜನರಲ್ಲಿ ಕೊರೊನಾ ಸೋಂಕು ಕಂಡುಬಂದಿದೆ. ಏಳು ಮಂದಿಯಲ್ಲಿ ರೂಪಾಂತರಗೊಂಡ ವೈರಾಣು ದೃಢಪಟ್ಟಿದೆ ಎಂದು ಹೇಳಿದರು.

ಬ್ರಿಟನ್‌ನಿಂದ ನ.25ರಿಂದ ನಿನ್ನೆಯವರೆಗೆ 5,068 ಜನರು ಬಂದಿದ್ದರು. ಅವರಲ್ಲಿ 4238 ಜನರು ಡಿಸೆಂಬರ್ 9ರಿಂದ ಬಂದಿದ್ದಾರೆ. ಈ ಪೈಕಿ 810 ಹೊರರಾಜ್ಯದವರಾಗಿದ್ದಾರೆ. ಹೊರರಾಜ್ಯದವರ ಪ್ರಯಾಣಿಕರ ಎಲ್ಲ ಮಾಹಿತಿಯನ್ನು ಆಯಾ ರಾಜ್ಯದವರೊಂದಿಗೆ ಹಂಚಿಕೊಳ್ಳಲಾಗಿದೆ ಎಂದು ತಿಳಿಸಿದರು.